ಸಂಪುಟ: 06 ಸಂಚಿಕೆ: 71 ಪುಟಗಳು: 08 ಸೋಮವಾರ 25 ಮೇ 2026
www.udayavahini.in epaper.udayavahini.in Udaya vahini news Udaya vahini news Udayavahini news youGÓ...qbe udayavahininews@gmail.
ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

**ಮುಂಜಾನೆ ಮಾತು**

ಕುತೂಹಲವೇ ನಮ್ಮ ಬುದ್ಧಿಗೆ ಮೂಲ.ಯಾವುದೇ ಸಂಗತಿಯನ್ನು ಒಪ್ಪಿಕೊಳ್ಳುವ ಮುನ್ನ ಪರಾಮರ್ಶಿಸುವ ರೂಢಿ ಬೆಳೆಸಿಕೊಳ್ಳೋಣ!

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಭಟ್ಕಳ ನದಿಯಲ್ಲಿ 9 ಮಂದಿ ಜಲಸಮಾಧಿ ಮೃತರ ಕುಟುಂಬಗಳಿಗೆ ತಲಾ 5 ಲಕ್ಷ ಪರಿಹಾರ ಘೋಷಿಸಿದ ಸಿಎಂ

• **ಉದಯವಾಹಿನಿ, ಬೆಂಗಳೂರು**

ಭಟ್ಕಳದ ತಟ್ಟೆ ಹಕ್ಕಲು ನದಿಯಲ್ಲಿ ಕಪ್ಪೆಚಿಪ್ಪು ತೆಗೆಯಲು ಹೋಗಿ ದುರ್ಮರಣಕ್ಕೀಡಾದ 8 ಮಂದಿ ಕುಟುಂಬಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಲಾ 5 ಲಕ್ಷ ರೂ. ಪರಿಹಾರ ಘೋಷಿಸಿದ್ದಾರೆ. ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ಸಮೀಪದ ತಟ್ಟೆಹಕ್ಕಲು ಕಡಲ ತೀರದಲ್ಲಿ ಕಪ್ಪೆಚಿಪ್ಪು ತರಲು ಹೋದವರ ಪೈಕಿ ಒಂದೇ ಕುಟುಂಬದ ಎಂಟು ಮಂದಿ ನೀರಿನಲ್ಲಿ ಮುಳುಗಿ ಸಾವಿಗೀಡಾಗಿದ ಸುದ್ದಿ ತಿಳಿದು ಸಂಕಟವಾಯಿತು. ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ಪ್ರಾರ್ಥಿಸುತ್ತೇನೆ. ಇದೊಂದು ಅತ್ಯಂತ ದುರದೃಷ್ಟಕರ ಮತ್ತು ನೋವಿನ ಘಟನೆ. ದುರಂತದಲ್ಲಿ ಮಡಿದವರ ಕುಟುಂಬಕ್ಕೆ ಮಾನವೀಯ ನೆಲೆಯಲ್ಲಿ ರಾಜ್ಯ ಸರ್ಕಾರದಿಂದ ತಲಾ 5 ಲಕ್ಷ ರೂಪಾಯಿ ಪರಿಹಾರ ನೀಡಲಾಗುವುದು ಎಂದು ತಿಳಿಸಿದ್ದಾರೆ.

ಇನ್ನೂ ಕೆಲವರು ಈ ದುರ್ಘಟನೆಯಲ್ಲಿ ಕಾಣೆಯಾಗಿರುವ ಮಾಹಿತಿಯಿದ್ದು, ಅವರಿಗಾಗಿ ತೀವ್ರ ಹುಡುಕಾಟ ನಡೆಸಲಾಗುತ್ತಿದೆ. ಕಾಣೆಯಾದವರು ಬದುಕಿಬಂದು ತಮ್ಮವರನ್ನು ಕೂಡಿಕೊಳ್ಳಲಿ ಎಂದು ನಾವೆಲ್ಲರೂ ದೇವರಲ್ಲಿ ಪ್ರಾರ್ಥಿಸೋಣ ಹೇಳಿದ್ದಾರೆ.

## ಎಬೋಲಾ ತಡೆಗೆ ರಾಜ್ಯ ಸರ್ಕಾರ ಸಜ್ಜು: ಆತಂಕ ಬೇಡ- ವದಂತಿಗಳಿಗೆ ಕಿವಿಗೊಡಬೇಡಿ; ಗುಂಡೂರಾವ್



• **ಉದಯವಾಹಿನಿ, ಬೆಂಗಳೂರು**

ಆಫ್ರಿಕಾ ದೇಶಗಳಲ್ಲಿ ಎಬೋಲಾ ಸೋಂಕು ಹರಡುತ್ತಿರುವ ಹಿನ್ನೆಲೆ ಕರ್ನಾಟಕದಲ್ಲಿ ಆತಂಕ ಪಡುವ ಅಗತ್ಯವಿಲ್ಲ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಜನರಿಗೆ ಭರವಸೆ ನೀಡಿದ್ದಾರೆ. ರಾಜ್ಯದಲ್ಲಿ ಎಲ್ಲಾ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗಿದ್ದು, ಪರಿಸ್ಥಿತಿಯನ್ನು ಆರೋಗ್ಯ ಇಲಾಖೆ ನಿಕಟವಾಗಿ ಗಮನಿಸುತ್ತಿದೆ ಎಂದು ಹೇಳಿದ್ದಾರೆ. ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಭಾರತದಲ್ಲಿ ಇದೂವರೆಗೆ ಯಾವುದೇ ಎಬೋಲಾ ಪ್ರಕರಣ ವರದಿಯಾಗಿಲ್ಲ. ರಾಜ್ಯ ಆರೋಗ್ಯ ಇಲಾಖೆ ಕೇಂದ್ರ ಸರ್ಕಾರದೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಬೆಳವಣಿಗೆಗಳ ಮೇಲೆ ಕಣ್ಣಿಟ್ಟಿದೆ ಎಂದು ತಿಳಿಸಿದ್ದಾರೆ. ಉಗಾಂಡಾ ಮತ್ತು ಕಾಂಗೋ ಸೇರಿದಂತೆ ಎಬೋಲಾ ಸೋಂಕು ಕಾಣಿಸಿಕೊಂಡಿರುವ ಆಫ್ರಿಕಾ ದೇಶಗಳಿಂದ ರಾಜ್ಯಕ್ಕೆ ಬರುವ ಪ್ರಯಾಣಿಕರನ್ನು 21 ದಿನಗಳ ಕಾಲ ನಿಗಾದಲ್ಲಿಡಲಾಗುತ್ತದೆ. ಯಾವುದೇ ಲಕ್ಷಣಗಳು ಕಂಡುಬಂದ ಕೂಡಲೇ ತಕ್ಷಣ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಹೇಳಿದ್ದಾರೆ.

## ರಾಜ್ಯಸಭೆ ಚುನಾವಣೆ ರೇಸ್: ಕರ್ನಾಟಕ ಕಾಂಗ್ರೆಸ್ ನಿಂದ ಸುಪ್ರಿಯಾ ಶ್ರೀನಾಟೆ ಮತ್ತು ಪವನ್ ಖೇರಾ ಮುಂಚೂಣಿ

• **ಉದಯವಾಹಿನಿ, ಬೆಂಗಳೂರು**

ಕರ್ನಾಟಕ ಕಾಂಗ್ರೆಸ್ ನಿಂದ ಸುಪ್ರಿಯಾ ಶ್ರೀನಾಟೆ ಮತ್ತು ಪವನ್ ಖೇರಾ ಮುಂಚೂಣಿಯಲ್ಲಿಜೂನ್ 18ರಂದು ನಡೆಯಲಿರುವ ಕರ್ನಾಟಕದ ನಾಲ್ಕು ರಾಜ್ಯಸಭಾ ಸ್ಥಾನಗಳ ಚುನಾವಣೆಗೆ ಮುನ್ನ, ಕಾಂಗ್ರೆಸ್ ರಾಷ್ಟ್ರೀಯ ನಾಯಕರಾದ ಸುಪ್ರಿಯಾ ಶ್ರೀನಾಟೆ ಮತ್ತು ಪವನ್ ಖೇರಾ ಅವರ ಹೆಸರುಗಳು ರಾಜ್ಯದಿಂದ ನಾಮನಿರ್ದೇಶನಕ್ಕೆ ಭಾರೀ ಚರ್ಚೆಗೆ ಗ್ರಾಸವಾಗಿವೆ. ಕಾಂಗ್ರೆಸ್ ಮೂರು ಸ್ಥಾನಗಳನ್ನು ಸುಲಭವಾಗಿ ಗೆಲ್ಲುವ ನಿರೀಕ್ಷೆಯಿರುವ ಹಿನ್ನೆಲೆ, 2023ರ ವಿಧಾನಸಭಾ ಚುನಾವಣೆಗೆ ಮುನ್ನ ಕರ್ನಾಟಕ ಕಾಂಗ್ರೆಸ್ ಘಟಕದೊಂದಿಗೆ ಇಬ್ಬರೂ ನಾಯಕರು ಆಕ್ರಮಣಕಾರಿ ಪ್ರಚಾರ ನಡೆಸಿದ್ದರಿಂದ ಅವರಿಗೆ ಅವಕಾಶ ನೀಡಬಹುದು ಎಂದು ಹೇಳಲಾಗುತ್ತಿದೆ.

ಈ ನಡುವೆ, ಹಿರಿಯ ನಾಯಕ ಹಾಗೂ ವಿಧಾನ ಪರಿಷತ್ ಸದಸ್ಯ ಬಿ ಕೆ ಹರಿಪ್ರಸಾದ್ ಅವರ ಹೆಸರೂ ರಾಜ್ಯಸಭೆ ನಾಮನಿರ್ದೇಶನಕ್ಕೆ ಕೇಳಿಬರುತ್ತಿದೆ.

## ಕರ್ನಾಟಕದಲ್ಲಿ ಗಿಗ್ ಕೆಲಸಗಾರರಿಗೆ ಅಂತಿಮವಾಗಿ ಕಾನೂನು ಮಾನ್ಯತೆ ಮತ್ತು ರಕ್ಷಣೆ ಸಿಕ್ಕಿದೆ

• **ಉದಯವಾಹಿನಿ, ಬೆಂಗಳೂರು**

ರಾಜ್ಯ ಸರ್ಕಾರ ಗಿಗ್ ಕಾರ್ಮಿಕರಿಗೆ ಕಲ್ಯಾಣ ಕಾಯ್ದೆ ಜಾರಿಗೆ ತಂದಿದ್ದು, ರಾಜಕೀಯವಾಗಿ ಮತ್ತು ವೇಗವಾಗಿ ಬೆಳೆಯುತ್ತಿರುವ ಪ್ಲಾಟ್‌ಫಾರ್ಮ್ ಆರ್ಥಿಕತೆಯಲ್ಲಿ ಕಾರ್ಮಿಕ ಹಕ್ಕುಗಳ ಕುರಿತು ಹೊಸ ಚರ್ಚೆಗೆ ನಾಂದಿ ಹಾಡಿದೆ. ಒಂದೆಡೆ, ಕಾಂಗ್ರೆಸ್ ಸರ್ಕಾರ ಈ ಉಪಕ್ರಮವನ್ನು ಅಸಂಘಟಿತ ಕಾರ್ಮಿಕರ ಕಲ್ಯಾಣಕ್ಕೆ ಮಹತ್ವದ ಹೆಜ್ಜೆಯಾಗಿದೆ ಎಂದರೆ, ಮತ್ತೊಂದೆಡೆ ವಿರೋಧ ಪಕ್ಷಗಳು ಮತ್ತು ಕಾರ್ಮಿಕ ಕಾರ್ಯಕರ್ತರು ಕಾನೂನನ್ನು ಎಷ್ಟು ಪರಿಣಾಮಕಾರಿಯಾಗಿ ಜಾರಿಗೆ ತರಲಾಗುತ್ತದೆ ಎಂದು ಪ್ರಶ್ನಿಸುತ್ತಿದ್ದಾರೆ.

ಈ ಕುರಿತು ಮಾಧ್ಯಮಗೋಷ್ಠಿ ನಡೆಸಿ ಮಾತನಾಡಿದ ಕರ್ನಾಟಕ ಯುವ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ್ ಗೌಡ, ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ದೇಶದಲ್ಲಿ ಮೊದಲ ಬಾರಿಗೆ ಗಿಗ್ ಕಾರ್ಮಿಕರಿಗೆ ಮೀಸಲಾದ ಕಾನೂನು ಚೌಕಟ್ಟನ್ನು ಪರಿಚಯಿಸಿದೆ. ಸಾಂಪ್ರದಾಯಿಕ ಕಾರ್ಮಿಕ ಕಾನೂನುಗಳಿಂದ ಹೊರಗಿರುವ ಲಕ್ಷಾಂತರ ಗಿಗ್ ಕಾರ್ಮಿಕರು, ಬೈಕ್ ಟ್ಯಾಕ್ಸಿ ಸವಾರರು ಮತ್ತು ಅಪ್ಲಿಕೇಶನ್ ಆಧಾರಿತ ಕಾರ್ಮಿಕರಿಗೆ ಈ ಉಪಕ್ರಮವು ಮನ್ನಣೆ ಮತ್ತು ಕಾನೂನು ರಕ್ಷಣೆಯನ್ನು ಒದಗಿಸುತ್ತದೆ ಎಂದು ಹೇಳಿದರು.


# ರಾಜ್ಯದ ಕಾರ್ಮಿಕರಿಗೆ ಗುಡ್ ನ್ಯೂಸ್: ಶೇ.60ರಷ್ಟು ಕನಿಷ್ಠ ವೇತನ ಹೆಚ್ಚಳ

• **ಉದಯವಾಹಿನಿ, ಬೆಂಗಳೂರು**

ರಾಜ್ಯದ 81 ಅನುಸೂಚಿತ ಉದ್ಯೋಗಗಳಲ್ಲಿ ದುಡಿಯುವ ಕಾರ್ಮಿಕರ ಕನಿಷ್ಠ ವೇತನವನ್ನು ಪರಿಷ್ಕರಿಸಿ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ. ರಾಜ್ಯದ ಅಸಂಘಟಿತ ವಲಯ ಹಾಗೂ ನಿರ್ದಿಷ್ಟ ವಲಯಗಳ ಕಾರ್ಮಿಕರ ಕನಿಷ್ಠ ವೇತನವನ್ನು ಸರಾಸರಿ ಶೇ.60ರಷ್ಟು ಹೆಚ್ಚಳ ಮಾಡಿ ಅಧಿಸೂಚನೆ ಹೊರಡಿಸಲಾಗಿದೆ.

ಕನಿಷ್ಠ ವೇತನ ನಿರ್ಧರಿಸುವಾಗ ಸುಪ್ರೀಂ ಕೋರ್ಟ್ ನ್ಯಾಯ ಪೀಠದ ನಿರ್ದೇಶನವನ್ನು ಪಾಲಿಸಿ, ಈ ಪರಿಷ್ಕರಣೆ ಮಾಡಲಾಗಿದೆ. ಅಲ್ಲದೇ, ಈ ಮೊದಲಿದ್ದ ನಾಲ್ಕು ವಲಯಗಳ ವರ್ಗೀಕರಣದ ಬದಲಾಗಿ ಇದೇ ಮೊದಲ






ಬಾರಿಗೆ ಎಲ್ಲಾ ನಿಗದಿತ ಉದ್ಯೋಗಗಳನ್ನು ಒಂದೇ ಅಧಿಸೂಚನೆಯಡಿ ತರಲಾಗಿದೆ.11-04-2025ರಂದು ಹೊರಡಿಸಲಾದ ಏಕ ರೂಪದ ಕರಡು ಅಧಿಸೂಚನೆಗೆ ಉದ್ಯೋಗದಾತರು, ಕೈಗಾರಿಕಾ ಮುಖ್ಯಸ್ಥರು ಮತ್ತು ಕಾರ್ಮಿಕ ಸಂಘಗಳಿಂದ ಸ್ವೀಕೃತವಾದ ಸಲಹೆಗಳು ಹಾಗೂ ಆಕ್ಷೇಪಣೆಗಳನ್ನು ಮತ್ತು ಕನಿಷ್ಠ ವೇತನ ಸಲಹಾ ಮಂಡಳಿಯಲ್ಲಿ 29.07.2025 ಮತ್ತು 28.08.2025ರಂದು ಚರ್ಚಿಸಿ ಸ್ವೀಕೃತವಾದ ಅಭಿಪ್ರಾಯಗಳನ್ನು ಸರ್ಕಾರವು ಪರಿಶೀಲಿಸಿ ಕನಿಷ್ಠ ವೇತನ ದರಗಳನ್ನು ತಕ್ಷಣ ಜಾರಿಗೆ ಬರುವಂತೆ ಪರಿಷ್ಕರಿಸಿ ಆದೇಶಿಸಿದೆ. **ಯಾವೆಲ್ಲಾ ಪ್ರಮುಖ ಉದ್ದಿಮೆಗಳ ಕನಿಷ್ಠ ವೇತನ ಪರಿಷ್ಕರಣೆ:** ಬೇಕರಿ ಉದ್ದಿಮೆ ಮತ್ತು ಬೇಕಿಂಗ್ ಪ್ರಕ್ರಿಯೆಗಳಲ್ಲಿ ಉದ್ಯೋಗ, ತಂಬಾಕು ಸಂಸ್ಕರಣಾ ಉದ್ದಿಮೆ, ಬಿಸ್ಕತ್ ತಯಾರಿಕಾ ಸಂಸ್ಥೆ, ಮರದ ಕೆಲಸ (ಕಾರ್ಪೆಂಟರಿ) ಹಾಗೂ ಸಾಮಿಲ್ ಸಂಸ್ಥೆ, ಪ್ಲೈವುಡ್ ತಯಾರಿಕಾ ಸಂಸ್ಥೆ, ಕ್ಲಬ್‌ಗಳಲ್ಲಿ, ಮಿಠಾಯಿ ತಯಾರಿಸುವ (ಕನ್‌ಫೆಕ್ಷನರಿ) ಉದ್ದಿಮೆ, ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿ, ಮನೆಗಳಲ್ಲಿ ಗೃಹ ಕೆಲಸ, ಎಲೆಕ್ಟ್ರಾನಿಕ್ಸ್ ಉದ್ದಿಮೆಗಳ ಕಾರ್ಮಿಕರಿಗೆ ಮತ್ತು ಗೃಹಕೃತ್ಯ ಸಹಾಯಕರು, ಮಕ್ಕಳ ಪೋಷಣಾ ಸಹಾಯಕರು, ಹೋಮ್ ನರ್ಸ್‌ಗಳಿಗೂ ಕನಿಷ್ಠ ವೇತನ ಪರಿಷ್ಕರಣೆ ಮಾಡಲಾಗಿದೆ.

ರಾಜ್ಯ ಸರ್ಕಾರ ಅಧಿಸೂಚನೆ

# ಭಾರತ , ಅಮೆರಿಕ ಜಂಟಿ ಸ್ನೇಹ ಗಟ್ಟಿ



**ಪ್ರತಿ ದೇಶದಲ್ಲೂ ಮೂರ್ಖರಿದ್ದಾರೆ**

**ಅಮೆರಿಕದಲ್ಲಿ ಇತ್ತೀಚೆಗೆ ಭಾರತೀಯರ ವಿರುದ್ಧ ಹೆಚ್ಚಾಗುತ್ತಿರುವ ಜನಾಂಗೀಯ ನಿಂದನೆ ಮತ್ತು ದಾಳಿಗಳ ಕುರಿತು ಪತ್ರಕರ್ತರೊಬ್ಬರು ಪ್ರಶ್ನಿಸಿದಾಗ ಉತ್ತರಿಸಿದ ಮಾರ್ಕೊ ರೂಬಿಯೋ, ''ಪ್ರಪಂಚದ ಪ್ರತಿಯೊಂದು ದೇಶದಲ್ಲೂ ಮೂರ್ಖ ಜನರಿದ್ದಾರೆ. ಕೆಲವೇ ಕೆಲವು ಪ್ರತ್ಯೇಕ ಜನಾಂಗೀಯ ದ್ವೇಷದ ಘಟನೆಗಳನ್ನು ಇಟ್ಟುಕೊಂಡು ಇಡೀ ಅಮೆರಿಕ ಸಮಾಜವನ್ನು ಅಥವಾ ದೇಶವನ್ನು ನಿರ್ಣಯಿಸುವುದು ಸರಿಯಲ್ಲ ಎಂದು ಸ್ಪಷ್ಟಪಡಿಸಿದರು. ಕೆಲವು ಅಜ್ಞಾನಿ ಜನರ ಕೃತ್ಯಗಳು ಇಡೀ ದೇಶದ ಮನಸ್ಥಿತಿಯನ್ನು ಬಿಂಬಿಸುವುದಿಲ್ಲ .ಅಮೆರಿಕದಲ್ಲಿ ನೆಲೆಸಿರುವ ಭಾರತೀಯ ಸಮುದಾಯದ ಯಶಸ್ಸನ್ನು ಮರೆಮಾಚಲು ಸಾಧ್ಯವಿಲ್ಲ ಎಂದು ಪ್ರತಿಪಾದಿಸಿದರು.**

**ಜೈಶಂಕ್ ಕಳವಳ**

**ಭಾರತಕ್ಕೆ ಮೊದಲ ಬಾರಿಗೆ ರುಬಿಯೊ ಭೇಟಿ**

ಭಾರತ, ಅಮೆರಿಕ ಜಂಟಿ ಸುದ್ದಿ ಗೋಷ್ಠಿ

## ವ್ಯಾಪಾರ ಮತ್ತು ಸಂಶೋಧನೆಯ ಮೇಲೆ ಪರಿಣಾಮ

ವೀಸಾ ಪ್ರಕ್ರಿಯೆಯಲ್ಲಿನ ವಿಳಂಬವು ಕೇವಲ ವ್ಯಕ್ತಿಗಳಿಗಷ್ಟೇ ಅಲ್ಲದೆ, ಉಭಯ ದೇಶಗಳ ನಡುವಿನ ವ್ಯಾಪಾರ, ತಂತ್ರಜ್ಞಾನ ವಿನಿಮಯ ಮತ್ತು ಸಂಶೋಧನಾ ಸಹಕಾರದ ಮೇಲೂ ಕೆಟ್ಟ ಪರಿಣಾಮ ಬೀರಬಹುದು ಎಂದ ಎಚ್ಚರಿಸಿದ್ದಾರೆ. ಭಾರತ ಮತ್ತು ಅಮೆರಿಕದ ನಡುವಿನ ಬಾಂಧವ್ಯಕ್ಕೆ ಅತ್ಯಂತ ದೊಡ್ಡ ಶಕ್ತಿಯೇ ಎರಡು ದೇಶಗಳ ಜನರ ನಡುವಿನ ಒಡನಾಟ. ಹಾಗಾಗಿ, ಕಾನೂನುಬದ್ಧವಾಗಿ

• **ಉದಯವಾಹಿನಿ, ನವದೆಹಲಿ**

ಭಾರತ ಮತ್ತು ಅಮೆರಿಕ ನಡುವಿನ ಸಂಬಂಧವು ಅತ್ಯಂತ ಗಟ್ಟಿಯಾಗಿದೆ. ಯಾವುದೇ ದೇಶದೊಂದಿಗಿನ ಸಂಬಂಧಕ್ಕಾಗಿ ನವದೆಹಲಿ ಜೊತೆಗಿನ ಮೈತ್ರಿಯನ್ನು ಅಮೆರಿಕ ಎಂದಿಗೂ ಕಡೆಗಣಿಸುವುದಿಲ್ಲ ಎಂದು ಅಲ್ಲಿನ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೋ ಸ್ಪಷ್ಟಪಡಿಸಿದ್ದಾರೆ.

ನವದೆಹಲಿಯಲ್ಲಿ ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರೊಂದಿಗೆ ಉನ್ನತ ಮಟ್ಟದ ಮಾತುಕತೆಯ ನಡೆಸಿದರು. ಬಳಿಕ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಾಕಿಸ್ತಾನ ಮತ್ತು ಅಮೆರಿಕದ ನಡುವಿನ ಸಂಬಂಧ ಹಾಗೂ ಭಾರತದೊಂದಿಗಿನ ಯುದ್ಧತಂತ್ರದ ಪಾಲುದಾರಿಕೆ ನಡುವಿನ ವ್ಯತ್ಯಾಸವನ್ನು ಎಳೆಎಳೆಯಾಗಿ ಬಿಚ್ಚಿಟ್ಟರು.

**ಭಾರತದ ಮೈತ್ರಿಗೆ ಧಕ್ಕೆ ತರಲ್ಲ:** ಪಾಕಿಸ್ತಾನ ಮತ್ತು ಅಮೆರಿಕದ ಸಂಬಂಧ ಹಾಗೂ ಭಯೋತ್ಪಾದಕ ಗುಂಪುಗಳಿಗೆ ಸೇನಾ ಬೆಂಬಲ ನೀಡುತ್ತಿರುವ ಕುರಿತಾದ ಪ್ರಶ್ನೆಗೆ ಉತ್ತರಿಸಿದ ಅವರು, ನಾವು ಜಗತ್ತಿನ ಹಲವು ದೇಶಗಳೊಂದಿಗೆ 'ಟ್ಯಾಕ್ಟಿಕಲ್' ಮಟ್ಟದಲ್ಲಿ ಕೆಲಸ ಮಾಡ್ತವೆ. ಅಮೆರಿಕವು ಬೇರೆ ಯಾವುದೇ ದೇಶದೊಂದಿಗೆ ಹೊಂದಿರುವ ಸಂಬಂಧವು ಭಾರತದೊಂದಿಗಿನ ನಮ್ಮ ಸ್ಟ್ರಾಟೆಜಿಕ್ ಮೈತ್ರಿಯ ವೆಚ್ಚದಲ್ಲಿ ಇರಲ್ಲ. ಅಂದರೆ ಭಾರತದ ಮೈತ್ರಿಯನ್ನು ಬದಿಗಿಟ್ಟು ಬೇರೆ ದೇಶಗಳೊಂದಿಗೆ ನಾವು ಕೈಜೋಡಿಸುವುದಿಲ್ಲ ಎಂದು ಭರವಸೆ ನೀಡಿದರು.

**ಒಪ್ಪಂದದ ಮೇಲೆ ಕಣ್ಣು:** ದೀರ್ಘಕಾಲದಿಂದ ಬಾಕಿ ಉಳಿದಿರುವ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಬಗ್ಗೆಯೂ ಮಾತನಾಡಿದ ರುಬಿಯೋ, ಈ ಒಪ್ಪಂದವು ಶೀಘ್ರದಲ್ಲೇ ಪೂರ್ಣಗೊಳ್ಳುವ ಭರವಸೆ ಇದೆ. ಭಾರತ ಮತ್ತು ಅಮೆರಿಕ ಬಹುತೇಕ ಎಲ್ಲಾ ಜಾಗತಿಕ ಸಮಸ್ಯೆಗಳ ಬಗ್ಗೆ ಒಂದೇ ರೀತಿಯ ಆಲೋಚನೆ ಹೊಂದಿವೆ. ಜಗತ್ತಿನಾದ್ಯಂತ ಅಮೆರಿಕಕ್ಕೆ ಇರುವ ಅತ್ಯಂತ ಪ್ರಮುಖ ಯುದ್ಧತಂತ್ರದ ಪಾಲುದಾರರಲ್ಲಿ ಭಾರತ ಕೂಡ ಒಂದು ಎಂದು ಬಣ್ಣಿಸಿದರು.

ಯುದ್ಧತಂತ್ರದ ಪಾಲುದಾರಿಕೆ ಎಂದರೆ ಏನು ಎಂಬುದನ್ನು ವಿವರಿಸಿದ ಅವರು, ಯಾವಾಗ ಎರಡು ದೇಶಗಳ ಹಿತಾಸಕ್ತಿಗಳು ಒಂದೇ ಆಗಿರುತ್ತವೆಯೋ ಮತ್ತು ಜಾಗತಿಕ ಸಮಸ್ಯೆಗಳನ್ನು ಪರಿಹರಿಸಲು ಆ ದೇಶಗಳು ಒಟ್ಟಾಗಿ ಕೆಲಸ ಮಾಡುತ್ತವೆಯೋ ಅದನ್ನು ಸ್ಟ್ರಾಟೆಜಿಕ್ ಪಾರ್ಟ್ನರ್‌ಶಿಪ್ ಎನ್ನಲಾಗುತ್ತದೆ. ನಾವು ಭಾರತದೊಂದಿಗೆ ಕೆಲಸ ಮಾಡುತ್ತಿರುವ ವಿಷಯಗಳ ವ್ಯಾಪ್ತಿಯೇ ಭಾರತ ನಮಗೆ ಎಷ್ಟು ಮುಖ್ಯ ಎಂಬುದನ್ನು ತೋರಿಸುತ್ತದೆ ಎಂದು ರುಬಿಯೋ ಅಭಿಪ್ರಾಯಪಟ್ಟಿದ್ದಾರೆ.

**ವೀಸಾ ವಿಳಂಬದ ಬಗ್ಗೆ ಜೈಶಂಕರ್ ಕಳವಳ:** ಅಮೆರಿಕಕ್ಕೆ ಪ್ರಯಾಣಿಸುವ ಅರ್ಹ ಭಾರತೀಯ ಪ್ರಯಾಣಿಕರು ವೀಸಾ ಪಡೆಯಲು ಎದುರಿಸುತ್ತಿರುವ ವಿಳಂಬ ಮತ್ತು ಸಮಸ್ಯೆಗಳ ಕುರಿತು ಜೈಶಂಕರ್ ಅವರು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೋ ಅವರ ಮುಂದೆ ಗಂಭೀರವಾಗಿ ಪ್ರಸ್ತಾಪಿಸಿದರು. **ಇದು ಭಾರತದ ಮೇಲೆ ಮಾತ್ರ ಹೇರಲಾದ ಕ್ರಮವಲ್ಲ:** ಭಾರತದ ಕಳವಳಕ್ಕೆ ಉತ್ತರಿಸಿದ ಮಾರ್ಕೊ ರುಬಿಯೋ, ಈ ವೀಸಾ ವ್ಯವಸ್ಥೆಯು ಕೇವಲ ಭಾರತವನ್ನು ಗುರಿಯಾಗಿಸಿಕೊಂಡು ಜಾರಿಗೊಳಿಸಿದ್ದಲ್ಲ. ಇದು ಜಾಗತಿಕ ಮಟ್ಟದಲ್ಲಿ ಅಳವಡಿಸಿಕೊಳ್ಳುತ್ತಿರುವ ಬದಲಾವಣೆಯ ಭಾಗವಾಗಿದೆ ಎಂದು ಸ್ಪಷ್ಟಪಡಿಸಿದರು.




## ಕ್ರಮಬದ್ಧ ವಲಸೆಗೆ ಬೆಂಬಲ

**ಅಕ್ರಮ ವಲಸೆಯನ್ನು ತಡೆಯಲು ಭಾರತವು ಅಮೆರಿಕದೊಂದಿಗೆ ಸಂಪೂರ್ಣ ಸಹಕರಿಸುತ್ತಿದೆ. ಈ ಪ್ರಕ್ರಿಯೆಯಲ್ಲಿ ಅರ್ಹ ವಿದ್ಯಾರ್ಥಿಗಳು, ಉದ್ಯಮಿಗಳು ಮತ್ತು ಪ್ರವಾಸಿಗರಿಗೆ ತೊಂದರೆಯಾಗಬಾರದು ಎಂದು ಜೈಶಂಕರ್ ತಿಳಿಸಿದರು.**

## ಭಾರತೀಯರು ಮುಂಚೂಣಿ

ಅಮೆರಿಕದ ಪ್ರಗತಿಯಲ್ಲಿ ಭಾರತೀಯ ಮೂಲದವರ ಕೊಡುಗೆಯನ್ನು ಮುಕ್ತಕಂಠದಿಂದ ಶ್ಲಾಘಿಸಿದ ರೂಬಿಯೋ, ''ಅಮೆರಿಕದಲ್ಲಿರುವ ಭಾರತೀಯ ಸಮುದಾಯವು ಅತ್ಯಂತ ಯಶಸ್ವಿ ಹಾಗೂ ಗೌರವಾನ್ವಿತ ಸಮುದಾಯಗಳಲ್ಲಿ ಒಂದಾಗಿದೆ. ವ್ಯಾಪಾರ, ತಂತ್ರಜ್ಞಾನ, ವೈದ್ಯಕೀಯ ಮತ್ತು ಸಾರ್ವಜನಿಕ ಸೇವೆ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲೂ ಭಾರತೀಯರು ಮುಂಚೂಣಿಯಲ್ಲಿದ್ದಾರೆ,'' ಎಂದರು. ಪ್ರತ್ಯೇಕ ಗುಂಪುಗಳ ನಡವಳಿಕೆಯಿಂದ ಉಭಯ ದೇಶಗಳ ಬಾಂಧವ್ಯಕ್ಕೆ ಯಾವುದೇ ಧಕ್ಕೆಯಾಗುವುದಿಲ್ಲ ಎಂದು ಅವರು ಭರವಸೆ ನೀಡಿದರು.

- **ಬಲಿಷ್ಠ ಬಾಂಧವ್ಯಕ್ಕೆ ಪಣ**
- **ಪಾಕ್‌ಗಿಂತ ಭಾರತವೇ ನಮಗೆ ಮುಖ್ಯ;**
- **ಭಾರತ ಜೊತೆಗಿನ ಮೈತ್ರಿಯನ್ನ ಯಾವುದೋ ದೇಶಕ್ಕಾಗಿ ಬಲಿ ಕೊಡಲ್ಲ' -ಅಮೆರಿಕ**
- **ಜನರ ನಡುವಿನ ಸಂಪರ್ಕವೇ ಶಕ್ತಿ**



## ಗಮನ ಸೆಳೆದ ಜೈಶಂಕರ್ ಮಂದಹಾಸ

**ಪತ್ರಕರ್ತರು ಅಮೆರಿಕದ ಜನಾಂಗೀಯ ದಾಳಿಗಳ ಬಗ್ಗೆ ಮಾರ್ಕೊ ರೂಬಿಯೋ ಅವರಿಗೆ ಪ್ರಶ್ನೆ ಕೇಳುತ್ತಿದ್ದಂತೆ, ವೇದಿಕೆಯಲ್ಲಿದ್ದ ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಬೀರಿದ ಸಣ್ಣ ಮಂದಹಾಸ ಮಾಧ್ಯಮಗಳ ಗಮನ ಸೆಳೆಯಿತು. ಗಂಭೀರ ರಾಜತಾಂತ್ರಿಕ ಚರ್ಚೆಯ ನಡುವೆ ಜೈಶಂಕರ್ ಅವರ ಈ ಪ್ರತಿಕ್ರಿಯೆ ಸಾಮಾಜಿಕ ಜಾಲತಾಣಗಳಲ್ಲೂ ವೈರಲ್ ಆಗಿದೆ. ಆದರೆ ಈ ವಿಷಯದ ಕುರಿತು ಭಾರತೀಯ ನಿಯೋಗ ಜಂಟಿ ಸುದ್ದಿಗೋಷ್ಠಿಯಲ್ಲಿ ಯಾವುದೇ ನೇರ ಹೇಳಿಕೆ ನೀಡಲಿಲ್ಲ.**

# ಮಂಗಳೂರು-ಬೆಂಗಳೂರು ವಂದೇ ಭಾರತ್ ಎಕ್ಸ್‌ಪ್ರೆಸ್ ಜೂನ್‌ನಲ್ಲಿ ಆರಂಭ: ರೈಲ್ವೆ ಸಚಿವ ಸೋಮಣ್ಣ

• **ಉದಯವಾಹಿನಿ, ಬೆಂಗಳೂರು**

ಮಂಗಳೂರು-ಬೆಂಗಳೂರು ನಡುವೆ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಜೂನ್‌ನಲ್ಲಿ ಸಂಚಾರ ಆರಂಭಿಸಲಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳೂರು ಸೇರಿದಂತೆ ದೇಶದ ನಾನಾ ಕಡೆಗಳಲ್ಲಿ ಹೊಸ ರೈಲು ಸಂಚಾರಗಳಿಗೆ ಚಾಲನೆ ನೀಡಲಿದ್ದಾರೆ ಎಂದು ರೈಲ್ವೆ ಖಾತೆ ಸಹಾಯಕ ಸಚಿವ ವಿ.ಸೋಮಣ್ಣ ಹೇಳಿದರು. ಮಂಗಳೂರು ಜಂಕ್ಷನ್ ರೈಲು ನಿಲ್ದಾಣಕ್ಕೆ ಭೇಟಿ ನೀಡಿದ ಅವರು ಅಮೃತ ಭಾರತ್ ಯೋಜನೆಯಡಿ ರೈಲು ನಿಲ್ದಾಣದ ಅಭಿವೃದ್ಧಿ ಕಾಮಗಾರಿಯ ಪರಿಶೀಲನೆ ನಡೆಸಿದ ಬಳಿಕ ಮಾತನಾಡಿದರು.

ಕರಾವಳಿಯ 3 ಜಿಲ್ಲೆಗಳಲ್ಲಿ ಬಿಜೆಪಿ ಸಂಸದರು ಇದ್ದಾರೆ. ಅವರ ಬೇಡಿಕೆಯನ್ನು ಪರಿಶೀಲಿಸಬೇಕಾಗುತ್ತದೆ. ಸಕಲೇಶಪುರ-ಕುಕ್ಕೆ ಸುಬ್ರಹ್ಮಣ್ಯ ಮಾರ್ಗದ ವರೆಗೆ 55 ಕಿ.ಮೀ. ದೂರ ವಿದ್ಯುದ್ದೀಕರಣ ಕಾಮಗಾರಿ ಮುಕ್ತಾಯಗೊಂಡಿದೆ. ಬೆಂಗಳೂರು ಮತ್ತು ಮಂಗಳೂರು ನಡುವೆ ಪೂರ್ತಿಯಾಗಿ ವಿದ್ಯುದ್ದೀಕರಣವಾಗಿದ್ದು, ಹೆಚ್ಚುವರಿ ರೈಲು ಸಂಚಾರಕ್ಕೆ ಅವಕಾಶಗಳು ತೆರೆದುಕೊಂಡಿವೆ ಎಂದರು.

**ಹೊಸ ರೈಲು ಮಾರ್ಗ ರಚನೆ ಸಮೀಕ್ಷೆ ಪೂರ್ಣ:** ಪ್ರಸ್ತಾವಿತ ಶಿವಮೊಗ್ಗ-ಮಂಗಳೂರು ರೈಲು ಮಾರ್ಗ 332 ಕಿ.ಮೀ. ಇರಲಿದೆ. ಇದಕ್ಕೆ, 3,300 ಕೋಟಿ ರೂ. ಯೋಜನಾ ವೆಚ್ಚ ಅಂದಾಜಿಸಲಾಗಿದೆ. ಈ ಮಾರ್ಗದ ಎಫ್ ಎಲ್‌ಸಿ (ಫೈನಲ್ ಲೊಕೇಷನ್ ಸರ್ವೆ) ನಡೆದು ಅನುಮೋದನೆಗೊಂಡಿದ್ದು, ಶೀಘ್ರ ಟೆಂಡರ್ ಕರೆಯಲಾಗುವುದು ಎಂದು ತಿಳಿಸಿದರು.

**ಮಂಗಳೂರಿಗೆ ಮಾಸ್ಟರ್ ಪ್ಲಾನ್:** ಮಂಗಳೂರು ಜಂಕ್ಷನ್ ಮತ್ತು ಮಂಗಳೂರು



ಸೆಂಟ್ರಲ್ ರೈಲು ನಿಲ್ದಾಣಗಳ ತ್ವರಿತ ಅಭಿವೃದ್ಧಿಗೆ ಕ್ರಮ ಕೈಗೊಳ್ಳಬೇಕಾಗಿದೆ. ಮಂಗಳೂರು ಜಂಕ್ಷನ್‌ನಲ್ಲಿ 38 ಕೋಟಿ ರೂ.ಗಳ ಅಭಿವೃದ್ಧಿ ಕಾಮಗಾರಿ ಅಕ್ಟೋಬರ್‌ನಲ್ಲಿ ಮುಕ್ತಾಯಗೊಳ್ಳಬೇಕು.

ಇಲ್ಲಿ ಜಂಕ್ಷನ್ ಯಾರ್ಡ್ ಅಭಿವೃದ್ಧಿಗೊಳ್ಳಲಿದ್ದು, ಹೆಚ್ಚುವರಿ ಗೂಡ್ಸ್ ರೈಲು ಹಳಿ ರಚನೆಯಾಗಲಿದೆ. ಇಡೀ ಮಂಗಳೂರು ಪ್ರದೇಶದಲ್ಲಿ ರೈಲ್ವೆ ಅಭಿವೃದ್ಧಿಗೆ ಪ್ರತ್ಯೇಕ ಮಾಸ್ಟರ್ ಪ್ಲಾನ್ ರೂಪಿಸುವಂತೆ ಜಿಲ್ಲಾಧಿಕಾರಿಗೆ ಸೂಚಿಸಿದ ಸಚಿವರು, ಆರು ತಿಂಗಳಲ್ಲಿ ಇನ್ನಷ್ಟು ಪಾರದರ್ಶಕ ಬದಲಾವಣೆ ನಿರೀಕ್ಷಿಸಬಹುದು ಎಂದು ಹೇಳಿದರು.ಹಾಸನ-ಮಂಗಳೂರು ನಡುವೆ 247 ಕಿ.ಮೀ. ರೈಲು ಹಳಿಯನ್ನು 8,300 ಕೋಟಿ ರೂ.ಗಳಲ್ಲಿ ದ್ವಿಗುಣಗೊಳಿಸುವ ಕಾರ್ಯದ ಎಫ್‌ಎಲ್‌ಸಿ ಪರಿಶೀಲನಾ ಹಂತದಲ್ಲಿದೆ. ಶೋರ್ನೂರು-ಮಂಗಳೂರು ನಡುವೆ 306 ಕಿ.ಮೀ. ದೂರದ ಹಳಿಯನ್ನು 3, 4ನೇ ಹಳಿ ರಚಿಸುವ ಕಾರ್ಯ ನಡೆಯಲಿದೆ.

## ಬೌರಿಂಗ್ ಆಸ್ಪತ್ರೆ ಕಾಂಪೌಂಡ್ ಕುಸಿದು 7 ಜನ ಸಾವಿಗೆ ಸ್ಫೋಟಕ ಕಾರಣ ಬಹಿರಂಗ

• **ಉದಯವಾಹಿನಿ, ಬೆಂಗಳೂರು:**

ನಗರದ ಬೌರಿಂಗ್ ಆಸ್ಪತ್ರೆಯ ಕಾಂಪೌಂಡ್ ಕುಸಿದು ಏಳು ಜನ ಅಮಾಯಕರು ಬಲಿಯಾಗಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಇದೀಗ ಕಮರ್ಷಿಯಲ್ ಸ್ಟ್ರೀಟ್ ಪೊಲೀಸ್ ಠಾಣೆಯಲ್ಲಿ ಮತ್ತೊಂದು ಎಫ್ ಐಆರ್ ದಾಖಲಾಗಿದೆ. ನಿರ್ಮಾಣ ಕಾಮಗಾರಿ ಗುತ್ತಿಗೆ ಪಡೆದಿದ್ದ ಚೆನ್ನೈ ಮೂಲದ ಎಎಸ್ ಆರ್ ಟ್ರೇಡರ್ಸ್ ಕಂಪನಿ ವಿರುದ್ಧ ಎಕ್ಸಿಕ್ಯೂಟಿವ್ ಇಂಜಿನಿಯರ್ ಚಂದ್ರ ದೂರು ಹಿನ್ನೆಲೆ ಎಫ್‌ಐಆರ್ ದಾಖಲಾಗಿದೆ.

ಜೊತೆಗೆ ಹೆಚ್ಚುವರಿ ತ್ಯಾಜ್ಯ ಗೋಡೆ ಪಕ್ಕದಲ್ಲಿದ್ದು, ಅದರ ಭಾರಕ್ಕೆ ಗೋಡೆ ಬಿದ್ದಿದೆ ಎಂಬ ಸ್ಫೋಟಕ ವಿಚಾರ ಬಹಿರಂಗವಾಗಿದೆ. ಚೆನ್ನೈ ಮೂಲದ ಎಎಸ್‌ಆರ್ ಟ್ರೇಡರ್ಸ್ ಕಂಪನಿ ಬೌರಿಂಗ್ ಮತ್ತು ಲೇಡಿ ಕರ್ಝುನ್ ಮೆಡಿಕಲ್ ಕಾಲೇಜ್‌ನಿರ್ಮಾಣದ ಗುತ್ತಿಗೆ ಪಡೆದಿತ್ತು. ನೆಲಸಮ ಮಾಡಿದ್ದ ಕಟ್ಟಡದ ಅವಶೇಷ ಹಾಗೂ ಹೆಚ್ಚುವರಿ ತ್ಯಾಜ್ಯಗಳನ್ನು ನಿಯಮಾನುಸಾರ ಸ್ಥಳದಿಂದ ತೆರವುಗೊಳಿಸಿರಲಿಲ್ಲ. ಬದಲಿಗೆ, ಭಾರಿ ಪ್ರಮಾಣದ ತ್ಯಾಜ್ಯವನ್ನು ಕಾಂಪೌಂಡ್ ಪಕ್ಕದಲ್ಲೇ ರಾಶಿ ಹಾಕಲಾಗಿತ್ತು. ಹೀಗಾಗಿ ಭಾರ ತಡೆಯಲಾರದೆ ಗೋಡೆ ಕುಸಿದು ಬಿದ್ದಿದ್ದರಿಂದ ಏಳು ಜನ ಅಮಾಯಕರು ಜೀವ ಕಳೆದುಕೊಂಡಿದ್ದರು.

ಇನ್ನು ತ್ಯಾಜ್ಯ ತೆರವುಗೊಳಿಸದ ಹಾಗೂ ನಿಯಮ ಉಲ್ಲಂಘಿಸಿದ ಕುರಿತು ಸ್ಪಷ್ಟೀಕರಣ ನೀಡುವಂತೆ ಸರ್ಕಾರದ ವತಿಯಿಂದ ಎಎಸ್‌ಆರ್ ಟ್ರೇಡರ್ಸ್ ಕಂಪನಿಯ ಇಮೇಲ್ ಐಡಿಗೆ ನೋಟಿಸ್ ಕಳುಹಿಸಲಾಗಿತ್ತು.

ಮೇ 18ರ ಒಳಗಾಗಿ ಲಿಖಿತ ಸ್ಪಷ್ಟೀಕರಣ ನೀಡಬೇಕೆಂದು ಎಕ್ಸಿಕ್ಯೂಟಿವ್ ಇಂಜಿನಿಯರ್ ಚಂದ್ರು ಗಡುವು ನೀಡಿದ್ದರೂ ಗುತ್ತಿಗೆದಾರ ಕಂಪನಿಯು ಇಮೇಲ್‌ಗೆ ಯಾವುದೇ ಪ್ರತಿಕ್ರಿಯೆ



ನೀಡಿಲ್ಲ. ಸರ್ಕಾರದ ನೋಟಿಸ್ ಅನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದ ಹಿನ್ನೆಲೆಯಲ್ಲಿ ಇಂಜಿನಿಯರ್ ಚಂದ್ರು ಕಮರ್ಷಿಯಲ್ ಸ್ಟ್ರೀಟ್ ಠಾಣೆ ಮೆಟ್ಟಿಲೇರಿದ್ದಾರೆ. ಇತ್ತ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ನಡೆಸಿದ್ದಾರೆ.

ಏಪ್ರಿಲ್ 29ರಂದು ವರುಣಾರ್ಭಟಕ್ಕೆ ಬೆಂಗಳೂರಿನಲ್ಲಿ ಘೋರ ದುರಂತವೇ ನಡೆದು ಹೋಗಿತ್ತು. ಆಲಿಕಲ್ಲು, ಬಿರುಗಾಳಿಯೊಂದಿಗೆ ಅಬ್ಬರಿಸಿದ್ದ ಮಳೆ ಬೃಹತ್ ಕಾಂಪೌಂಡನ್ನೇ ಉರುಳಿಸಿತ್ತು. 7 ಜನರನ್ನ ಬಲಿ ಪಡೆದಿತ್ತು. ಮಳೆಯಿಂದಾಗಿ ಬೌರಿಂಗ್ ಆಸ್ಪತ್ರೆಯ ಎಮರ್ಜೆನ್ಸಿ ವಿಭಾಗದ ಬಳಿ ಕಾಂಪೌಂಡ್ ಕುಸಿದಿತ್ತು.

ಕಾಂಪೌಂಡ್ ಬಳಿಯೇ ಬೀದಿಬದಿ ವ್ಯಾಪಾರ ಮಾಡುತ್ತಿದ್ದ ಐವರು ಹಾಗೂ ಇಬ್ಬರು ಪಾದಚಾರಿಗಳು ಸೇರಿದಂತೆ 7 ಮಂದಿ ಉಸಿರು ನಿಲ್ಲಿಸಿದ್ದರೆ, ಇತರೆ 7 ಮಂದಿ ಗಾಯಗೊಂಡು ಆಸ್ಪತ್ರೆ ಸೇರಿದ್ದರು.ಆ ಪತ್ರಕ್ಕೆ ಯಾವ ರೀತಿ ಸ್ಪಂದಿಸಬೇಕೋ ಅದರಂತೆ ಪೊಲೀಸರು ಸ್ಪಂದಿಸುತ್ತಾರೆ.

# ಕಾಂಗ್ರೆಸ್ ವೈಫಲ್ಯದಿಂದ ಬಿಜೆಪಿ ಅಧಿಕಾರಕ್ಕೆ ಬರುವ ಭ್ರಮೆ ಬೇಡ: ರಾಜ್ಯ ನಾಯಕರಿಗೆ ನಿತಿನ್ ನಬಿನ್ ಸೂಚನೆ

• **ಉದಯವಾಹಿನಿ, ಬೆಂಗಳೂರು**

ರಾಜ್ಯಕ್ಕೆ ಚೊಚ್ಚಲ ಭೇಟಿ ನೀಡಿರುವ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಭಾನುವಾರ ನಗರದ ಪಕ್ಷದ ಕಚೇರಿಯಲ್ಲಿ ರಾಜ್ಯ ನಾಯಕರ ಜೊತೆ ಸಂಘಟನಾ ಸಭೆ ನಡೆಸಿದರು. ಒಗ್ಗಟ್ಟಿನ ಮಂತ್ರ ಪಠಿಸಿದ ನಬಿನ್, ಪಶ್ಚಿಮ ಬಂಗಾಳ ಮಾದರಿಯಲ್ಲಿ ಸಂಘಟನೆ, ಹೋರಾಟ ನಡೆಸುವಂತೆ ಸೂಚನೆ ನೀಡಿದ್ದಾರೆ. ನಿತಿನ್ ನಬಿನ್ ನೇತೃತ್ವದಲ್ಲಿ ನಡೆದ ಸಂಘಟನಾ ಸಭೆಯಲ್ಲಿ ರಾಜ್ಯದ ನಾಯಕರಿಗೆ ಹತ್ತು ಹಲವು ಸಂದೇಶಗಳನ್ನು ರವಾನಿಸುವ ಸೂಚನೆಗಳನ್ನು ನೀಡಿದರು.

ರಾಜ್ಯ ಬಿಜೆಪಿ ಸಂಘಟನೆ ಸಂಬಂಧ ಪರೋಕ್ಷವಾಗಿ ಅಸಮಾಧಾನ ವ್ಯಕ್ತಪಡಿಸಿದ ಅವರು, ಇನ್ನು ಮುಂದೆ ಗ್ರೌಂಡ್ ಮಟ್ಟದಲ್ಲಿ ಹೋರಾಟ ನಡೆಸುವಂತೆ ತಾಕೀತು ಮಾಡಿದ್ದಾರೆ. ಸದ್ಯದ ರಾಜ್ಯ ನಾಯಕರ ಹೋರಾಟ, ಸಂಘಟನೆ ಬಗ್ಗೆ ಪರೋಕ್ಷವಾಗಿ ಅತೃಪ್ತಿ ಹೊರಹಾಕಿದ ನಬಿನ್, ಇನ್ಮುಂದೆ ಶಾಸಕರು, ನಾಯಕರು ತಳಮಟ್ಟಕ್ಕೆ ಹೋಗಿ ಸರ್ಕಾರದ ವೈಫಲ್ಯಗಳ ಬಗ್ಗೆ ಆಂದೋಲನ ನಡೆಸಬೇಕು ಎಂದು ತಾಕೀತು ಮಾಡಿದರು. ಬೆಂಗಳೂರಿಗೆ ಬಂದಿರುವ ನಿತಿನ್ ನಬಿನ್ ಇಂದು ದಿನಪೂರ್ತಿ ಹಲವು ಮಹತ್ವದ ಸಭೆಗಳಲ್ಲಿ ಪಾಲ್ಗೊಂಡರು. ಮೊದಲಿಗೆ ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ನಿವಾಸ ಧವಳಗಿರಿಯಲ್ಲಿ ನಬಿನ್ ಬ್ರೇಕ್‌ಫಾಸ್ಟ್‌ನಲ್ಲಿ ಪಾಲ್ಗೊಂಡರು. ರಾಜ್ಯ



ಬಿಜೆಪಿ ನಾಯಕರ ದಂಡೇ ಈ ವೇಳೆ ಯಡಿಯೂರಪ್ಪ ನಿವಾಸದಲ್ಲಿ ನೆರೆದಿತ್ತು. ಈ ಸಂದರ್ಭದಲ್ಲಿ ಪ್ರಸ್ತುತ ರಾಜ್ಯ ರಾಜಕೀಯ, ಕಾಂಗ್ರೆಸ್ ಪರಿಸ್ಥಿತಿ ಬಗ್ಗೆ ಔಪಚಾರಿಕವಾಗಿ ಚರ್ಚಿಸಲಾಯಿತು. ನಂತರ ನಿತಿನ್ ನಬಿನ್ ಮಲ್ಲೇಶ್ವರದ ಕಾಡು ಮಲ್ಲೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ನೆರವೇರಿಸಿದರು. ಬಳಿಕ ಬಿಜೆಪಿ ಕಚೇರಿಗೆ ತೆರಳಿ ಸರಣಿ ಸಂಘಟನೆ ಸಭೆಗಳಲ್ಲಿ ಅವರು ಪಾಲ್ಗೊಂಡರು. ಬಿಜೆಪಿ ಶಾಸಕರು, ಸಂಸದರು, ಎಂಎಲ್‌ಸಿಗಳು, ಪದಾಧಿಕಾರಿಗಳು, ಜಿಲ್ಲಾಧ್ಯಕ್ಷರು, ಮೋರ್ಚಾಗಳ ಅಧ್ಯಕ್ಷರ ಜೊತೆ ನಿತಿನ್ ನಬಿನ್ ಪ್ರತ್ಯೇಕ ಸಭೆಗಳನ್ನು ನಡೆಸಿದರು. ಸಭೆಯಲ್ಲಿ ಪ್ರಮುಖವಾಗಿ ಪಕ್ಷ ಸಂಘಟನೆ, ಮುಂದಿನ 2028ರ ವಿಧಾನಸಭೆ ಚುನಾವಣೆಯ ಗೆಲುವಿಗಾಗಿನ ಹೋರಾಟದ ಮಾರ್ಗಸೂಚಿಯನ್ನು ಮುಂದಿಟ್ಟರು.

**ಪಶ್ಚಿಮ ಬಂಗಾಳ ಮಾದರಿ ಸಂಘಟನೆಗೆ ತಾಕೀತು:** ನಿತಿನ್ ನಬಿನ್ ಪ್ರಮುಖವಾಗಿ ರಾಜ್ಯ ಬಿಜೆಪಿ ನಾಯಕರಿಗೆ ಪಶ್ಚಿಮ ಬಂಗಾಳ ಮಾದರಿಯಲ್ಲಿ ಸಂಘಟನೆ, ಹೋರಾಟ ಮಾಡುವಂತೆ ತಾಕೀತು ಮಾಡಿದರು. ಪಕ್ಷ ಸಂಘಟನೆಗೆ ಹೆಚ್ಚಿನ ಒತ್ತು ಕೊಡಬೇಕು. ಏನೇ ಹೋರಾಟವಿರಲಿ ಸಂಘಟನೆಯನ್ನು ಜೊತೆ ಜೊತೆಗೆ ಕೊಂಡೊಯ್ಯಬೇಕು. ಬೂತ್ ಮಟ್ಟ, ಶಕ್ತಿ ಕೇಂದ್ರ, ಮಂಡಲ, ಮಹಾ ಮಂಡಲ, ಜಿಲ್ಲಾ ಮಟ್ಟ, ರಾಜ್ಯಮಟ್ಟದಲ್ಲಿ ಹೋರಾಟ ನಡೆಸಬೇಕು. ಎಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡಬೇಕು. ಪಶ್ಚಿಮ ಬಂಗಾಳ ಮಾದರಿಯಲ್ಲಿ ಕಾರ್ಯಕರ್ತರು, ನಾಯಕರು ಗ್ರೌಂಡ್‌ಗಿಳಿದು ಸಂಘಟನೆ, ಹೋರಾಟ ಮಾಡಬೇಕು.

ನಾಳೆಯೇ ಚುನಾವಣೆ ಇದೆ ಎಂಬ ಭಾವನೆಯೊಂದಿಗೆ ಸಕ್ರಿಯವಾಗಿ ಸಂಘಟನೆ, ಹೋರಾಟ ನಡೆಸಬೇಕು ಎಂದು ಸೂಚನೆ ನೀಡಿದರು. ಎಸ್‌ಐಆರ್‌ನ್ನು ಚುನಾವಣೆ ರೀತಿಯಲ್ಲಿ ಪರಿಗಣಿಸಿ ಕೆಲಸ ಮಾಡಿ. ಅರ್ಹ ಮತದಾರರು ಡಿಲೀಟ್ ಆಗದಂತೆ, ಅನರ್ಹರು ಮತದಾರರ ಪಟ್ಟಿಯಲ್ಲಿ ಇರದಂತೆ ನಿಗಾವಹಿಸಿ. ಎಸ್‌ಐಆರ್‌ನ್ನು ಚುನಾವಣೆ ರೀತಿಯಾಗಿ ತೆಗೆದುಕೊಂಡು ಕೆಲಸ ಮಾಡಿದರೆ, ಜಿಬಿಎ ಚುನಾವಣೆಯನ್ನು ಗೆಲ್ಲಬಹುದು. ಜಿಬಿಎ ಚುನಾವಣೆ ಗೆದ್ದರೆ ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಗೆಲುವು ಸುಲಭವಾಗಲಿದೆ. ಈ ಮಾರ್ಗಸೂಚಿಗಳನ್ನು ಗಮನದಲ್ಲಿಟ್ಟುಕೊಂಡು 2028ರ ವಿಧಾನಸಭೆ ಚುನಾವಣೆಯಲ್ಲಿ ಕೆಲಸ ಮಾಡಬೇಕು ಎಂದು ತಿಳಿಸಿದರು.

## ಸೀಮಿತವಾಗುವುದು ಬೇಡ

**ಕೇವಲ ಮಾಧ್ಯಮ ಹೇಳಿಕೆ, ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಿದರೆ ಸಾಕಾಗುವುದಿಲ್ಲ. ತಳಮಟ್ಟದಲ್ಲಿ ಹೋರಾಟ ನಡೆಸಬೇಕು. ವಿಧಾನಸಭೆಯಲ್ಲಿ ಮಾತನಾಡಿದರೆ ಅಷ್ಟೇ ಸಾಕಾಗುವುದಿಲ್ಲ. ಹೊರಗೆ ಬಂದು ಗ್ರೌಂಡ್ ಮಟ್ಟದಲ್ಲಿ ಸರ್ಕಾರದ ವೈಫಲ್ಯಗಳ ವಿರುದ್ಧ ಹೋರಾಟ ಮಾಡಬೇಕು. ಶಾಸಕರುಗಳು ಸಂಘಟನೆಯ ಜೊತೆಗೆ ಹೋರಾಟಗಳನ್ನು ಮಾಡಬೇಕು. ಒಗ್ಗಟ್ಟಾಗಿ ಕೆಲಸ ಮಾಡಬೇಕು. ಪಕ್ಷ ಸಂಘಟನೆ, ಹೋರಾಟಕ್ಕೆ ಹೆಚ್ಚಿನ ಒತ್ತು ನೀಡಬೇಕು ಎಂದು ಬಿಜೆಪಿ ಅಧ್ಯಕ್ಷರು ಖಡಕ್ ಆಗಿ ಹೇಳಿದರು.**


**ಈ ದಿನದ ದರ** ಪೆಟ್ರೋಲ್: 108.09 ₹/L ಡೀಸೆಲ್ : 95.99 ₹/L ಬಂಗಾರ: ₹ 15,906/Gram 24ct ₹14,580/Gram 22ct ಬೆಳ್ಳಿ: ₹285.00/Gram

# ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ: ನಾಯಂಡಹಳ್ಳಿಯಲ್ಲಿ ಬಿಜೆಪಿ ಪಕ್ಷಕ್ಕೆ ಸೇರ್ಪಡೆ ಕಾರ್ಯಕ್ರಮ

• ಉದಯವಾಹಿನಿ, ಬೆಂಗಳೂರು

ಹಿರಿಯ ರಾಜಕಾರಣಿ ಬಿ.ಕೆ.ಹರಿಪ್ರಸಾದ್ ನೇರ ಚುನಾವಣೆ ಎದುರಿಸಿಲ್ಲ, ಹಿಂಬಾಗಿಲ ರಾಜಕಾರಣಿ–ಕೆ.ಉಮೇಶ್ ಶೆಟ್ಟಿಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ ಬಿಜೆಪಿ ಪಕ್ಷದ ಮುಖಂಡರು, ದಕ್ಷಿಣ ಜಿಲ್ಲಾ ಬಿಜೆಪಿ ಉಪಾಧ್ಯಕ್ಷರಾದ ಕೆ.ಉಮೇಶ್ ಶೆಟ್ಟಿರವರ ನೇತೃತ್ವದಲ್ಲಿ ನಾಯಂಡಹಳ್ಳಿ ವಾರ್ಡಿನ ರಮೇಶ್ ಮತ್ತು ಶ್ರೀನಿವಾಸ್ ರವರು ಅಪಾರ ಬೆಂಬಲಿಗರ ಜೊತೆಯಲ್ಲಿ ಬಿಜೆಪಿ ಪಕ್ಷಕ್ಕೆ ಸೇರ್ಪಡೆಯಾದರು, ಪಕ್ಷದ ಧ್ವಜ ನೀಡಿ, ಶಾಲು ಹಾಕಿ ಬರಮಾಡಿಕೊಳ್ಳಲಾಯಿತು.

ಇದೇ ಸಂದರ್ಭದಲ್ಲಿ ಕೆ.ಉಮೇಶ್ ಶೆಟ್ಟಿರವರು ಮಾತನಾಡಿ ಬಿಜೆಪಿ ಪಕ್ಷಕ್ಕೆ ವಿಶ್ವದಲ್ಲಿ ಅತಿಹೆಚ್ಚು ಸದಸ್ಯರು ಹೊಂದಿರುವ ಪಕ್ಷ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ . ದೇಶದ ಎಲ್ಲಾ ಕಡೆಗಳಲ್ಲಿ ಬಿಜೆಪಿ ಪಕ್ಷದ ಕಮಲ ಅರಳಿದೆ .ಬಿಜೆಪಿ ಪಕ್ಷ ಪ್ರಧಾನಿ ನರೇಂದ್ರಮೋದಿ ನೇತೃತ್ವದಲ್ಲಿ ಕಳೆದ 12ವರ್ಷದಲ್ಲಿ ವಿಶ್ವದ ಬಲಿಷ್ಠ ರಾಷ್ಟ್ರವಾಗಿ




ಹೊರಹೊಮ್ಮಿದೆ. ಆರ್ಥಿಕ ಸ್ಥಿತಿಯಲ್ಲಿ ವಿಶ್ವದಲ್ಲಿ ನಾಲ್ಕನೇಯ ಸ್ಥಾನದಲ್ಲಿ ಇದೆ. ಹಲವಾರು ಕಾರ್ಯಕರ್ತರು ಪಕ್ಷ ಬಿಟ್ಟು ಹೋಗಿದ್ದರು, ಇಂದು ಮೋದಿರವರ ಆಡಳಿತ ಮತ್ತು ಪಕ್ಷ ಸಂಘಟನೆ ನೋಡಿ ಮತ್ತೇ ಪಕ್ಷಕ್ಕೆ ಮರಳಿ ಬಂದಿದ್ದಾರೆ.ಬಿ.ಕೆ. ಹರಿಪ್ರಸಾದ್‌ರವರು ಎಂದು ನೇರ ಚುನಾವಣೆಯಲ್ಲಿ ಇಡಿ ಜೀವಮಾನದಲ್ಲಿ ಗೆದ್ದಿಲ್ಲ , ಹಿಂಬಾಗಿಲಿನಿಂದ ರಾಜಕಾರಣ ಮಾಡಿದ್ದಾರೆ. ಪ್ರಧಾನಿರವರ ವಯಸ್ಸು ಮುಖ್ಯವಲ್ಲ ಅವರಲ್ಲಿರುವ ಜ್ಞಾನರ್ಜನೆ ಮುಖ್ಯ ಪ್ರಧಾನಿ ನರೇಂದ್ರಮೋದಿರವರು ವಿಶ್ವ ಮೆಚ್ಚಿದ ನಾಯಕ ಬಿಜೆಪಿ ಪಕ್ಷದಲ್ಲಿ 18ಕೋಟಿ ಸದಸ್ಯರು ಇದ್ದಾರೆ.

ಯುವ ನೇತಾರ ನಿತಿನ್ ನಬೀನ್ ರವರನ್ನು ರಾಷ್ಟ್ರೀಯ ಅಧ್ಯಕ್ಷರಾಗಿ ಮಾಡಿ ಯುವ ಜನತೆಗೆ ಉತ್ತಮ ಸಂದೇಶ ನೀಡಿದ್ದಾರೆ. ಪಕ್ಷ ತಾಯಿ ಇದ್ದಂತೆ. ದೇಶ ಮೊದಲು, ನಂತರ ಪಕ್ಷ , ವ್ಯಕ್ತಿ ಅಮೇಲೆ ಹಾಗೂ ವ್ಯಕ್ತಿಗಿಂತ ಪಕ್ಷ ದೊಡ್ಡದು ಎಂಬ ಸಿದ್ಧಾಂತವಿರುವ ಪಕ್ಷ ಪಾಲಿಕೆ ಚುನಾವಣೆ ಯಾವಗಾಲಾದರು ಬರಬಹುದು. ಉತ್ತಮ ಕಾರ್ಯಕರ್ತರಿಗೆ ಅವಕಾಶ ಸಿಗಲಿದೆ ಅವರನ್ನು ಗೆಲ್ಲಿಸಲು ಹಗಲಿರುಳು ಶ್ರಮಿಸಬೇಕು.

ಎಸ್.ಐ.ಆರ್. ಕುರಿತು ಸಾರ್ವಜನಿಕರು ಅರ್ಥಮಾಡಿಕೊಳ್ಳಬೇಕು. ನಗರದಲ್ಲಿ ಕಡಿಮೆ ಮತದಾನವಾಗುತ್ತಿದೆ ಇದಕ್ಕೆ ಕಾರಣ ಎರಡು ಕಡೆಗಳಲ್ಲಿ ಮತದಾನ ಹಕ್ಕು ಪಡೆದಿರುತ್ತಾರೆ ಇದಕ್ಕೆ ಕಡಿವಾಣ ಹಾಕಲು ಎಸ್.ಐ.ಆರ್.ಬಂದಿದೆ ಎಂದು ಹೇಳಿದರು.

### ಮನೆ ನೋಂದಾಣಿ ಮಾಡಲು ಬೆಲೆ ಏರಿಕೆ

**ಇರಾನ್–ಇಸ್ರೇಲ್, ಅಮೇರಿಕಾ ಯುದ್ದದಿಂದ ಬೆಲೆ ಏರಿಕೆ ಹೆಚ್ಚಾಗಿದೆ ಕಾಂಗ್ರೆಸ್ ಪಕ್ಷದವರು ಬಿಜೆಪಿ ಸರ್ಕಾರ ಕಾರಣ ಎಂದು ಸುಳ್ಳು ಸುದ್ದಿ ಹಬ್ಬಿಸುತ್ತಿದ್ದಾರೆ. ರಾಜ್ಯದಲ್ಲಿ ವಿದ್ಯುತ್ ಹಾಲು, ನೀರಿನ ಬಿಲ್ಲು , ಮನೆ ನೋಂದಾಣಿ ಮಾಡಲು ಬೆಲೆ ಏರಿಕೆ ಮಾಡಿದ್ದಾರೆ ಇದಕ್ಕೆ ರಾಜ್ಯ ಕಾಂಗ್ರೆಸ್ ಸರ್ಕಾರ ನಾಡಿನ ಜನತೆಗೆ ಉತ್ತರಿಸಬೇಕು. ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ಗಂಗೊಂಡನಹಳ್ಳಿ ಮತ್ತು ಗೋರಿ ಪಾಳ್ಯ ಎರಡು ಕಡೆ ಮತಗಳು ಇರುತ್ತದೆ ಈ ರೀತಿಯಿಂದ ಕಳ್ಳ ಮತದಾನವಾಗುತ್ತಿದೆ ಎಸ್.ಐ.ಆರ್‌ನಿಂದ ಒಂದೇ ಕಡೆ ಮತದಾನಕ್ಕೆ ಅವಕಾಶವಿರಲಿದೆ.**

## ರಾಜ್ಯಸಭಾ ಚುನಾವಣೆಗೆ 'ಕೈ'ನಲ್ಲಿ ಭಾರಿ ಪೈಪೋಟಿ:ಮುಂಚೂಣಿಯಲ್ಲಿವೆ ಕೆಲ ನಾಯಕರ ಹೆಸರು




• ಉದಯವಾಹಿನಿ, ಬೆಂಗಳೂರು

ಜೂನ್ 18ರಂದು ನಡೆಯಲಿರುವ ಕರ್ನಾಟಕದ ನಾಲ್ಕು ರಾಜ್ಯಸಭಾ ಸ್ಥಾನಗಳ ಚುನಾವಣೆಗೆ ಕಾಂಗ್ರೆಸ್‌ನಲ್ಲಿ ಆಕಾಂಕ್ಷಿಗಳ ಸಂಖ್ಯೆ ಹೆಚ್ಚಾಗಿದೆ. ಮೂರು ಸ್ಥಾನಗಳನ್ನು ಸುಲಭವಾಗಿ ಗೆಲ್ಲುವ ನಿರೀಕ್ಷೆಯಲ್ಲಿ ಕಾಂಗ್ರೆಸ್ ಇದ್ದು, ಪಕ್ಷದ ರಾಷ್ಟ್ರೀಯ ನಾಯಕರುಗಳಾದ ಸುಪ್ರಿಯಾ ಶ್ರೀನೇಟ್ ಮತ್ತು ಪವನ್ ಖೇರಾ ಅವರ ಹೆಸರುಗಳು ಮುಂಚೂಣಿಯಲ್ಲಿವೆ ಎನ್ನಲಾಗಿದೆ. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಕರ್ನಾಟಕದಿಂದ ಮಾಜಿ ಪ್ರಧಾನಿ ಹೆಚ್‌ಡಿ ದೇವೇಗೌಡ ಸೇರಿದಂತೆ ಹಾಲಿ ಶಾಸಕರ ಅವಧಿ ಪೂರ್ಣಗೊಂಡ ನಂತರ ಜೂನ್ ಮತ್ತು ಜುಲೈನಲ್ಲಿ 24 ಸ್ಥಾನಗಳು ತೆರವಾಗಲಿರುವ ಹಿನ್ನೆಲೆ ಪೈಪೋಟಿ ಜೋರಾಗಿದೆ.

2023ರ ಕರ್ನಾಟಕ ವಿಧಾನಸಭೆ ಚುನಾವಣೆಗೆ ಮುನ್ನ ಈ ಇಬ್ಬರು ನಾಯಕರು ರಾಜ್ಯ ಕಾಂಗ್ರೆಸ್ ಘಟಕದೊಂದಿಗೆ ಸಕ್ರಿಯವಾಗಿ ಕೆಲಸ ಮಾಡಿದ್ದ ಹಿನ್ನೆಲೆ ಅವರನ್ನು ರಾಜ್ಯಸಭೆ ಚುನಾವಣೆಗೆ ಪರಿಗಣಿಸುವ ಸಾಧ್ಯತೆ ಇದೆ ಎಂದು ಪಕ್ಷದ ಮೂಲಗಳು ತಿಳಿಸಿವೆ. ಜೊತೆಗೆ ಜೂನ್ 30ರಂದು ವಿಧಾನ ಪರಿಷತ್ ಸದಸ್ಯತ್ವ ಅವಧಿ ಮುಗಿಯಲಿರುವ ಹಿರಿಯ ನಾಯಕ ಬಿ.ಕೆ. ಹರಿಪ್ರಸಾದ್ ಹೆಸರೂ ರಾಜ್ಯಸಭಾ ಚುನಾವಣೆ ಸಂಬಂಧ ಕೇಳಿಬರುತ್ತಿದೆ. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಶಾಶ್ವತ ಸದಸ್ಯರಾಗಿರುವ ಹರಿಪ್ರಸಾದ್, ಹರಿಯಾಣದ ಎಐಸಿಸಿ ಉಸ್ತುವಾರಿಯೂ ಆಗಿದ್ದಾರೆ.

ಆದರೆ ಪಕ್ಷದ ಕೆಲ ನಾಯಕರು, ಸುಪ್ರಿಯಾ ಶ್ರೀನೇಟ್ ಮತ್ತು ಪವನ್ ಖೇರಾ ಅವರನ್ನು ಅವರವರ ರಾಜ್ಯಗಳಿಂದಲೇ ರಾಜ್ಯಸಭೆಗೆ ಕಳುಹಿಸಬೇಕು. ಕರ್ನಾಟಕದ ನಾಯಕರಿಗೆ ಅವಕಾಶ ನೀಡಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಇನ್ನಿತರ ಆಕಾಂಕ್ಷಿಗಳ ಪಟ್ಟಿಯಲ್ಲಿ ಸುಪ್ರೀಂಕೋರ್ಟ್ ಹಿರಿಯ ವಕೀಲ ಮೋಹನ್ ಕಟಾರ್ಕಿ, ಮಾಜಿ ಶಾಸಕಿ ಅಂಜಲಿ ನಿಂಬಾಳ್ಕರ್, ಮಾಜಿ ರಾಜ್ಯಸಭಾ ಸದಸ್ಯ ರಾಜೀವ್ ಗೌಡ, ಮಾವು ಅಭಿವೃದ್ಧಿ ಮಂಡಳಿ ಅಧ್ಯಕ್ಷ ಡಾ. ಬಿ.ಸಿ. ಮುದ್ದುಗಂಗಾಧರ್ ಹಾಗೂ ಮಾಜಿ ಕೇಂದ್ರ ಸಚಿವ ಕೆ ರೆಹಮಾನ್ ಖಾನ್ ಅವರ ಪುತ್ರ ಮನ್ಸೂರ್ ಅಲಿ ಖಾನ್ ಅವರ ಹೆಸರುಗಳೂ ಚರ್ಚೆಯಲ್ಲಿವೆ.

## ಮುಂಬರುವ ಚುನಾವಣೆಯಲ್ಲಿ ಬಿಜೆಪಿ ಗೆಲುವಿಗೆ ರಾಷ್ಟ್ರೀಯ ಅಧ್ಯಕ್ಷರಿಂದ ಸಲಹೆ: ಸಿ.ಟಿ ರವಿ

• ಉದಯವಾಹಿನಿ,ಬೆಂಗಳೂರು

ಮುಂಬರುವ ಚುನಾವಣೆಗಳಲ್ಲಿ ಬಿಜೆಪಿ ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ವಹಿಸಬೇಕಾದ ಕ್ರಮಗಳ ಕುರಿತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾದ ನಿತಿನ್ ನಬಿನ್ ಅವರು ಸಲಹೆ ಮತ್ತು ಸೂಚನೆಗಳನ್ನು ನೀಡಿದರು ಎಂದು ಮಾಜಿ ಸಚಿವ ಸಿ.ಟಿ.ರವಿ ಅವರು ಹೇಳಿದ್ದಾರೆ.

ನಿತಿನ್ ನಬಿನ್ ಅವರೊಂದಿಗೆ ನಡೆದ ಸಭೆಯ ನಂತರ ರಾಜ್ಯ ಬಿಜೆಪಿ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಈಗ ಆಡಳಿತ ನಡೆಸುತ್ತಿರುವ ಕಾಂಗ್ರೆಸ್‌ನ ವೈಫಲ್ಯಗಳನ್ನು ಜನರಿಗೆ ಎತ್ತಿತೋರಿಸಿ ಬಿಜೆಪಿ ವಿಶ್ವಾಸಾರ್ಹ ಪಕ್ಷ ಎಂಬುದನ್ನು ಮನವರಿಕೆ ಮಾಡಿಕೊಡಲು ಎಲ್ಲರೂ ಸಂಘಟನಾತ್ಮಕವಾಗಿ ಶ್ರಮಿಸಬೇಕು. ಪಕ್ಷಕ್ಕಾಗಿ ಕಟಿಬದ್ಧರಾಗಿ ದುಡಿಯಬೇಕು ಎಂದು ರಾಷ್ಟ್ರೀಯ ಅಧ್ಯಕ್ಷರು ಸಲಹೆ ನೀಡಿದರು ಎಂದು ಮಾಹಿತಿ ನೀಡಿದರು. ಅವರು ಅಧ್ಯಕ್ಷರಾದ ನಂತರ ಕರ್ನಾಟಕಕ್ಕೆ ಅಧಿಕೃತ ಭೇಟಿ ನೀಡಿದ್ದಾರೆ. ಪಕ್ಷದ ಸಂಸದರು, ಶಾಸಕರು, ಜಿಲ್ಲಾಧ್ಯಕ್ಷರ ಮಟ್ಟದ ಮೇಲಿನವರೊಂದಿಗೆ ಸಂವಾದ ನಡೆಸಿದರು. ಪಕ್ಷದ ಪರಿಶ್ರಮದಿಂದಾಗಿ 22ಕ್ಕೂ ಹೆಚ್ಚು ರಾಜ್ಯಗಳಲ್ಲಿ ಬಿಜೆಪಿ ಅಧಿಕಾರದಲ್ಲಿದೆ. 400ಕ್ಕೂ ಹೆಚ್ಚು ಸಂಸದರಿದ್ದಾರೆ, 2000ಕ್ಕೂ ಹೆಚ್ಚು ಶಾಸಕರಿದ್ದಾರೆ. ಇದು ಪಕ್ಷದ ಮೇಲೆ ಜನರು ಇಟ್ಟ ವಿಶ್ವಾಸದಿಂದ ಸಾಧ್ಯವಾಗಿದೆ. ಇದೇ ನಂಬಿಕೆಯನ್ನು ಮುಂದಿನ ಚುನಾವಣೆಗಳಲ್ಲಿ ಉಳಿಸಿಕೊಳ್ಳಬೇಕು.

ಪ್ರತಿಯೊಬ್ಬ ಮುಖಂಡರು, ಶಾಸಕರು ಕಾರ್ಯಕರ್ತರೊಂದಿಗೆ ಆತ್ಮೀಯ ಸಂಬಂಧ ಇಟ್ಟುಕೊಳ್ಳಬೇಕು. ಜನರೊಟ್ಟಿಗೆ ಸಂವಾದ ನಡೆಸಬೇಕು, ಜನಪರ ಕಾರ್ಯಗಳ ಮೂಲಕವೇ ಗೆಲ್ಲಬೇಕು, ಜನಪರ ಹೋರಾಟಗಳ ಮೂಲಕ ಸಮಸ್ಯೆಗಳ ನಿವಾರಣೆಗೆ ಪರಿಹಾರ ಕೊಡಬೇಕು ಎಂಬ ಮಾತನ್ನು ಹೇಳಿದರು. ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಜನರಿಗೆ ಯಾವ ವಿಶ್ವಾಸವನ್ನು ಮೂಡಿಸಿ ಹೇಗೆ ಅಧಿಕಾರಕ್ಕೆ ಬಂದಿತ್ತೋ ಆ ವಿಶ್ವಾಸವನ್ನು ಉಳಿಸಿಕೊಳ್ಳಲು ವಿಫಲವಾಗಿದೆ. ಭ್ರಷ್ಟಾಚಾರದ ವಿರುದ್ಧ ಮಾತನಾಡಿದವರು ಈಗ ಎಲ್ಲಾ ಸಚಿವರು ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ. ಹೆಚ್ಚಿನ ಸಚಿವರ ಮೇಲೆ ಭ್ರಷ್ಟಾಚಾರ ಆರೋಪಗಳಿವೆ, ಮುಖ್ಯಮಂತ್ರಿಗಳೂ ಭ್ರಷ್ಟಾಚಾರ ಆರೋಪದಿಂದ ಮುಕ್ತರಾಗಿಲ್ಲ. ಜನರ ಬದುಕನ್ನು ಹಸನು ಮಾಡುವ ಭರವಸೆ ಕೊಟ್ಟ ಕಾಂಗ್ರೆಸ್ ಬೆಲೆ ಏರಿಕೆ ಮೂಲಕ ಜನಸಾಮಾನ್ಯರ ಬದುಕನ್ನು ದುಸ್ತರ ಮಾಡಿದೆ.

## ಜಾರಿಗೂ ಮುನ್ನವೇ ಗಂಭೀರ ಆರೋಪ ರಾಜ್ಯದ 75 ಲಕ್ಷ ಜನ ಹೊರಕ್ಕೆ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಮತದಾರರ ಪಟ್ಟಿ ತೀವ್ರ ಪರಿಷ್ಕರಣೆಗೆ ಮುನ್ನ ನಡೆದಿರುವ ಮ್ಯಾಪಿಂಗ್‌ನಲ್ಲಿ 75 ಲಕ್ಷ ಜನರನ್ನು ಹೊರಗಿಡಲಾಗಿದೆ ಎಂದು ಕೆಪಿಸಿಸಿ ವಕ್ತಾರ ಎಂ. ಲಕ್ಷ್ಮಣ್ ಗಂಭೀರ ಆರೋಪ ಮಾಡಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮತದಾರರ ಪಟ್ಟಿ ತೀವ್ರ ಪರಿಷ್ಕರಣೆ ಕುರಿತು ಸಮಗ್ರ ವಿಶ್ಲೇಷಣೆ ನಡೆಸಿದ ಅವರು, ಬಿಜೆಪಿ ಮತ್ತು ಚುನಾವಣಾ ಆಯೋಗದ ಜಂಟಿ ಸಹಯೋಗದಲ್ಲಿ 2028ರ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಪರಿಷ್ಕರಣೆ ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ಜೂನ್ 20ರ ನಂತರ ಮತದಾರರ ಪಟ್ಟಿ ಪರಿಷ್ಕರಣೆಯಾಗಲಿದೆ. ಅದಕ್ಕೂ ಮುನ್ನ ನಡೆದಿರುವ ಮ್ಯಾಪಿಂಗ್‌ನಲ್ಲಿ ಭಾರಿ ಸಂಚು ನಡೆದಿದೆ. ಮೈಸೂರು ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳಲ್ಲಿ 28 ಲಕ್ಷ ಮತದಾರರ ಪೈಕಿ 3.5 ಲಕ್ಷ ಮತದಾರರನ್ನು ಮ್ಯಾಪಿಂಗ್‌ನಿಂದ ಹೊರಗಿಡಲಾಗಿದೆ.

## ಮೋದಿ ಸಾಗುವ ಮಾರ್ಗದ ಬಳಿ ಸ್ಫೋಟಕ ವಸ್ತುಗಳು ಪತ್ತೆ

# 6 ಪೊಲೀಸ್ ಸಿಬ್ಬಂದಿ ಅಮಾನತು

### ದಕ್ಷಿಣ ಎಸ್‌ಪಿ ಕಠಿಣ ಆದೇಶ

**ಬೆಂಗಳೂರು ದಕ್ಷಿಣ ವಿಭಾಗದ ಪೊಲೀಸ್ ಅಧೀಕ್ಷಕರಾದ ಶ್ರೀನಿವಾಸ್ ಗೌಡ ಅವರು ಈ ಅಮಾನತು ಆದೇಶವನ್ನು ಹೊರಡಿಸಿದ್ದಾರೆ. ಅಮಾನತುಗೊಂಡವರಲ್ಲಿ ಒಬ್ಬರು ಪಿಎಸ್‌ಐ ಒಬ್ಬರು ಎಎಸ್‌ಐ ಹಾಗೂ ನಾಲ್ವರು ಪೊಲೀಸ್ ಪೇದೆಗಳು ಸೇರಿದ್ದಾರೆ. ವಿವಿಐಪಿ ಭದ್ರತೆಯಂತಹ ಅತ್ಯಂತ ಸೂಕ್ಷ್ಮ ಜವಾಬ್ದಾರಿಯ ಸಮಯದಲ್ಲಿ ನಿರ್ಲಕ್ಷ್ಯ ಹಾಗೂ ಬೇಜವಾಬ್ದಾರಿತನ ತೋರಿದ ಕಾರಣಕ್ಕಾಗಿ ಇವರ ವಿರುದ್ಧ ಈ ಕಠಿಣ ಕ್ರಮ ಜರುಗಿಸಲಾಗಿದೆ.**

### ಭದ್ರತಾ ಸ್ಥಳದ ಬಳಿ ಸ್ಫೋಟಕಗಳು!

ಕಳೆದ ಮೇ 10ರಂದು ಬೆಂಗಳೂರು ದಕ್ಷಿಣ ತಾಲ್ಲೂಕಿನ ವಡೇರಹಳ್ಳಿ ಗೇಟ್ ಬಳಿ ಈ ಆಘಾತಕಾರಿ ಘಟನೆ ನಡೆದಿತ್ತು. ಪ್ರಧಾನಿ ನರೇಂದ್ರ ಮೋದಿ ಅವರ ಅಧಿಕೃತ ಭೇಟಿಯ ಹಿನ್ನೆಲೆಯಲ್ಲಿ ಈ ಮಾರ್ಗದಲ್ಲಿ ಭಾರಿ ಬಂದೋಬಸ್ತ್ ನಿಯೋಜಿಸಲಾಗಿತ್ತು. ಅಮಾನತುಗೊಂಡಿರುವ ಆರು ಜನ ಪೊಲೀಸರನ್ನು ಸ್ಫೋಟಕಗಳು ಪತ್ತೆಯಾದ ವಡೇರಹಳ್ಳಿ ಗೇಟ್‌ನ ನಿಗದಿತ ಜಾಗದಲ್ಲೇ ಬಂದೋಬಸ್ತ್ ಕರ್ತವ್ಯಕ್ಕೆ ನಿಯೋಜನೆ ಮಾಡಲಾಗಿತ್ತು. ಆದರೆ, ಇವರು ಕರ್ತವ್ಯದಲ್ಲಿದ್ದ ಸ್ಥಳದ ಅತ್ಯಂತ ಸಮೀಪದಲ್ಲೇ ತೀವ್ರ ತರಹದ ಸ್ಫೋಟಕ ವಸ್ತುಗಳು ಪತ್ತೆಯಾಗಿದ್ದು ಇಡೀ ಪೊಲೀಸ್ ಇಲಾಖೆಯನ್ನು ತಲ್ಲಣಗೊಳಿಸಿತ್ತು.

• ಉದಯವಾಹಿನಿ, ಬೆಂಗಳೂರು

ಈ ತಿಂಗಳ ಆರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಭದ್ರತಾ ದಳ ವಾಹನ ಸಂಚರಿಸಬೇಕಿದ್ದ ಮಾರ್ಗದ ಬಳಿ ಸ್ಫೋಟಕ ವಸ್ತುಗಳು ಪತ್ತೆಯಾದ ಪ್ರಕರಣದಲ್ಲಿ, ಕರ್ತವ್ಯ ಲೋಪದ ಆರೋಪದಡಿ ಒಬ್ಬ ಅಧಿಕಾರಿಯನ್ನು ಸೇರಿ ಆರು ಪೊಲೀಸ್ ಸಿಬ್ಬಂದಿಯನ್ನು ಅಮಾನತುಗೊಳಿಸಲಾಗಿದೆ.

ಮೇ 10ರಂದು ಬೆಂಗಳೂರು ದಕ್ಷಿಣ ತಾಲ್ಲೂಕಿನ ವಡೇರಹಳ್ಳಿ ಗೇಟ್ ಸಮೀಪ, ಪ್ರಧಾನಿಯವರು ಆರ್ಟ್ ಆಫ್ ಲಿವಿಂಗ್ ಆಶ್ರಮಕ್ಕೆ ತೆರಳುವ ಕೆಲವೇ ಗಂಟೆಗಳ ಮೊದಲು ಈ ಘಟನೆ ನಡೆದಿತ್ತು. ಈ ಸಂಬಂಧ ಬೆಂಗಳೂರು ದಕ್ಷಿಣ ಜಿಲ್ಲೆಯ ಪೊಲೀಸ್ ಅಧೀಕ್ಷಕ ಶ್ರೀನಿವಾಸ ಗೌಡ ಅಮಾನತು ಆದೇಶ ಹೊರಡಿಸಿದ್ದಾರೆ.

ಪೊಲೀಸ್ ಮೂಲಗಳ ಪ್ರಕಾರ, ಭದ್ರತೆ ಮತ್ತು ಬಂದೋಬಸ್ತ್ ಕರ್ತವ್ಯಕ್ಕೆ ನಿಯೋಜಿಸಲ್ಪಟ್ಟಿದ್ದ ಒಬ್ಬ ಪಿಎಸ್‌ಐ, ಒಬ್ಬ ಸಹಾಯಕ ಉಪನಿರೀಕ್ಷಕ ಮತ್ತು ನಾಲ್ವರು ಪೊಲೀಸ್ ಕಾನ್ಸ್‌ಟೇಬಲ್‌ಗಳನ್ನು ಅಮಾನತುಗೊಳಿಸಲಾಗಿದೆ. ಪ್ರಧಾನಿಯವರ ಭೇಟಿ ಸಂಬಂಧ ಅತ್ಯಂತ ಸೂಕ್ಷ್ಮ ಭದ್ರತಾ ಕಾರ್ಯಾಚರಣೆಗೆ ನಿಯೋಜನೆಗೊಂಡಿದ್ದರೂ, ಸಿಬ್ಬಂದಿ ಅಗತ್ಯ ಎಚ್ಚರಿಕೆ ಮತ್ತು ಜಾಗ್ರತೆ ವಹಿಸಲು ವಿಫಲರಾದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಧಾನಿ ನಗರಕ್ಕೆ ಆಗಮಿಸುವ ಸುಮಾರು ಎರಡು ಗಂಟೆಗಳ ಮೊದಲು, ಬೆಳಗ್ಗೆ 9 ಗಂಟೆ ಸುಮಾರಿಗೆ ರಸ್ತೆ ಬದಿಯಲ್ಲಿ ಅನುಮಾನಾಸ್ಪದ ಪೆಟ್ಟಿಗೆಯನ್ನು ಒಬ್ಬ ಕಾನ್ಸ್‌ಟೇಬಲ್ ಪತ್ತೆಹಚ್ಚಿದ್ದರಿಂದ ಪೊಲೀಸ್ ಇಲಾಖೆ ಮತ್ತು ಭದ್ರತಾ ಸಂಸ್ಥೆಗಳಲ್ಲಿ ಆತಂಕ ಉಂಟಾಗಿತ್ತು.

ಮಾಹಿತಿ ತಿಳಿದ ಕೂಡಲೇ ಬಾಂಬ್ ಪತ್ತೆ ಮತ್ತು ನಿಷ್ಕ್ರಿಯ ದಳ ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿತು. ಪೆಟ್ಟಿಗೆಯನ್ನು ತೆರೆಯುತ್ತಿದ್ದಂತೆ, ಟೇಪ್‌ನಿಂದ ಸುತ್ತಿ ಇಡಲಾಗಿದ್ದ ಜೆಲಟಿನ್ ಕಡ್ಡಿಗಳಂತಿರುವ ಸ್ಫೋಟಕ ವಸ್ತುಗಳು ಪತ್ತೆಯಾದವು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಪತ್ತೆಯ ನಂತರ, ಆರ್ಟ್ ಆಫ್ ಲಿವಿಂಗ್ ಆಶ್ರಮದವರೆಗೆ ಸಾಗುವ ಸಂಪೂರ್ಣ ಮಾರ್ಗವನ್ನು ತೀವ್ರ ಭದ್ರತಾ ತಪಾಸಣೆಗೆ ಒಳಪಡಿಸಲಾಯಿತು. ಬಳಿಕವೇ ಪ್ರಧಾನಿಯವರ ಭದ್ರತಾ ವಾಹನ ದಳ ಸಂಚಾರಕ್ಕೆ ಅನುಮತಿ ನೀಡಲಾಯಿತು.

ನಂತರ ಪೊಲೀಸ್ ಇಲಾಖೆ ಭದ್ರತಾ ವ್ಯವಸ್ಥೆಯಲ್ಲಿನ ಲೋಪಗಳ ಕುರಿತು ಆಂತರಿಕ ತನಿಖೆ ಆರಂಭಿಸಿತು. ಪ್ರಾಥಮಿಕ ತನಿಖೆಯಲ್ಲಿ, ಹೈ–ಸೆಕ್ಯುರಿಟಿ ವಲಯದಲ್ಲಿ ಕರ್ತವ್ಯ ನಿರ್ವಹಣೆಯಲ್ಲಿ ಆರು ಸಿಬ್ಬಂದಿ ನಿರ್ಲಕ್ಷ್ಯ ತೋರಿರುವುದು ಪತ್ತೆಯಾಗಿದ್ದು, ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗಿದೆ.

ಪ್ರಧಾನಿಯವರ ಸಂಚಾರಕ್ಕೆ ನಿಗದಿಪಡಿಸಿದ್ದ ಮಾರ್ಗದಲ್ಲೇ ಸ್ಫೋಟಕ ವಸ್ತುಗಳು ಪತ್ತೆಯಾಗಿರುವುದು ವಿಐಪಿ ಭದ್ರತಾ ಸಿದ್ಧತೆ ಕುರಿತು ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿದೆ.

ರಸ್ತೆ ಬದಿಯಲ್ಲಿ ಸ್ಫೋಟಕ ವಸ್ತುಗಳನ್ನು ಯಾರು ಬಿಟ್ಟುಹೋದರು ಹಾಗೂ ಇದರ ಹಿಂದೆ ಯಾವುದೇ ದೊಡ್ಡ ಸಂಚು ಇದೆಯೇ ಎಂಬುದರ ಕುರಿತೂ ತನಿಖಾಧಿಕಾರಿಗಳು ಪರಿಶೀಲನೆ ನಡೆಸುತ್ತಿದ್ದಾರೆ. ಪ್ರಕರಣದ ಕುರಿತು ಹೆಚ್ಚಿನ ತನಿಖೆ ಮುಂದುವರಿದಿದೆ.




### ಅಲರ್ಟ್ ಇರಲಿಲ್ಲ ಪೊಲೀಸರು; ಹಿರಿಯ ಅಧಿಕಾರಿಗಳ ತರಾಟೆ



**ವಿವಿಐಪಿಗಳು ಬರುವ ಮುನ್ನ ಇಡೀ ಮಾರ್ಗವನ್ನು ಸಂಪೂರ್ಣವಾಗಿ ತಪಾಸಣೆ ನಡೆಸಿ ಹದ್ದಿನ ಕಣ್ಣಿಡಬೇಕಾದದ್ದು ಕರ್ತವ್ಯದ ನಿಯಮ. ಆದರೆ ಸ್ಫೋಟಕಗಳು ಪತ್ತೆಯಾದ ಸ್ಥಳದಲ್ಲೇ ಇದ್ದರೂ ಈ ಸಿಬ್ಬಂದಿಗಳು ಯಾವುದೇ ರೀತಿಯ ಮುನ್ನೆಚ್ಚರಿಕೆ ವಹಿಸಿಲ್ಲ ಹಾಗೂ ಅಲರ್ಟ್ ಆಗಿರಲಿಲ್ಲ ಎನ್ನುವುದು ಉನ್ನತ ಮಟ್ಟದ ತನಿಖೆಯಲ್ಲಿ ಸಾಬೀತಾಗಿದೆ. ಕರ್ತವ್ಯದ ವೇಳೆ ತೋರಿದ ಈ ಅತಿಯಾದ ಅಲಕ್ಷ್ಯವು ಪ್ರಧಾನಿಯವರ ಸುರಕ್ಷತೆಗೆ ಧಕ್ಕೆ ತರುವಂತಹ ಗಂಭೀರ ಲೋಪ ಎಂದು ಪರಿಗಣಿಸಿ, ಎಸ್‌ಪಿ ಶ್ರೀನಿವಾಸ್ ಗೌಡ ಅವರು ತಕ್ಷಣದಿಂದಲೇ ಜಾರಿಗೆ ಬರುವಂತೆ ಎಲ್ಲಾ ಆರು ಜನರನ್ನು ಸೇವೆಯಿಂದ ಅಮಾನತುಗೊಳಿಸಿದ್ದಾರೆ. ಪ್ರಧಾನಿ ಮಾರ್ಗದಲ್ಲಿ ಸ್ಫೋಟಕ ಪತ್ತೆಯಾದ ದಿನದಿಂದಲೇ ಆಂತರಿಕ ತನಿಖೆ ಚುರುಕುಗೊಂಡಿತ್ತು. ಸದ್ಯ ಪೊಲೀಸರ ಅಮಾನತು ನಡೆಸಿರುವುದು ಇಲಾಖೆಯ ಇತರೆ ಸಿಬ್ಬಂದಿಗಳಿಗೆ ಕಟ್ಟುನಿಟ್ಟಿನ ಸಂದೇಶ ರವಾನಿಸಿದಂತಾಗಿದೆ. ಈ ಪ್ರಕರಣದ ಕುರಿತು ಮತ್ತಷ್ಟು ತನಿಖೆ ಮುಂದುವರಿದಿದೆ.**

## ತಡವಾಗಿ ಪರೀಕ್ಷಾ ಕೇಂದ್ರ ತಲುಪಿದ್ದಕ್ಕೆ ಏಕಾಏಕಿ ನಿರಾಕರಣೆ

• ಉದಯವಾಹಿನಿ, ಬೆಂಗಳೂರು

ಸದಾ ಒಂದಿಲ್ಲೊಂದು ಕಾರಣಗಳಿಂದ ಸುದ್ದಿಯಲ್ಲಿರುವ ಬೆಂಗಳೂರಿನ ರಸ್ತೆಗಳ ದುರಾವಸ್ಥೆ ಈಗ ಮತ್ತೆ ಭಾರಿ ಚರ್ಚೆಗೆ ಗ್ರಾಸವಾಗಿದೆ. ನಗರದ ಕಿತ್ತುಹೋದ ರೋಡ್‌ಗಳಿಂದ ವಿದ್ಯಾರ್ಥಿಯೋರ್ವ ಪರೀಕ್ಷೆಯಿಂದ ವಂಚಿತನಾಗಿರುವ ಆರೋಪ ಕೇಳಿಬಂದಿದೆ. ವೈಟ್‌ಫೀಲ್ಡ್, ಮಹಾದೇವಪುರ ಭಾಗದಲ್ಲಿ ರಸ್ತೆಗಳು ಸಂಪೂರ್ಣ ಹಾಳಾಗಿದ್ದು, ವಿದ್ಯಾರ್ಥಿ ಚಾಲುಕ್ಯ ಸರ್ಕಲ್ ಆರ್. ಸಿ. ಕಾಲೇಜಿನ ಪರೀಕ್ಷಾ ಕೇಂದ್ರ ತಲುಪುವಷ್ಟರಲ್ಲಿ ಗೇಟ್ ಕ್ಲೋಸ್ ಆಗಿದೆ. ಹೀಗಾಗಿ ಯುಪಿಎಸ್‌ಸಿ ಪರೀಕ್ಷೆಗಾಗಿ ಸಿದ್ಧತೆ ನಡೆಸಿದ್ದ ವಿದ್ಯಾರ್ಥಿಯ ಶ್ರಮ ನೀರಲ್ಲಿ ಹೋಮ ಮಾಡಿದಂತಾಗಿದೆ ಎಂಬ ಮಾತುಗಳು ಕೇಳಿಬಂದಿವೆ. ಇನ್ನು ಹದಗೆಟ್ಟ ರಸ್ತೆಗಳ ಕಾರಣ ಪರೀಕ್ಷಾ ಕೇಂದ್ರ ತಲುಪಲು ತಡವಾಗಿ ಪರೀಕ್ಷೆಯಿಂದ ವಂಚಿತರಾಗಿರುವ ವಿದ್ಯಾರ್ಥಿ ಪ್ರಮೋದ್‌ಈ ಬಗ್ಗೆ ಪ್ರತಿಕ್ರಿಯಿಸಿದ್ದಾರೆ. ವೈಟ್‌ಫೀಲ್ಡ್‌ನಲ್ಲಿರುವ ತನ್ನ ಮನೆಯಿಂದ ಮುಂಜಾನೆ 7 ಗಂಟೆಗೆ ಹೊರಟಿದ್ದೆ. ಮೆಜೆಸ್ಟಿಕ್‌ನಿಂದ ಪರೀಕ್ಷಾ ಕೇಂದ್ರದವರೆಗೆ ಆಟೋದಲ್ಲಿ ಬಂದಿದ್ದೇನೆ. ವೈಟ್‌ಫೀಲ್ಡ್, ಮಹಾದೇವಪುರ ರಸ್ತೆ ಸರಿಯಿಲ್ಲದ ಕಾರಣ, ಆಟೋಗಳು ಬರಲ್ಲ. ಹೀಗಾಗಿ ಪರೀಕ್ಷಾ ಕೇಂದ್ರ ತಲುಪುವಾಗ ತಡವಾಗಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

## ಪರಪ್ಪನ ಅಗ್ರಹಾರ ಜೈಲಿಂದ ಪರಾರಿ 8 ವರ್ಷಗಳ ಬಳಿಕ ಕದೀಮನ ಕೃತ್ಯ ಬಯಲು

• ಉದಯವಾಹಿನಿ, ಬೆಂಗಳೂರು

ಸುಪ್ರೀಂ ಕೋರ್ಟ್ ಹೆಸರಲ್ಲೇ ನಕಲಿ ಆದೇಶ ಪತ್ರ ಸೃಷ್ಟಿಸಿ, ಜೈಲಧಿಕಾರಿಗಳ ಕಣ್ಣಿಗೆ ಮಣ್ಣೆರಚಿ ಜೈಲಿನಿಂದ ಬಿಡುಗಡೆಯಾಗಿದ್ದ ಖತರ್ನಾಕ್ ಕೈದಿಯೊಬ್ಬನ ಹಗರಣ ಬರೋಬ್ಬರಿ ಎಂಟು ವರ್ಷಗಳ ಬಳಿಕ ಬೆಳಕಿಗೆ ಬಂದಿದೆ. ತಮಿಳುನಾಡು ಮೂಲದ ಜೀವಾವಧಿ ಶಿಕ್ಷೆಗೊಳಗಾಗಿದ್ದ ಅಪರಾಧಿ ಶಂಕರ್ ಆರ್ಮುಗಮ್ ಎಂಬಾತನ ಧೈರ್ಯ ಹಾಗೂ ವಂಚನೆಯ ಕಥೆ ಕೇಳಿ ಸ್ವತಃ ಪೊಲೀಸ್ ಇಲಾಖೆಯೇ ಈಗ ಬೆಚ್ಚಿಬಿದ್ದಿದೆ. ಈ ಮಹಾ ವಂಚನೆಗೆ ಸಂಬಂಧಿಸಿದಂತೆ ಬೆಂಗಳೂರಿನ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ದಾಖಲೆ ಫೋರ್ಜರಿ (ನಕಲು) ಮತ್ತು ವಂಚನೆ ಕಾಯ್ದೆಯಡಿ ಈಗ ಎಫ್‌ಐಆರ್ ದಾಖಲಾಗಿದೆ.

ಇಡೀ ಹಗರಣದ ಹಿನ್ನೆಲೆ ನೋಡುವುದಾದರೆ, 2001ರಲ್ಲಿ ತಮಿಳುನಾಡು ಮೂಲದ ಶಂಕರ್ ಆರ್ಮುಗಮ್ ಮತ್ತು ಆತನ ಗ್ಯಾಂಗ್, ಹಣಕ್ಕಾಗಿ ವ್ಯಕ್ತಿಯೊಬ್ಬನನ್ನು ಕಿಡ್ನಾಪ್ ಮಾಡಿತ್ತು. ಈ ಪ್ರಕರಣದ ಸುದೀರ್ಘ ವಿಚಾರಣೆ ನಡೆಸಿದ ಬೆಂಗಳೂರಿನ ಫಾಸ್ಟ್ ಟ್ರ್ಯಾಕ್ ಕೋರ್ಟ್, ಶಂಕರ್‌ನನ್ನು ಅಪರಾಧಿ ಎಂದು ಘೋಷಿಸಿತ್ತು.

ಐಪಿಎಸ್ ಸೆಕ್ಷನ್ 364 (ಹಣಕ್ಕಾಗಿ ಅಪಹರಣ) ಮತ್ತು ಸೆಕ್ಷನ್ 120 (ಅಪರಾಧಿಕ ಸಂಚು) ಅಡಿಯಲ್ಲಿ ನ್ಯಾಯಾಲಯವು ಈತನಿಗೆ ಜೀವಾವಧಿ ಶಿಕ್ಷೆ ವಿಧಿಸಿ ತೀರ್ಪು ನೀಡಿತ್ತು.


## ಡಿಜಿಟಲ್ ಅರೆಸ್ಟ್ ಹೆಸರಿನಲ್ಲಿ ವೃದ್ಧೆಯಿಂದ 24 ಕೋಟಿ ಪೀಕಿದ ಖದೀಮರು

• ಉದಯವಾಹಿನಿ, ಬೆಂಗಳೂರು

ಡಿಜಿಟಲ್ ಅರೆಸ್ಟ್ ಹೆಸರಿನಲ್ಲಿ ವೃದ್ಧೆಯೋರ್ವರನ್ನು ಬೆದರಿಸಿ ಬರೋಬ್ಬರಿ 24 ಕೋಟಿ ರೂಪಾಯಿ ಸುಲಿಗೆ ಮಾಡಿದ್ದ ಅಂತಾರಾಜ್ಯ ಖದೀಮರನ್ನು ಸಿಸಿಬಿ ಸೈಬರ್ ಕ್ರೈಮ್ ಪೊಲೀಸರು ಬಂಧಿಸಿದ್ದಾರೆ.

ಬ್ಯಾಂಕ್ ಮ್ಯಾನೇಜರ್‌ವೊಬ್ಬರ ಸಮಯಪ್ರಜ್ಞೆಯಿಂದಾಗಿ ವೃದ್ಧೆ ಮತ್ತಷ್ಟು ಹಣ ಕಳೆದುಕೊಳ್ಳುವುದು ತಪ್ಪಿದ್ದಲ್ಲದೆ, ಈ ಬೃಹತ್ ವಂಚನೆ ಪ್ರಕರಣ ಬೆಳಕಿಗೆ ಬಂದಿದೆ. ಶಿವಾಜಿನಗರದ ನಿವಾಸಿಯಾದ ಲಕ್ಷ್ಮೀ ಎಂಬ ವೃದ್ಧೆ ಇತ್ತೀಚೆಗೆ ಪ್ರಾಪರ್ಟಿ ಮಾರಾಟದಿಂದ ಕೋಟ್ಯಂತರ ರೂಪಾಯಿ ಹಣಗಳಿಸಿದ್ದರು. ಅವರ ಬ್ಯಾಂಕ್ ವಹಿವಾಟಿನ ಸಂಪೂರ್ಣ ಮಾಹಿತಿ ಪಡೆದುಕೊಂಡಿದ್ದ ಸೈಬರ್ ವಂಚಕರು, ಅಕ್ರಮ ಹಣ ವರ್ಗಾವಣೆ ಆರೋಪದಡಿ ನಿಮ್ಮನ್ನು ಡಿಜಿಟಲ್ ಅರೆಸ್ಟ್ ಮಾಡಲಾಗಿದೆ ಎಂದು ಹೆದರಿಸಿದ್ದರು. ಕಾನೂನು ಕ್ರಮದ ಭಯ ಬಿದ್ದಿದ್ದ ಲಕ್ಷ್ಮೀ ಕಳೆದ ಜನವರಿಯಿಂದ ಮೇ ತಿಂಗಳವರೆಗೆ ಹಂತಹಂತವಾಗಿ ಒಟ್ಟು 24 ಕೋಟಿ ರೂಪಾಯಿಯನ್ನು ಖದೀಮರಿಗೆ ವರ್ಗಾಯಿಸಿದ್ದರು.

## ''ನೂತನ ಗಣಿತದ ಸಂಪನ್ಮೂಲ ಪುಸ್ತಕ'' ಲೋಕಾರ್ಪಣೆ




• ಉದಯವಾಹಿನಿ, ಬೆಂಗಳೂರು

ವಿದ್ಯಾರ್ಥಿಗಳಲ್ಲಿ ಗಣಿತ ವಿಷಯದ ಅರಿವು, ಆಸಕ್ತಿ ಹಾಗೂ ಸೃಜನಾತ್ಮಕ ಕಲಿಕೆಯ ಮನೋಭಾವವನ್ನು ಬೆಳೆಸುವ ಉದ್ದೇಶದಿಂದ ನಿವೃತ್ತ ಶಿಕ್ಷಕರಾದ ಎಂ. ಶಂಕರ ರವರು ರಚಿಸಿದ '(ನೂತನ ಗಣಿತದ ಸಂಪನ್ಮೂಲ ಪುಸ್ತಕ) ಕೃತಿಯ ಲೋಕಾರ್ಪಣೆ ಕಾರ್ಯಕ್ರಮವು ಬೆಂಗಳೂರಿನ ಶ್ರೀ ಜಯರಾಮ ಸೇವಾ ಮಂಡಳಿಯಲ್ಲಿ ನೆರವೇರಿತು. ಕಾರ್ಯಕ್ರಮದಲ್ಲಿ ತುಮಕೂರಿನ ಶ್ರೀ ರಾಮಕೃಷ್ಣ ವಿವೇಕಾನಂದ ಆಶ್ರಮದ ಶ್ರೀ ವೀರೇಶಾನಂದ ಸರಸ್ವತಿ ಅವರು ದಿವ್ಯ ಸಾನ್ನಿಧ್ಯ ವಹಿಸಿ, ಶಿಕ್ಷಣವೆಂಬುದು ಕೇವಲ ಅಂಕಗಳಿಗಾಗಿ ಮಾತ್ರವಲ್ಲ; ಅದು ಬದುಕಿನ ಮೌಲ್ಯಗಳನ್ನು ರೂಪಿಸುವ ಶಕ್ತಿ ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ಡಾ. ತೇಜಸ್ವಿನಿ ಅನಂತಕುಮಾರ್ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಗಣಿತದ ಭಯವನ್ನು ದೂರ ಮಾಡಿ ವಿಷಯದತ್ತ ಆಸಕ್ತಿ ಬೆಳೆಸಲು ಇಂತಹ ಸಂಪನ್ಮೂಲ ಪುಸ್ತಕಗಳ ಅಗತ್ಯತೆ ಇದೆ ಎಂದು ತಿಳಿಸಿದರು.

ಪ್ರಯೋಗ ಸಂಸ್ಥೆಯ ಸ್ಥಾಪಕರು ಹಾಗೂ ಮುಖ್ಯ ಮಾರ್ಗದರ್ಶಕರಾದ ಡಾ. ಹೆಚ್. ಎಸ್. ನಾಗರಾಜ ಅವರು ಪುಸ್ತಕದ ವೈಶಿಷ್ಟ್ಯಗಳನ್ನು ಪರಿಚಯಿಸಿ, ನೂತನ ಕಲಿಕಾ ವಿಧಾನಗಳು, ಸರಳ ನಿರೂಪಣೆ ಹಾಗೂ ವಿದ್ಯಾರ್ಥಿ ಸ್ನೇಹಿ ಮಾದರಿಗಳ ಮೂಲಕ ಈ ಕೃತಿ ಶಿಕ್ಷಣ ಕ್ಷೇತ್ರಕ್ಕೆ ಮಹತ್ವದ ಕೊಡುಗೆಯಾಗಲಿದೆ ಎಂದು ಅಭಿಪ್ರಾಯಪಟ್ಟರು. ಲೇಖಕರಾದ ಎಂ. ಶಂಕರ ಅವರು ತಮ್ಮ ಬೋಧನಾ ಅನುಭವಗಳನ್ನು ಹಂಚಿಕೊಂಡು, ವಿದ್ಯಾರ್ಥಿಗಳಿಗೆ ಸುಲಭ ಹಾಗೂ ಆಸಕ್ತಿದಾಯಕ ರೀತಿಯಲ್ಲಿ ಗಣಿತ ಕಲಿಯಲು ಈ ಕೃತಿ ಸಹಾಯಕವಾಗಲಿ ಎಂಬ ಆಶಯ ವ್ಯಕ್ತಪಡಿಸಿದರು.

## ವಾಯ್ಸ್ ಆಫ್ ಸದಾಶಿವನಗರ ಸಂಘಟನೆಯಿಂದ ಪ್ರತಿಭಟನೆ

• ಉದಯವಾಹಿನಿ, ಬೆಂಗಳೂರು

ನಗರದ ಹೆಮ್ಮೆಯ ಸ್ಯಾಂಕಿ ಕೆರೆ ಇಂದು ಗಂಭೀರ ಪರಿಸರ ಸಂಕಷ್ಟ ಎದುರಿಸುತ್ತಿದ್ದು, ಕೆರೆಯ ಅಸ್ತಿತ್ವವೇ ಅಪಾಯದಲ್ಲಿದೆ ಎಂದು ಸದಾಶಿವನಗರದ ನಾಗರಿಕರು, ಪರಿಸರ ಹೋರಾಟಗಾರರು ಹಾಗೂ ವಿವಿಧ ಸಂಘಟನೆಗಳು ಆತಂಕ ವ್ಯಕ್ತಪಡಿಸಿವೆ.

ಈ ಹಿನ್ನೆಲೆಯಲ್ಲಿ ಸೇವ್ ಸ್ಯಾಂಕಿ ಟ್ಯಾಂಕ್'' ಅಭಿಯಾನದಡಿ ಕೆರೆ ಸಂರಕ್ಷಣೆ ಕುರಿತು ಜಾಗೃತಿ ಕಾರ್ಯಕ್ರಮದ ಜೊತೆಗೆ ಕೆರೆ ಉಳಿಸಿ ಎಂದು ಕೆರೆ ಆವರಣದಲ್ಲಿ ಪ್ರತಿಭಟನೆ ನಡೆಸಿದರು. ಸ್ಯಾಂಕಿ ಕೆರೆ ನೀರಿನ ಮಟ್ಟ ನಿರಂತರವಾಗಿ ಕುಸಿಯುತ್ತಿದೆ. ಒಳಚರಂಡಿ ನೀರು ಹರಿಯುತ್ತಿದ್ದು, ಹಸಿರು ವಲಯದ ನಾಶ, ಕೆರೆಯ ವಿಸ್ತೀರ್ಣ ಕುಗ್ಗುತ್ತಿದೆ.

ಕೆರೆಯ ಪರಿಸರ ಸಮತೋಲನ ಹದಗೆಡುತ್ತಿದೆ. ಕೆರೆಯ ಸುತ್ತಮುತ್ತ ದಶಕಗಳಷ್ಟು ಹಳೆಯ ಮರಗಳನ್ನು ಕಡಿದಿರುವುದರಿಂದ ಯಾವುದೇ ಸಮರ್ಪಕ ಅಧ್ಯಯನವಿಲ್ಲದೆ ನಡೆಯುತ್ತಿರುವ ಕಾಮಗಾರಿಯಿಂದ ಕೆರೆಯ ಮೂಲ ಸ್ವರೂಪವನ್ನೇ ಹಾಳು ಮಾಡುತ್ತಿವೆ ಎಂದು ಪರಿಸರ ಹೋರಾಟಗಾರರು ಕಳವಳ ವ್ಯಕ್ತಪಡಿಸಿದ್ದಾರೆ. ವಾಯ್ಸ್ ಆಫ್ ಸದಾಶಿವನಗರದ ಸಂಚಾಲಕರಾದ ಶಿಲ್ಪ ಜತ್ತಿ ಮಾತನಾಡಿ, ಸ್ಯಾಂಕಿ ಕೆರೆಯೊಳಗೆ ಹಾಗೂ ಸುತ್ತಮುತ್ತ ನಿರ್ಮಾಣ ತ್ಯಾಜ್ಯ ಸುರಿಯುತ್ತಿದ್ದು, ಪರಿಸರಕ್ಕೆ ಹಾನಿಕಾರಕವಾದ ಹೂಳು ಹೆಚ್ಚಾಗುತ್ತಿದೆ. ಬೆಂಗಳೂರು ನಗರದ ಭೂಗರ್ಭ ಜಲಮಟ್ಟ, ಪರಿಸರ ಸಮತೋಲನ ಹಾಗೂ ಸಾರ್ವಜನಿಕ ಆಸ್ತಿಯ




ಭವಿಷ್ಯಕ್ಕೆ ದೊಡ್ಡ ಅಪಾಯವನ್ನುಂಟುಮಾಡುತ್ತಿವೆ. ಕೆರೆ ಸಣ್ಣದಾಗುತ್ತಿದ್ದು, ಒತ್ತುವರಿ ಜೊತೆಗೆ ಪರಿಸರ ಹಾಳಾಗುತ್ತಿದೆ. ಕೆರೆ ಸಂಪೂರ್ಣ ಕಾಂಕ್ರೀಟ್ ಕೆರೆಯಾಗಿದೆ. ಸಂಬಂಧಪಟ್ಟವರು ಈ ಬಗ್ಗೆ ಗಮನ ಹರಿಸಬೇಕು. ಎಲ್ಲಿಂದ ಚರಂಡಿ ನೀರು ಹರಿಯುತ್ತಿದೆ ಎಂಬುದನ್ನು ಪತ್ತೆ ಮಾಡಿ ತಕ್ಷಣವೇ ಕ್ರಮ ತೆಗೆದುಕೊಳ್ಳಬೇಕು. ಈ ಉದ್ದೇಶದಿಂದ ''ಸೇವ್ ಸ್ಯಾಂಕಿ ಟ್ಯಾಂಕ್'' ಅಭಿಯಾನ ಆಯೋಜಿಲಾಗಿದೆ ಎಂದರು.

ರಾಷ್ಟ್ರೀಯ ಮಾನವ ಹಕ್ಕುಗಳು ಹಾಗೂ ಸಾಮಾಜಿಕ ನ್ಯಾಯ ಸಂಸ್ಥೆಯ ಪ್ರತಿನಿಧಿಗಳು ಮಾತನಾಡಿ, ಪರಿಸರ ಮತ್ತು ನೀರಿನ ಗುಣಮಟ್ಟ ಪರಿಶೀಲನೆ ನಡೆಸಬೇಕು. ಪರಿಸರ ಸ್ನೇಹಿ ಪುನರುಜ್ಜೀವನ ಯೋಜನೆ ರೂಪಿಸಬೇಕು. ನಗರದ ನಾಗರಿಕರು, ಯುವ ಜನಾಂಗ, ಪರಿಸರ ಪ್ರೇಮಿಗಳು ಹಾಗೂ ವಿವಿಧ ಸಂಘಟನೆಗಳ ಸದಸ್ಯರು ಈ ಜಾಗೃತಿ ಅಭಿಯಾನದಲ್ಲಿ ಭಾಗವಹಿಸಿ ಕೆರೆ ಉಳಿಸಲು ಮುಂದಾಗಬೇಕು ಎಂದರು. ವಾಯ್ಸ್ ಆಫ್ ಸದಾಶಿವನಗರ ಸಂಸ್ಥೆಯ ಶಿಲ್ಪ ಜತ್ತಿ, ಕಾಡು ಮಲ್ಲೇಶ್ವರ ಗೆಳೆಯರ ಬಳಗದ ಅಧ್ಯಕ್ಷರಾದ ಬಿ.ಕೆ.ಶಿವರಾಂ, ಡಾ.ಮನುರವರು ಮತ್ತು ಸದಾಶಿವನಗರದ ಸ್ಥಳೀಯ ನಾಗರಿಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.


# ಮೇ 31ರಂದು ಜಾಣಜಾಣೆಯರ ನಗೆ ಹಬ್ಬ

## ಉಚಿತವಾಗಿ ಕಲಾವಿದರಿಗೆ 10 ಲಕ್ಷ ರೂ. ಆರೋಗ್ಯ ವಿಮಾ ಪಾಲಿಸಿ

• ಉದಯವಾಹಿನಿ, ಬೆಂಗಳೂರು

ಜಾಣಜಾಣೆಯರ ಸಾಹಿತಿ ಕಲಾವಿದರ ಟ್ರಸ್ಟ್ ವತಿಯಿಂದ ''ಜಾಣಜಾಣೆಯರ ನಗೆ ಉತ್ಸವ ಟ್ರಸ್ಟ್ ಉದ್ಘಾಟನೆ ಹಾಗೂ ಕಲಾವಿದರ ನೆರವಿಗಾಗಿ ಆರೋಗ್ಯ ವಿಮಾ ಯೋಜನೆ ಚಾಲನೆ ಕಾರ್ಯಕ್ರಮವು ಮೇ 31ರಂದು ಸಂಜೆ 5ಗಂಟೆಗೆ ಚೌಡಯ್ಯ ಮೆಮೋರಿಯಲ್ ಹಾಲ್‌ನಲ್ಲಿ ಅದ್ದೂರಿಯಾಗಿ ನಡೆಯಲಿದೆ ಎಂದು ಚೌಡಯ್ಯ ಮೆಮೋರಿಯಲ್ ಹಾಲ್ ಕಾರ್ಯದರ್ಶಿ ಡಾ. ಸುಮ ಸುಧೀಂದ್ರ ಮಾಧ್ಯಮಕ್ಕೆ ಮಾಹಿತಿ ನೀಡಿದರು.

ಈ ಕುರಿತು ನಡೆಯುವ ಪತ್ರಿಕಾಗೋಷ್ಠಿಯಲ್ಲಿ ಹಾಸ್ಯ ಕಲಾವಿದ ಎಂ.ಎಸ್. ನರಸಿಂಹಮೂರ್ತಿ, ಚೌಡಯ್ಯ ಮೆಮೋರಿಯಲ್ ಹಾಲ್ ಕಾರ್ಯದರ್ಶಿ ಡಾ. ಸುಮ ಸುಧೀಂದ್ರ, ಟ್ರಸ್ಟಿ ಉದಯ್ ಎಂ., ರಂಗಭೂಮಿ ಹಾಗೂ ಚಲನಚಿತ್ರ ಕಲಾವಿದೆ ಗೀತಾ ಸುರತ್ಕಲ್ ,




ಮೀನಾ ರವರು ಮಾಧ್ಯಮ ಉದ್ದೇಶಿಸಿ ಮಾತನಾಡಲಿದ್ದಾರೆ. ಕಳೆದ 30 ವರ್ಷಗಳಿಂದ ಜಾಣಜಾಣೆಯರು ಸಂಸ್ಥೆ ರಾಜ್ಯಾದ್ಯಂತ ನಗೆಜಾಗರಣೆ ಮತ್ತು ನಗೆ ಉತ್ಸವಗಳನ್ನು ಆಯೋಜಿಸಿ ಜನಮನ ಗೆದ್ದಿದೆ. ಭರತನಾಟ್ಯ, ಶಾಸ್ತ್ರೀಯ ಸಂಗೀತ, ಯಕ್ಷಗಾನ, ಮಿಮಿಕ್ರಿ ಸೇರಿದಂತೆ ವಿವಿಧ ಕಲಾ ಪ್ರಕಾರಗಳನ್ನು ಸದಭಿರುಚಿಯ ಹಾಸ್ಯದೊಂದಿಗೆ ಜನರಿಗೆ ತಲುಪಿಸುವ ಮೂಲಕ ಸಂಸ್ಥೆ ವಿಶಿಷ್ಟ ಗುರುತನ್ನು ಪಡೆದಿದೆ. ವಯೋಸಹಜ ಆರೋಗ್ಯ ಸಮಸ್ಯೆಗಳು ಅನೇಕ ಕಲಾವಿದರನ್ನು ಸಂಕಷ್ಟಕ್ಕೆ ತಳ್ಳುತ್ತಿರುವ ಹಿನ್ನೆಲೆಯಲ್ಲಿ ಬಡ ಹಾಗೂ ಅಶಕ್ತ ಕಲಾವಿದರಿಗೆ ನೆರವಾಗುವ ಉದ್ದೇಶದಿಂದ ಜಾಣಜಾಣೆಯರ ಸಾಹಿತಿ ಕಲಾವಿದರ ಟ್ರಸ್ಟ್'' ಸ್ಥಾಪನೆಯಾಗಿದೆ. ಪಂಚವೀಣಾ ಖ್ಯಾತಿಯ ಅಂತಾರಾಷ್ಟ್ರೀಯ ವೀಣಾ ವಿದುಷಿ

ಡಾ. ಸುಮ ಸುಧೀಂದ್ರ ಟ್ರಸ್ಟ್‌ಗೆ ಕೈಜೋಡಿಸಿದ್ದು, ಸಮಾಜ ಸೇವಾ ನಿರತ ಸಚಿವರಾದ ದಿನೇಶ್ ಗುಂಡೂರಾವ್, ಎಂ.ಆರ್. ಸೀತಾರಾಮ್, ಎಂ. ಕೃಷ್ಣಪ್ಪ, ಡಿ.ಕೆ. ಸುರೇಶ್, ಪ್ರಿಯಾಕೃಷ್ಣ, ರಕ್ಷ ರಾಮಯ್ಯ ಹಾಗೂ ಹಿರಿಯ ವಕೀಲ ಚಂದ್ರಮೌಳಿ ಮಾರ್ಗದರ್ಶನದಲ್ಲಿ ಟ್ರಸ್ಟ್ ಕಾರ್ಯನಿರ್ವಹಿಸುತ್ತಿದೆ.

ಉದ್ಘಾಟನಾ ದಿನವಾದ ಮೇ 31ರಂದು 60 ಕಲಾವಿದರಿಗೆ ತಲಾ 10 ಲಕ್ಷ ರೂ. ಮೌಲ್ಯದ ಆರೋಗ್ಯ ವಿಮಾ ಪಾಲಿಸಿಯನ್ನು ಉಚಿತವಾಗಿ ವಿತರಿಸಲಾಗುತ್ತದೆ. ಇದೇ ಸಂದರ್ಭದಲ್ಲಿ ಮೂರು ಗಂಟೆಗಳ ನಿರಂತರ ನಗೆರಸದೌತಣ ನೀಡಲು ರಾಜ್ಯದ ಖ್ಯಾತ ಹಾಸ್ಯ ಕಲಾವಿದರು ಭಾಗವಹಿಸಲಿದ್ದಾರೆ. ಮಿಮಿಕ್ರಿ ದಯಾನಂದ್, ಪ್ರೊ. ಎಂ. ಕೃಷ್ಣಗೌಡ, ಮಿಮಿಕ್ರಿ ಗೋಪಿ, ಗಂಗಾವತಿ ಪ್ರಾಣೇಶ್, ವೈ.ವಿ. ಗುಂಡೂರಾವ್, ಕೋಗಳಿ ಕೊಟ್ರೇಶ್, ಕಿರ್ಲೋಸ್ಕರ್ ಸತ್ಯ, ಶಿವಾರ ಉಮೇಶ್, ಪ್ರಹ್ಲಾದಾಚಾರ್ಯ ಹಾಗೂ ಎಂ.ಎಸ್. ನರಸಿಂಹಮೂರ್ತಿ ವಿಶೇಷ ನಗೆಹಬ್ಬದಲ್ಲಿ ಪಾಲ್ಗೊಳ್ಳಲಿದ್ದಾರೆ. ಖ್ಯಾತ ಸಂಗೀತ ನಿರ್ದೇಶಕ ಗುರುಕಿರಣ್ ವಿಶೇಷ ಅತಿಥಿಯಾಗಿ ಭಾಗವಹಿಸಲಿದ್ದು, ಐಪಿಎಲ್‌ನಲ್ಲಿ ಜನಪ್ರಿಯತೆ ಪಡೆದ ಡ್ರಮ್ಸ್ ದೇವ್ ವಿಶೇಷ ಪ್ರದರ್ಶನ ನೀಡಲಿದ್ದಾರೆ. ಮಿಮಿಕ್ರಿ ದಯಾನಂದ್ ಅವರ ಸಂಪೂರ್ಣ ತಂಡವೂ ರಂಜನಾ ಕಾರ್ಯಕ್ರಮ ನೀಡಲಿದೆ.

> **ಕಲಾವಿದರ ನೆರವಿಗಾಗಿ ಈ ಕಾರ್ಯಕ್ರಮವನ್ನು ಸಹಾಯಾರ್ಥ ಟಿಕೆಟ್ ಪ್ರದರ್ಶನವಾಗಿ ಆಯೋಜಿಸಲಾಗಿದ್ದು, ಸಾರ್ವಜನಿಕರು 'ಬುಕ್ ಮೈ ಶೋ' ಮೂಲಕ ಟಿಕೆಟ್ ಖರೀದಿಸಿ ಕಲಾವಿದರಿಗೆ ಬೆಂಬಲ ನೀಡಬಹುದು. ಮೇ 31ರಂದು ಸಂಜೆ 5 ಗಂಟೆಗೆ ಆರಂಭವಾಗುವ ಈ ನಗೆಹಬ್ಬ ಪ್ರೇಕ್ಷಕರನ್ನು ಮನರಂಜಿಸುವುದರ ಜೊತೆಗೆ ಅಶಕ್ತ ಕಲಾವಿದರಿಗೆ ಹೊಸ ಭರವಸೆ ಮತ್ತು ಚೈತನ್ಯ ನೀಡಲಿದೆ .**
>
> ಡಾ. ಸುಮ ಸುಧೀಂದ ಕಾರ್ಯದರ್ಶಿ

ಅಂತರಾಳದಿಂದ..
EDITORIAL

# ದಿಲ್ಲಿ ಮಾಲಿನ್ಯಮುಕ್ತಗೊಳಿಸಲು ಸಾಮೂಹಿಕ ಸಹಭಾಗಿತ್ವ ಅಗತ್ಯ



### ಕಟ್ಟುನಿಟ್ಟಿನ ನಿಷೇಧ

**ದಿಲ್ಲಿಯ ಮಾಲಿನ್ಯ ಸಮಸ್ಯೆಗೆ ಪ್ರಮುಖ ಕಾರಣಗಳಲ್ಲಿ ಒಂದಾಗಿರುವ ನಗರದಲ್ಲಿನ ವಾಹನಗಳ ನಿಬಿಡತೆಗೆ ಕಡಿವಾಣ ಹಾಕಲು ಸರ್ಕಾರ ಕಠಿನ ನಿಲುವು ತಾಳಲೇಬೇಕಿದೆ. ನಗರದಾದ್ಯಂತ ಸಾರ್ವಜನಿಕ ಸಾರಿಗೆ (ವಿದ್ಯುತ್ ಚಾಲಿತ ಬಸ್)ಯನ್ನು ಬಲಪಡಿಸುವುದರ ಜತೆಯಲ್ಲಿ ಜನತೆ ಕಡ್ಡಾಯವಾಗಿ ತಮ್ಮ ದೈನಂದಿನ ಓಡಾಟಕ್ಕೆ ಇವುಗಳನ್ನೇ ಬಳಸುವಂತೆ ನಿರ್ದೇಶನ ನೀಡಬೇಕು. ಅನಿವಾರ್ಯ ಸಂದರ್ಭವನ್ನು ಹೊರತುಪಡಿಸಿ, ಇನ್ನಾವುದೇ ಸಂದರ್ಭದಲ್ಲೂ ಖಾಸಗಿ ವಾಹನಗಳ ಬಳಕೆಗೆ ಕಟ್ಟುನಿಟ್ಟಿನ ನಿಷೇಧ ಹೇರಬೇಕು. ನಗರದಲ್ಲಿ ಇ-ವಾಹನಗಳ ಬಳಕೆಗೆ ಉತ್ತೇಜನ ನೀಡಲಾಗುತ್ತಿದ್ದರೂ ಜನತೆಯಿಂದ ನಿರೀಕ್ಷಿತ ಪ್ರತಿಕ್ರಿಯೆ ಕಂಡು ಬರದಿರುವುದರಿಂದ ಇಂತಹ ನಿರ್ದಾಕ್ಷಿಣ್ಯ ಕ್ರಮ ಅನಿವಾರ್ಯ.**

ರಾಷ್ಟ್ರ ರಾಜಧಾನಿ ಹೊಸದಿಲ್ಲಿಯಲ್ಲಿ ಚಳಿಗಾಲ ಕಾಲಿಡುತ್ತಿದ್ದಂತೆಯೇ ವಾತಾವರಣ ಸಂಪೂರ್ಣ ಕಲುಷಿತವಾಗಿ ವಾಯು ಗುಣಮಟ್ಟ ಅತೀ ಕಳಪೆ ಗುಣ್ಣಮಟ್ಟಕ್ಕೆ ತಲುಪುವುದು ಹೊಸ ವಿಷಯವೇನಲ್ಲ. ಕಳೆದೆರಡು ದಶಕಗಳಿಂದ ರಾಜಧಾನಿಯ ಕಳಪೆ ವಾಯು ಗುಣಮಟ್ಟ, ಹೆಚ್ಚುತ್ತಿರುವ ಮಾಲಿನ್ಯವನ್ನು ನಿಯಂತ್ರಿಸಲು ಕೇಂದ್ರ ಮತ್ತು ದಿಲ್ಲಿ ಸರ್ಕಾರ ಹರಸಾಹಸ ಪಡುತ್ತಿದ್ದರೂ ಈವರೆಗೆ ಯಶ ಕಂಡಿಲ್ಲ. ನಗರವನ್ನು ಮಾಲಿನ್ಯಮುಕ್ತವಾಗಿಸಲು ದಿಲ್ಲಿ ಸರ್ಕಾರ ಈಗ ವಿನೂತನ ಉಪಕ್ರಮಕ್ಕೆ ಚಾಲನೆ ನೀಡಿದೆ.

ರಾಜಧಾನಿಯ ವಾತಾವರಣ ಇಷ್ಟೊಂದು ಹದಗೆಡಲು ಹೆಚ್ಚುತ್ತಲೇ ಸಾಗಿರುವ ವಾಹನಗಳ ಸಂಖ್ಯೆ, ರಾಷ್ಟ್ರ ರಾಜಧಾನಿ ಪ್ರದೇಶದಲ್ಲಿನ ಕೈಗಾರಿಕೆಗಳು, ನೆರೆಯ ರಾಜ್ಯಗಳಾದ ಪಂಜಾಬ್, ಹರಿಯಾಣಗಳಲ್ಲಿ ರೈತರು ಹೊಲಗಳಲ್ಲಿ ಕೂಳೆಯನ್ನು ಸುಡುವುದು ಸಹಿತ ಹಲವು ಕಾರಣಗಳಿವೆ. ಕಳೆದ ವರ್ಷದ ಸೆಪ್ಟೆಂಬರ್–ಡಿಸೆಂಬರ್ ಅವಧಿಯಲ್ಲಿ ಮಾಲಿನ್ಯದ ಪ್ರಕೋಪ ತಾರಕಕ್ಕೇರಿದ್ದೇ ಅಲ್ಲದೆ ಜನರು ಉಸಿರಾಟ ನಡೆಸಲೂ ಕಷ್ಟಸಾಧ್ಯವಾಗಿ ಪರಿಣಮಿಸಿತ್ತು. ಈ ಹಿನ್ನೆಲೆಯಲ್ಲಿ ದಿಲ್ಲಿ ಸರ್ಕಾರ ಕೊನೆಗೂ ರಾಜಧಾನಿಯನ್ನು ಮಾಲಿನ್ಯ ನಗರವೆಂಬ ಕಳಂಕದಿಂದ ಹೊರತರುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿದೆ. ಈ ಪೈಕಿ ರಾಜಧಾನಿಯ ವಿವಿಧ ಸ್ಥಳಗಳಲ್ಲಿ ಆಮ್ಲಜನಕ ಉದ್ಯಾನವನದ ನಿರ್ಮಾಣ ಮುಖ್ಯವಾದುದು. ಅದರಂತೆ ಉತ್ತರ ದಿಲ್ಲಿಯಲ್ಲಿನ ಸುಮಾರು ಮೂರು ಎಕ್ರೆ ಜಾಗದಲ್ಲಿ ಆಮ್ಲಜನಕ ಉದ್ಯಾನವನ ನಿರ್ಮಾಣ ಕಾರ್ಯಕ್ಕೆ ಚಾಲನೆ ನೀಡಲಾಗಿದೆ. ದಿಲ್ಲಿಯಾದ್ಯಂತ ಇಂತಹ ನೂರು ಉದ್ಯಾನವನಗಳನ್ನು ನಿರ್ಮಿಸಲು ಸರ್ಕಾರ ಯೋಜನೆ ರೂಪಿಸಿದೆ. ದಿಲ್ಲಿ ಸರ್ಕಾರ ಹಾಕಿಕೊಂಡಿರುವ ಗುರಿಯಂತೆ ದಟ್ಟ ಮರಗಳಿಂದ ಕೂಡಿದ ಸಣ್ಣ ಸಣ್ಣ ಉದ್ಯಾನವನಗಳು ಮುಂದಿನ ಕೆಲವೇ ವರ್ಷಗಳಲ್ಲಿ ತಲೆ ಎತ್ತಿದ್ದೇ ಆದಲ್ಲಿ ವಾತಾವರಣದಲ್ಲಿ ಆಮ್ಲಜನಕದ ಪ್ರಮಾಣ ಸಾಕಷ್ಟು ಹೆಚ್ಚಳವಾಗಲಿದೆ. ಇದರಿಂದ ಸಹಜವಾಗಿಯೇ ದಿಲ್ಲಿಯ ವಾಯುಮಾಲಿನ್ಯ ಕಡಿಮೆಯಾಗುವುದರ ಜತೆಯಲ್ಲಿ ವಾತಾವರಣದಲ್ಲಿ ಸುಧಾರಣೆ ಕಂಡುಬರಲಿದೆ. ಇನ್ನು ರಾಷ್ಟ್ರ ರಾಜಧಾನಿ ಪ್ರದೇಶದಲ್ಲಿನ ಎಲ್ಲಾ ಕೈಗಾರಿಕೆಗಳನ್ನು ನಗರದ ಹೊರವಲಯಕ್ಕೆ ಸ್ಥಳಾಂತರಿಸುವ ಕಾರ್ಯವನ್ನು ಸರ್ಕಾರ ಆದ್ಯತೆಯ ಮೇಲೆ ಕೈಗೆತ್ತಿಕೊಳ್ಳಬೇಕು. ಈ ಸ್ಥಳಾಂತರ ಪ್ರಕ್ರಿಯೆ ವೇಳೆ ಪರಿಸರ ಸ್ವಾಸ್ಥ್ಯದ ರಕ್ಷಣೆಗೆ ಹೆಚ್ಚಿನ ಒತ್ತು ನೀಡುವ ಮೂಲಕ ಹೊಸ ಸಮಸ್ಯೆ ಸೃಷ್ಟಿಯಾಗದಂತೆ ನಿಗಾ ವಹಿಸುವುದು ಅತ್ಯಗತ್ಯ. ಇನ್ನು ಘನತ್ಯಾಜ್ಯ ನಿರ್ವಹಣೆ, ಕೈಗಾರಿಕ ಘಟಕಗಳ ತ್ಯಾಜ್ಯ ಹಾಗೂ ಒಳಚರಂಡಿ ನೀರಿನ ತ್ಯಾಜ್ಯಗಳನ್ನು ಅತ್ಯಾಧುನಿಕ ವಿಧಾನದಲ್ಲಿ ಸಂಸ್ಕರಿಸಿ ಅವುಗಳನ್ನು ನಗರದಲ್ಲಿನ ಪಾರ್ಕ್‌ಗಳು, ಹೊಸದಾಗಿ ನಿರ್ಮಾಣಗೊಳ್ಳಲಿರುವ ಆಮ್ಲಜನಕ ಉದ್ಯಾನವನಗಳ ಗಿಡಗಳಿಗೆ ಬಳಸಲು ಅಗತ್ಯ ವ್ಯವಸ್ಥೆ ಮಾಡಬೇಕು. ಇದರಿಂದ ಜಲಮಾಲಿನ್ಯವನ್ನು ತಡೆಗಟ್ಟುವುದರ ಜತೆಯಲ್ಲಿ ನೀರಿನ ಮರುಬಳಕೆ ಸಾಧ್ಯವಾಗಲಿದ್ದು, ನೀರು ಪೂರೈಕೆ ವ್ಯವಸ್ಥೆಯ ಮೇಲಣ ಒತ್ತಡವೂ ಕಡಿಮೆಯಾಗಲಿದೆ. ದಿಲ್ಲಿಯಾದ್ಯಂತ ಇಂತಹ ನೂರು ಉದ್ಯಾನವನಗಳನ್ನು ನಿರ್ಮಿಸಲು ಸರ್ಕಾರ ಯೋಜನೆ ರೂಪಿಸಿದೆ. ಇಂತಹ ಒಂದಿಷ್ಟು ದೂರದೃಷ್ಟಿಯ, ದೂರಗಾಮಿ ಪರಿಣಾಮದ ಕ್ರಮಗಳನ್ನು ಕೈಗೊಂಡಲ್ಲಿ ರಾಷ್ಟ್ರ ರಾಜಧಾನಿಯನ್ನು ಮಾಲಿನ್ಯಮುಕ್ತವಾಗಿಸುವುದು ಕಷ್ಟಸಾಧ್ಯವೇನಲ್ಲ. ಈ ದಿಸೆಯಲ್ಲಿ ಸರ್ಕಾರಗಳು, ಕೈಗಾರಿಕ ಸಂಸ್ಥೆಗಳು, ಸಾರ್ವಜನಿಕರ ಸಾಮೂಹಿಕ ಸಹಭಾಗಿತ್ವ ಅತ್ಯಗತ್ಯ.

# ರಾಮಾಯಣ



**ತನ್ನ ಉದ್ದೇಶದಲ್ಲಿ ವಿಫಲನಾದ ರಾವಣನು ರಕ್ಕಸಿಯರಿಗೆ ಸೂಚನೆಯಿತ್ತು**

• ಹಿಂದಿನ ಸಂಚಿಕೆಯಿಂದ **121ನೆಯ ಅಧ್ಯಾಯ**

ವೀರಭಟರಿಂದ ತುಂಬಿದ ಲಂಕಾನಗರವು ನೀರಲ್ಲಿ ಮುಳುಗುವುದನ್ನೂ ಕಪಿಯೊಂದರಿಂದ ನಗರವು ಅಗ್ನಿಗೆ ಆಹುತಿಯಾಗುವುದನ್ನೂ ನಗರದ ಬರಿದಾದ ಮನೆಗಳಿಂದ ಹೆಂಗಸರು ಹೊರಬಂದು ಎಲ್ಲೆಡೆ ನೋಡುತ್ತ ಗೋಳಾಡುವುದನ್ನೂ ನೋಡಿ ಅಸುರನು ಮನೆಯಿಂದ ಹೊರಬರುವುದು ಖಂಡಿತವೆನಿಸಿತು. ನಾಶವಾದ ರಾಕ್ಷಸ ಕುಲದಲ್ಲಿ ವಿಭೀಷಣನೊಬ್ಬನು ಮಾತ್ರ ಹೊಳೆಯುವ ಬಿಳಿಬಟ್ಟೆಯನ್ನು ಧರಿಸಿ, ಆಭರಣಗಳನ್ನು ತೊಟ್ಟು, ಬಿಳಿ ಆನೆಯ ಮೇಲೆ ಕುಳಿತು ಸುಖವಾಗಿ ಮಂತ್ರಿಯೊಡನೆ ಕೊಡೆಗಳಡಿಯಲ್ಲಿ, ಬೀಸುವ ಚಾಮರದ ಗಾಳಿಯಲ್ಲಿ ವೈಭವದಿಂದ ಬರುವುದನ್ನು ಕಂಡೆ. ಕುಂಭಕರ್ಣ ಮುಂತಾದ ಮುಖ್ಯ ರಾಕ್ಷಸರೆಲ್ಲ ಹೋಗುತ್ತಾರೆ, ಲಂಕೆಯು ಬೂದಿಯಾಗುತ್ತದೆ, ರಾಕ್ಷಸಕುಲವು ಯಮಪುರಿಯತ್ತ ಹೋಗಬೇಕು, ಇದರಲ್ಲಿ ಅನುಮಾನವೇ ಇಲ್ಲ ರಘುಪತಿಯ ಕಾಲುಗಳಿಗೆ ಬಿದ್ದು ವಿಭೀಷಣನು ಮಾತ್ರ ಸುಖದಿಂದಿರುತ್ತಾನೆ. ಆದ್ದರಿಂದ ಸೀತೆಯ ಅನುಗ್ರಹವನ್ನು ಪಡೆಯದೆ ಕೆಡಬೇಡಿ'' ಎಂದು ರಕ್ಕಸೀಗಣಕ್ಕೆ ತ್ರಿಜಟೆ ಎಚ್ಚರಿಕೆಯಿತ್ತಳು.ಕನಸಿನ ವಿವರಗಳನ್ನು ಕೇಳಿ ವಿಸ್ಮಿತರಾದ ದಾನವಿಯರು ತಮ್ಮ ರಾಜನ ಬಳಿಯಲ್ಲಿರಲು ಹೆದರಿದರು, ಕೆಲವರು ನಡುಗಿದರು, ಮತ್ತೆ ಕೆಲವರು ಹಿಂದೆ ಸರಿದರು. ಆದರೆ ಕೆಲವು ದುಷ್ಟೆಯರು ಮಾತ್ರ ತರ್ಜನಭರ್ಜನಗಳಿಂದ ಕೆಟ್ಟ ಮಾತುಗಳನ್ನಾಡಿಕೊಳ್ಳುವುದನ್ನು ಕಂಡ ಜಾನಕಿಯು ಕ್ರೋಧದಿಂದ, ''ಸುಮ್ಮನೆ ಬೊಗಳಿದರೇನು ಪ್ರಯೋಜನ? ನಿಮ್ಮ ಅರಸಿನ ಆಯುಸ್ಸು ಐಶ್ವರ್ಯಗಳೆಲ್ಲ ಸಾಗರದಲ್ಲಿ ಮುಳುಗಿಹೋಗುವುದನ್ನು, ವಾನರಕುಲದಿಂದ ನೀವೆಲ್ಲರೂ ಹಾಳಾಗುವುದನ್ನು ತಿಳಿಯದೆ ಕುಡಿತದ ಅಮಲಿನಲ್ಲಿ ಏನೇನೋ ಹೇಳಿದರೇನು ಫಲ ಎಂದು ಹೇಳಿದರೂ ಸೀತೆಯು ತನ್ನಲ್ಲಿಯೇ ಮರುಗಿದ

ಅಮರ ಮುನಿಗಳ ಮಾತು ಸತ್ಯವಾಗುವುದೆಂಬುದು ಎಲ್ಲಿ ಹೋಯಿತು ಅಕಾಲ ಮರಣ ಉಂಟಾಗದೆಂಬ ಧರ್ಮವಾಕ್ಕುಗಳೆಲ್ಲಿ ಹೋದುವು? ಇಲ್ಲಿ ಅನಾಥೆಯಂತೆ ಶೋಕಸಮುದ್ರದಲ್ಲಿ ಮುಳುಗಿರುವ ನನ್ನ ಕಡೆ ಗಮನ ಹರಿಸುವವರಾರೂ ಇಲ್ಲವಲ್ಲ ಎಂದು ಕೊರಗಿದಳು. ನಾನಾ ವಿಧವಾದ ದುಃಖ, ರಕ್ಕಸಿಯರ ಕೀಟಲೆ ಕೋಟಲೆಗಳು, ಪತಿಯನ್ನು ಕಾಣದ ಚಿಂತೆ, ಬಂಧುಗಳನ್ನು ನೋಡದ ಭೀತಿ, ನಿದ್ರೆಯಿಲ್ಲದ ರಾತ್ರಿಗಳಿಂದ ಜರ್ಜರಿತವಾದ ನನ್ನ ಜೀವನವನ್ನು ಸುಡಲಿ ಆಯುಧದಿಂದ ಸಾಯುವುದಕ್ಕೂ ಆಸ್ಪದವಿಲ್ಲ, ನನಗೆ ವಿಷವನ್ನಾರು ತಂದುಕೊಡುತ್ತಾರೆ, ಈ ರಕ್ಕಸೀಗಣವು ಕಾಯುತ್ತಿದೆ. ಈ ನನ್ನ ಜಡೆಯೇ ನೀಳವಾಗಿದೆ, ನನ್ನನ್ನು ಹುಟ್ಟಿಸುವಾಗ ಬ್ರಹ್ಮನು ಇದನ್ನಿತ್ತಿರುವುದು ಸಾಯಲು ಅನುಕೂಲಕರವಾಗಿದೆ ಎಂದು ಜಾನಕಿಯು ಮರಣವನ್ನು ನಿಶ್ಚಯಿಸಿದಳು. ಹಸಿವು ನೀರಡಿಕೆ ನಿದ್ದೆಗಳನ್ನು ಬಿಟ್ಟು ಸದಾ ಕಾಲ ರಾಮನ ಪಾದಧ್ಯಾನ ಮಾಡಿದ ಫಲ, ಪಾತಿವ್ರತ್ಯದ ಮಹಿಮೆಗಳನ್ನು ವರ್ಣಿಸುವ ನಿಗಮಗಳ ಮಾತುಗಳು ಹುಸಿಯಾದುವೇ? ದೀನರಕ್ಷಕನೆಂಬ ಬಿರುದನ್ನು ರಘುವರನು ಬಿಸುಡಿರಬೇಕು, ತನ್ನ ಅಸಮ ಪೌರುಷವನ್ನು ಸೌಮಿತ್ರಿಯು ತೊರೆದಿರಬೇಕು, ಹಾ ವಿಧಿಯೇ!'' ಎಂದು ಅಂಬುಜಾಕ್ಷಿಯು ಬಿಸುಸುಯ್ದಳು. ಸ್ತ್ರೀಪ್ರಕರದ ಮಕುಟಮಣಿಗಳಾದ ಕೌಸಲ್ಯೆ ಸುಮಿತ್ರೆಯರು, ಭರತ ಮುಂತಾದ ಅಕಳಂಕ ಪೌರುಷದ ಮೈದುನರು, ತ್ರಿಲೋಕ ಶೂರೋತ್ತಮನಾದ ರಘುನಾಥನಂತಹ ಪತಿಯಿದ್ದೂ ನನ್ನ ದೇಹವು ವಿಧಿಯ ಬಲದಿಂದ ರಕ್ಕಸಿಯರ ಪಾಲಾಯಿತು!''

ಮುಂದುವರೆಯುವುದು

# ನಂಬಿಕೆ ನಾ ನಂಬಬೇಕೊ ಬೇಡ್ವೊ?



**ಸಾಮಾಜಿಕ ಕಳಕಳಿ**

**ಹೆಚ್.ಎಸ್. ಪ್ರತಿಮಾ ಹಾಸನ**
ಲೇಖಕರು
ಸಾಮಾಜಿಕ ಚಿಂತಕಿ ಹಾಗೂ ಶಿಕ್ಷಕಿ, ಹಾಸನ

ನಂಬಿಕೆಗೆ ಮತ್ತೊಂದು ಉದಾಹರಣೆಯನ್ನು ನೀಡಬೇಕೆಂದರೆ ಹಿಂದೆಲ್ಲಾ ಅವಿಭಕ್ತ ಕುಟುಂಬಗಳು ಇರುತ್ತಿತ್ತು. ಆ ಅವಿಭಕ್ತ ಕುಟುಂಬಗಳು ಒಬ್ಬರನ್ನೊಬ್ಬರು ಅವಲಂಬಿಸಿ ಜೀವನ ಮಾಡುತ್ತಿದ್ದರು. ಆ ಸಮಯದಲ್ಲಿ ವಿಭಕ್ತ ಕುಟುಂಬಗಳು ಕಡಿಮೆ ಇತ್ತು.

ಕಷ್ಟಪಟ್ಟು ದುಡಿದು ಕಾರ್ಯವನ್ನು ನಿರ್ವಹಿಸುತ್ತಾ ಹಣ ಸಂಪಾದಿಸುತ್ತಿದ್ದರು. ಶಿಕ್ಷಣದ ಮಟ್ಟ ಕಡಿಮೆ ಇದ್ದರೆ ಸಹ ಹೊಂದಾಣಿಕೆ ನಂಬಿಕೆ ಎಂಬುದು ಬಹಳ ಬಲವಾಗಿ ದೃಢವಾಗಿ ನಿಲ್ಲುತ್ತಿತ್ತು. ಹಿರಿಯರ ಮಾತಿಗೆ ಬಹಳಷ್ಟು ಗೌರವವಿರುತ್ತಿತ್ತು. ಹೀಗೆ ಒಂದು ಕುಟುಂಬದ ವಿಚಾರ ಹೇಳಲು ಇಚ್ಛಿಸುತ್ತೇನೆ . ತುಂಬು ಕುಟುಂಬದ ಅವಿಭಕ್ತ ಸಂತೋಷಕರ ಕುಟುಂಬ ವಾದಂತಹ ಒಂದು ಕುಟುಂಬ ಅಲ್ಲಿ ತಾತನದೇ ದರ್ಬಾರ್. ಮನೆಯ ಯಜಮಾನ ತಾತನಾಗಿದ್ದನು. ಅಜ್ಜಿಯ ಹೇಳಿದ ಮಾತನ್ನು ಯಾರು ಸಹ ತೆಗೆದು ಹಾಕುತ್ತಿರಲಿಲ್ಲ. ಮಕ್ಕಳು ಮೊಮ್ಮಕ್ಕಳು ಸೊಸೆಯಂದಿರು ಹೀಗೆ ಸುಖಕರವಾದ ಒಂದು ಸಂಸಾರ ನಂಬಿಕೆಯಿಂದ ಸಂತೋಷದಿಂದ ಜೀವಿಸುತ್ತಿದ್ದರು. ಅಂತಹ ಸಂತೋಷವು ನಂಬಿಕೆಯ ವಿರುದ್ಧ ನಡೆದು ತುಂಬು ಕುಟುಂಬ ಒಡೆದು ಹೋಯಿತು. ಅಲ್ಲಿ ಮಗನ ಮಗ ಪ್ರೇಮ ವಿವಾಹವಾಗಿದ್ದ, ಅತ್ತೆಯ ಮಗಳನ್ನೇ ಮದುವೆಯಾಗಿ ಹೇಳಿದ ಆತ ಯಾರಿಗೂ ತಿಳಿಸದಂತೆ ಅವನು ಪ್ರೇಮ ವಿವಾಹವಾಗಿದ್ದನು.

ಸಿದ್ಧವಾದ ಮಂಟಪದಲ್ಲಿ ಆದ ಅವಮಾನದಿಂದ ಅಲ್ಲಿ ವಿವಾಹವಾಗಬೇಕಿದ್ದ ಹುಡುಗನು ಇಲ್ಲದಿದ್ದಾಗ ನಂಬಿಕೆಯು ಮುರಿದು ಅವಮಾನದಿಂದ ಹಿಡಿ ಕುಟುಂಬವೇ ವಿಷವನ್ನು ಕುಡಿದು ಸಾಯಬೇಕಾದ ಪರಿಸ್ಥಿತಿಯನ್ನು ತಂದೊಡ್ಡಿದರು. ಒಮ್ಮೊಮ್ಮೆ ನಂಬಿಕೆಯಿಂದ ಕೊಟ್ಟ ಮಾತುಗಳನ್ನು ಈಡೇರಿಸಲಾಗದೆ ಎಂತಹದ್ದೆಲ್ಲಾ ಅನಾಹುತಗಳಾಗುವುದನ್ನ ನಾವು ಇಂದಿನ ಸಮಾಜದಲ್ಲಿ ನೋಡುತ್ತಿದ್ದೇವೆ. ಹಿಂದಿನ ದಿನಗಳಲ್ಲಿ ಆ ರೀತಿಯ ನಂಬಿಕೆಯ ಮೋಸಗಳು ಬಹಳಷ್ಟು ನಡೆಯುತ್ತಿದ್ದವು.

ಅದರಲ್ಲೂ ಈಗ ಕಲಿ ಯುಗ ದೇವರ ಮೇಲಿನ ನಂಬಿಕೆ ಕಡಿಮೆಯಾಗುತ್ತಿದೆ ಸಂಸ್ಕೃತಿಯನ್ನ ಮರೆತು ಹೋಗುತ್ತಿದ್ದಾರೆ ಹಿಂದೂ ಧರ್ಮವನ್ನು, ಸಂಪ್ರದಾಯಗಳನ್ನು ಮರೆಯುತ್ತಿದ್ದಾರೆ ಹೇಗೆ ಹೇಳಿ ಒಮ್ಮೆ ನಾವು ಹೇಳಿದ ಮಾತನ್ನು ಈಡೇರಿಸಲು ಆಗುವುದಿಲ್ಲ ಎಂದಾಗ ಆ ಮಾತನ್ನು ಪ್ರಮಾಣಕರಿಸಿ ಹೇಳಬಾರದು.

ಇಂತಹ ನಂಬಿಕೆಯನ್ನು ಕಳೆದುಕೊಳ್ಳಬೇಡಿ. ಮನುಷ್ಯನಿಗೆ ನಡತೆ ಭದ್ರವಿರಬೇಕು ಹಾಗೆ ನಾಲಿಗೆ ಪಕ್ವಾಗಿರಬೇಕಂತೆ. ಒಟ್ಟಾರೆ ಪ್ರತಿಯೊಬ್ಬರಲ್ಲೂ ನಂಬಿಕೆ ಎನ್ನುವ ಪದವನ್ನು ನಂಬಬೇಕು ಬೇಡವೋ ಎಂಬ ಆಲೋಚನೆಗೆ ಬೀಳಿಸಿದಂತೆ ನಂಬಿಕೆ ಎಂಬುದನ್ನು ಉಳಿಸಿಕೊಳ್ಳಲು ಪ್ರಯತ್ನಿಸಿ ಎಲ್ಲರಿಗೂ ಶುಭವಾಗಲಿ ಎಂದು ಹಾರೈಸುತ್ತೇನೆ ಧನ್ಯವಾದಗಳು ಜೈ ಹಿಂದ್ ಜೈ ಭಾರತ ಮಾತೆ.

ನಂಬಿಕೆಯನ್ನು ಮೋಸ ಮಾಡುತ್ತಾರೆಂದು ತಿಳಿದರು ನಂಬಿಕೆ ನಡೆಯಬೇಕಾದ ಪರಿಸ್ಥಿತಿಗಳು ಕಣ್ಣ ಮುಂದೆ ಬರುತ್ತಿವೆ.

### ನಂಬಿಕೆ ಒಂದು ಪವಿತ್ರ ಪ್ರಮಾಣಿಕೃತ ವಿಚಾರ

**ಇಂದಿನ ಪ್ರಸ್ತುತ ದಿನಗಳಂತೂ ನಂಬಿಕೆಗೆ ವಿರುದ್ಧವಾಗಿಯೇ ನಡೆಯುತ್ತಿದೆ ಒಂದು ರೂಪಾಯಿಯ ವಸ್ತುವಿನಿಂದ ಹಿಡಿದು ಎಲ್ಲೆಡೆಯುವ ಮೋಸವಾಗುತ್ತಿರುವುದನ್ನು ನಾವು ಸಾಕ್ಷಿ ಸಮೇತ ಕಾಣುತ್ತಿದ್ದೇವೆ. ಗೆಲ್ಲೋ ಸಾವಿರಕ್ಕೆ ನೂರು ತೊಂಬತ್ತು ನಂಬಿಕೆಯನ್ನು ಉಳಿಸಿಕೊಳ್ಳುತ್ತಿದ್ದಾರೆ ಹೊರತು. ನಂಬಿಕೆಯಂತೆ ಹೇಳಿದ ಮಾತನ್ನು ನಿಭಾಯಿಸುವವರು ಕಡಿಮೆಯಾಗುತ್ತಿದ್ದಾರೆ. ಏನೇ ಆಗಲಿ ನಂಬಿಕೆ ಅನ್ನುವುದು ಒಂದು ಪವಿತ್ರವಾದ ಪ್ರಮಾಣಿಕೃತ ವಿಚಾರವಾಗಿದೆ.**

# ಉದಯೋನ್ಮುಖ ನೃತ್ಯ ಕಲಾವಿದೆ ಕು. ವೈಷ್ಣವಿ ಜಯಶಂಕರ್ ರಂಗಪ್ರವೇಶ



**ಕಲಾ ಸಾಹಿತ್ಯ**

**ವೈ.ಕೆ. ಸಂಧ್ಯಾ ಶರ್ಮ**
ಲೇಖಕರು
ರಂಗಕರ್ಮಿ ಹಾಗೂ ನೃತ್ಯ ನಾಟಕಗಳ ವಿಮರ್ಶಕರು



ಕಲಾಕ್ಷೇತ್ರ ಬಾನಿಯಲ್ಲಿ ನೃತ್ಯಸಾಧನೆ ಮಾಡಿರುವ ಬದ್ಧತೆಯ ನೃತ್ಯ ಕಲಾವಿದೆ ಮತ್ತು ಉತ್ತಮ ನೃತ್ಯಗುರುವಾಗಿ ಹೆಸರು ಮಾಡಿರುವ ವಿದುಷಿ ಪರಿಮಳ ಹನ್ಸೋಗೆ ಖ್ಯಾತ ಕಲಾವಾಹಿನಿ ಡ್ಯಾನ್ಸ್ ಅಕಾಡೆಮಿಯ ಕಲಾತ್ಮಕ ನಿರ್ದೇಶಕಿ. ಅವರ ನುರಿತ ಗರಡಿಯಲ್ಲಿ ರೂಪುಗೊಂಡ ನೃತ್ಯಶಿಲ್ಪ ಕು. ವೈಷ್ಣವಿ ಬಾಲಪ್ರತಿಭೆ .

ಪ್ರಸ್ತುತ ಲಂಡನ್ ನಿವಾಸಿಯಾಗಿರುವ ಶ್ರೀ ಜಯಶಂಕರ್ ಮತ್ತು ಮೃದುಲಾ ಅವರ ಹತ್ತುವರ್ಷದ ಪುತ್ರಿಯಾದ ವೈಷ್ಣವಿ ಕಳೆದ ಆರುವರ್ಷಗಳಿಂದ ಬಹು ಆಸಕ್ತಿ – ಪರಿಶ್ರಮಗಳಿಂದ ಭರತನಾಟ್ಯ ನೃತ್ಯಾಭ್ಯಾಸ ಮಾಡುತ್ತಿದ್ದು, ಈಗಾಗಲೇ ಯುನೈಟೆಡ್ ಕಿಂಗ್ಡಮ್ ನಲ್ಲಿನ ಅನೇಕ ದೇವಾಲಯಗಳಲ್ಲಿ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಹಾಗೂ ಭಾರತದಲ್ಲೂ ಕೂಡ ವಿವಿಧ ವೇದಿಕೆಗಳಲ್ಲಿ ತನ್ನ ಏಕವ್ಯಕ್ತಿ ನೃತ್ಯಪ್ರದರ್ಶನ ನೀಡಿ ಮೆಚ್ಚುಗೆಗಳಿಸಿದ್ದಾಳೆ. ಬಹುಮುಖ ಪ್ರತಿಭೆಯಾದ ವೈಷ್ಣವೀ ಕರ್ನಾಟಕ ಶಾಸ್ತ್ರೀಯ ಸಂಗೀತವನ್ನೂ ಕಲಿಯುತ್ತಿದ್ದು, ಓದಿನಲ್ಲಿ ಉತ್ತಮ ವಿದ್ಯಾರ್ಥಿನಿಯೆನಿಸಿಕೊಂಡಿದ್ದು ಈಜು, ವಾಲಿಬಾಲ್, ಕ್ರಿಕೆಟ್ ಮತ್ತು ಬ್ಯಾಡ್ಮಿಂಟನ್ ಕ್ರೀಡೆಗಳಲ್ಲಿ ಮುಂದಿರುವ ವಿಶೇಷತೆ ಅವಳದು. ಟ್ವೈಕಾಂಡೋನಲ್ಲಿ ಬ್ಲಾಕ್ ಬೆಲ್ಟ್ ಪಡೆದ ಜಾಣೆ. ಈಗಾಗಲೇ ಯುಕೆಯ ಐ ಎಸ್ ಟಿ ಡಿ ಸಂಸ್ಥೆಯ 7 ನೆಯ ಹಂತದ ನೃತ್ಯಪರೀಕ್ಷೆಯಲ್ಲಿ ಡಿಸ್ಟಿಂಕ್ಷನ್ ಪಡೆದು ವಿಜೇತಳಾಗಿರುವ ವೈಷ್ಣವಿ, ಇದೀಗ ತಾನು ಕಲಿತ ಶಾಸ್ತ್ರೀಯ ನೃತ್ಯದ ವಿವಿಧ ಆಯಾಮಗಳ ಪ್ರದರ್ಶನಕ್ಕಾಗಿ ಇದೇ ತಿಂಗಳ 30 ರಂದು ಶನಿವಾರ ಸಂಜೆ 4. 30ಕ್ಕೆ ಬೆಂಗಳೂರಿನ ಎ.ಡಿ.ಎ. ರಂಗಮಂದಿರದಲ್ಲಿ ವಿಧ್ಯುಕ್ತವಾಗಿ ರಂಗಪ್ರವೇಶವನ್ನು ಮಾಡುತ್ತಿದ್ದಾಳೆ. ಈ ಬಾಲಕಲಾವಿದೆಯ ಮನಮೋಹಕ ನೃತ್ಯವಲ್ಲರಿಯನ್ನು ವೀಕ್ಷಿಸಲು ಎಲ್ಲಾ ಕಲಾರಸಿಕರಿಗೂ ಆದರದ ಸ್ವಾಗತ.

ಲಂಡನ್ನಿನಲ್ಲಿ ವಿರ್ರಲ್ ಗ್ರಾಮರ್ ಗರ್ಲ್ಸ್ ಸ್ಕೂಲಿನಲ್ಲಿ 7 ನೆಯ ತರಗತಿಯಲ್ಲಿ ಓದುತ್ತಿರುವ ವೈಷ್ಣವಿಗೆ ನೃತ್ಯ ಬಾಲ್ಯದ ಒಲವು. ಅವಳ ನೃತ್ಯಪ್ರೀತಿಯನ್ನು ಮೊದಲು ಗುರುತಿಸಿದ ಅವಳ ತಾಯಿ ಮೃದುಲ್ಲಾ ಐದುವರ್ಷದ ಮಗಳನ್ನು ಭರತನಾಟ್ಯ ಕಲಿಯಲು ಅಲ್ಲಿನ ಖ್ಯಾತ ಕಲಾವಾಹಿನಿ ಡ್ಯಾನ್ಸ್ ಅಕಾಡೆಮಿಯಲ್ಲಿ ಬಹು ಶ್ರದ್ಧೆಯಿಂದ ಭರತನಾಟ್ಯ ಕಲಿಸುತ್ತಿದ್ದ ಸ್ವತಃ ಉತ್ತಮ ಕಲಾವಿದೆಯಾದ ಪರಿಮಳ ಹನ್ಸೋಗೆ ಅವರಲ್ಲಿ ನೃತ್ಯಕ್ಕೆ ಸೇರ್ಪಡೆಗೊಳಿಸಿದರು.

ಭಾರತೀಯ ಸಾಂಸ್ಕೃತಿಕ ಪರಂಪರೆಯ ಬಗ್ಗೆ ಗೌರವವುಳ್ಳ ಬಾಲೆ ಸತತ ಆರು ವರ್ಷಗಳ ಕಾಲ ಅತೀವ ಆಸಕ್ತಿಯಿಂದ ನೃತ್ಯ ಕಲಿತಳು. ಹಾಗೆಯೇ ಅಲ್ಲಿನ ಸ್ಥಳೀಯ ಅನೇಕ ಸಂಸ್ಥೆಗಳು ನಡೆಸಿದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನಗಳಿಸಿದ್ದು ಅವಳ ವೈಶಿಷ್ಟ್ಯ. ಅವಳು ನೃತ್ಯ ಪ್ರದರ್ಶನ ನೀಡಿದವುಗಳಲ್ಲಿ ಮುಖ್ಯವಾದವು- ಯುಕೆಯ ಕನ್ನಡ ಬಳಗ ಬರ್ಮಿಂಗ್ಹ್ಯಾಮ್ ದೇವಾಲಯದಲ್ಲಿ ನಡೆಸಿದ ತ್ಯಾಗರಾಜ ಆರಾಧನೆ, ಲಿವರ್ ಪೂಲ್ ಶಕ್ತಿ ಸಂಗಮ, ಮ್ಯಾನ್ಚೆಸ್ಟರ್ ಹಾಗೂ ಭಾರತೀಯ ವಿದ್ಯಾಭವನದಲ್ಲಿ ನಡೆದ ರಾಮನವಮಿ ಹಾಗೂ ನವರಾತ್ರಿ ಉತ್ಸವಗಳಲ್ಲಿ, ವಿವಿಧ ಹಬ್ಬಗಳ ಸಂದರ್ಭದ ಆಚರಣೆಗಳ ಕಾರ್ಯಕ್ರಮಗಳಲ್ಲಿ ನೃತ್ಯ ಪ್ರದರ್ಶಿಸಿ, ಕಲಾರಸಿಕರಿಂದ ಭರವಸೆಯ ಕಲಾವಿದೆಯಾಗಿ ಗುರುತಿಸಲ್ಪಟ್ಟಿದ್ದಾಳೆ. ಜೊತೆಗೆ ಅವಳ ಅವಳೀ ಸೋದರ ವಿಷ್ಣು ಜೈಶಂಕರ್ ಸಾಂಗತ್ಯದಲ್ಲಿ ಅನೇಕ ದೇವಾಲಯಗಳಲ್ಲಿ ಸಂಗೀತ ಕಾರ್ಯಕ್ರಮಗಳನ್ನು ನೀಡಿದ್ದಾಳೆ. ಅವಳ ವೈಯಕ್ತಿಕ ಬೆಳವಣಿಗೆಯಲ್ಲಿ ನೃತ್ಯ, ತುಂಬಾ ಪ್ರಭಾವ ಬೀರಿದ್ದು, ಅದು ಅವಳಿಗೆ ಜೀವನದಲ್ಲಿ ಶಿಸ್ತು ಕಲಿಸಿದ್ದು ದೈವಿಕ ಪಥದಲ್ಲಿ ಸಾಗಲು ಮಾರ್ಗದರ್ಶಿಯಾಗಿದೆ ಎಂಬುದು ಅವಳ ದೃಢವಾದ ನಂಬಿಕೆ.

### ಕಣ್ಮನ ಸೆಳೆಯುವ ಸುಂದರ ನರ್ತನ

# ಪೈಲ್ವಾನರ ಉಕ್ಕಿನ ಕತ್ತು: ನೊಗದ ತಾಲೀಮಿನ ಗತ್ತು



**ಅಂತರಂಗದ ಮಾತು**


**ಡಾ.ಸುಧಾಕರ.ಜಿ. ಲಕ್ಕವಳ್ಳಿ**
ಲೇಖಕರು
ಸಾಮಾಜಿಕ ಚಿಂತಕರು

ಗರಡಿ ಮನೆಯ ಕೆಮ್ಮಣ್ಣಿನ ಅಂಗಳದಲ್ಲಿ ಮುಂಜಾನೆಯ ಮಂಜು ಕರಗುವ ಮುನ್ನವೇ ಪೈಲ್ವಾನರ ತಾಲೀಮು ಶುರುವಾಗುತ್ತದೆ. ಇಲ್ಲಿ ನೊಗ ಮತ್ತು ಸರಪಳಿಯ ಕಸರತ್ತಿಗೆ ಆರಾಧನೆಯ ಸ್ಥಾನ. ಇದು ಕೇವಲ ಭಾರ ಹೊರುವ ಆಟವಲ್ಲ, ಅಖಾಡದಲ್ಲಿ ಎದುರಾಳಿ ಕುತ್ತಿಗೆಗೆ ಕೈಹಾಕಿದಾಗ ಬಂಡೆಯಂತೆ ಅಲುಗಾಡದೇ ನಿಲ್ಲುವ ಬ್ರಹ್ಮಾಸ್ತ್ರ. ಮಣ್ಣಿನ ಮಗನ ಈ ಬೆವರಿನ ಸಾಹಸ ದೇಹಕ್ಕೆ ಉಕ್ಕಿನ ದೃಢತೆ ನೀಡಿ ಎದೆಗೆ ಸಿಂಹದ ಧೈರ್ಯ ತುಂಬುತ್ತದೆ.

ಬಲಿಷ್ಠ ಮರದಿಂದ ಕೆತ್ತಿದ ನೊಗದ ಎರಡೂ ತುದಿಗೆ ಕಬ್ಬಿಣದ ಸರಪಳಿ, ಕಲ್ಲುಗಳನ್ನು ಜೋಡಿಸಿರುತ್ತಾರೆ. ಪೈಲ್ವಾನ ಅದನ್ನು ಹೆಗಲಿಗೇರಿಸಿ ನಿಂತಾಗ ಇಡೀ ಶರೀರದ ಭಾರ ಪಾದಗಳ ಮೇಲೆ ನಿಲ್ಲುತ್ತದೆ. ಇದು ಬೆನ್ನು ನೇರಗೊಳಿಸಿ ನಿಲುವಿಗೆ ಗಾಂಭೀರ್ಯ ತರುತ್ತದೆ. ಎದುರಾಳಿಯ ಯಾವುದೇ ದಾಳಿಗೂ ಜಗ್ಗದ ಸಮತೋಲನ ಈ ನೊಗದ ಕೊಡುಗೆ. ಇದೊಂದು ನೈಸರ್ಗಿಕ ಬಯೋಮೆಕಾನಿಕ್ಸ್.

ನೊಗವನ್ನು ಕುತ್ತಿಗೆಗೇರಿಸಿ ಬೈಠಕ್ ಹಾಕುವುದು ಸಾಹಸವೇ ಸರಿ. ಈ ತಾಲೀಮು ಕಾಲುಗಳನ್ನು ಆನೆಯ ಕಂಬಗಳಂತೆ ಬಲಗೊಳಿಸುತ್ತದೆ. ಸೊಂಟದ ಸ್ನಾಯು, ಬೆನ್ನುಮೂಳೆಯ ನರಗಳು ವಿದ್ಯುತ್‌ನಂತೆ ಚುರುಕಾಗುತ್ತವೆ. ಜಿಮ್‌ನ ಯಂತ್ರಗಳಿಗಿಂತ ಈ ಮಣ್ಣಿನ ಕಸರತ್ತು ಸಹಜ. ಇದು ದೇಹಕ್ಕೆ ಕೃತಕ ಉಬ್ಬಲ್ಲ, ಕಬ್ಬಿಣದಂತಹ ನೈಜ ಬಿಗುವು ನೀಡುತ್ತದೆ.

ಕುಸ್ತಿಯಲ್ಲಿ ಕುತ್ತಿಗೆಯೇ ಪ್ರಾಣ. ಎದುರಾಳಿ ಕುತ್ತಿಗೆ ಲಾಕ್ ಮಾಡಿದಾಗ ಪಾರಾಗಲು ಬೆಟ್ಟದಂತಹ ಕತ್ತುಬಲ ಬೇಕು. ನೊಗದ ತಾಲೀಮು ಕುತ್ತಿಗೆಯ ಮಾಂಸಖಂಡಗಳನ್ನು ಗುಡ್ಡದಂತೆ ಕೆತ್ತಿ ಮೂಳೆಯನ್ನು ವಜ್ರವಾಗಿಸುತ್ತದೆ. ಆಗ ಪೈಲ್ವಾನ ಅಖಾಡದಲ್ಲಿ ತಲೆಬಾಗದ ವೀರನಾಗುತ್ತಾನೆ.



### ನಾಡಿನ ವೀರ ಪರಂಪರೆಯನ್ನು ಉಳಿಸುವ ತಪಸ್ಸು

**ಸರಪಳಿಯ ಲಯಬದ್ಧ ಕಂಪನ ಅಸ್ಥಿರ ಭಾರ ಸೃಷ್ಟಿಸುತ್ತದೆ. ಅದನ್ನು ನಿಯಂತ್ರಿಸುವಾಗ ಮೆದುಳು–ಸ್ನಾಯುಗಳ ನಡುವೆ ಅದ್ಭುತ ಸಂಪರ್ಕ ಬೆಳೆಯುತ್ತದೆ. ಏಕಾಗ್ರತೆ ಚೂಪಾಗುತ್ತದೆ. ಕ್ಷಣಾರ್ಧದಲ್ಲಿ ಎದುರಾಳಿಯ ಪಟ್ಟು ಅರಿತು ಪ್ರತ್ಯಸ್ತ್ರ ಹೂಡಲು ಇದೇ ನೆರವಾಗುತ್ತದೆ.**

**ಪ್ರೋಟೀನ್ ಪೌಡರ್, ಯಂತ್ರದ ಸ್ನಾಯುವಿನಲ್ಲಿ ಮಣ್ಣಿನ ಕಸುವಿಲ್ಲ. ಕೆಮ್ಮಣ್ಣಿನಲ್ಲಿ ಹೊರಳಾಡಿ ನೊಗ ಹೊತ್ತು ಬೆಳೆದ ದೇಹಕ್ಕೆ ಇರುವ ದಮ್ಮು ಮತ್ತೆಲ್ಲೂ ಸಿಗದು. ಯುವಕರೇ, ಗರಡಿಗೆ ಮರಳಿ. ಇದು ದೇಹ ಕಟ್ಟುವ ವಿದ್ಯೆಯಲ್ಲ, ನಾಡಿನ ವೀರ ಪರಂಪರೆಯನ್ನು ಉಳಿಸುವ ತಪಸ್ಸು.ನೊಗದ ಕಸರತ್ತು ಪೈಲ್ವಾನರಿಗೆ ಪೂಜೆ. ಈ ಉಕ್ಕಿನ ಕತ್ತುಗಳೇ ನಾಡಿನ ಕಿರೀಟ. ಪ್ರತಿ ಹಳ್ಳಿಯ ಗರಡಿಯಲ್ಲಿ ಮತ್ತೆ ನೊಗದ ನಾದ ಮೊಳಗಲಿ, ಪೈಲ್ವಾನರ ಸಿಂಹಗರ್ಜನೆ ಅಖಾಡವನ್ನು ಅದುರಿಸಲಿ.**

# ಕೂದಲಿನ ಬೆಳವಣಿಗೆ ಉತ್ತೇಜಿಸುವಲ್ಲಿ ಈ ಈರುಳ್ಳಿ ರಸ ಬಳಕೆ ಮಾಡುವುದು ಅತ್ಯುತ್ತಮ

ಕೂದಲಿನ ಆರೋಗ್ಯದ ವಿಷಯಕ್ಕೆ ಬಂದರೆ, ಜನರು ಇಂದಿಗೂ ವಿವಿಧ ಮನೆಮದ್ದುಗಳನ್ನು ಅವಲಂಬಿಸಿದ್ದಾರೆ. ನಾವು ಹೆಚ್ಚಾಗಿ ಕರಿಬೇವು, ಮೆಂತ್ಯ ಬೀಜಗಳು, ಮೊಟ್ಟೆಗಳು, ಈರುಳ್ಳಿ ರಸದಂತಹ ಪದಾರ್ಥಗಳನ್ನು ಕೂದಲಿನ ಮುಖವಾಡಗಳಾಗಿ ಬಳಸುತ್ತೇವೆ. ಇವು ತಲೆಮಾರುಗಳ ಮೂಲಕ ರವಾನಿಸಲ್ಪಟ್ಟ ಪರಿಹಾರಗಳಾಗಿವೆ. ಇದನ್ನು ನಮ್ಮ ಹಿರಿಯರು ಕೂಡು ಶಿಫಾರಸು ಮಾಡುತ್ತಾರೆ.



ಮುಖ್ಯವಾಗಿ, ಕೂದಲು ಉದುರುವುದು ಅಥವಾ ಕೂದಲು ತೆಳುವಾಗುವುದು ಮುಂತಾದ ಸಮಸ್ಯೆಗಳಿಂದ ಬಳಲುತ್ತಿರುವವರಿಗೆ ಈರುಳ್ಳಿ ರಸವು ಗಮನಾರ್ಹವಾದ ಸಕಾರಾತ್ಮಕ ಬದಲಾವಣೆಯನ್ನು ತರುತ್ತದೆ. ಅನೇಕ ಜನರು ಅದನ್ನು ಹೇಗೆ ಬಳಸುವುದು ಅಥವಾ ಅದರ ಪ್ರಯೋಜನಗಳನ್ನು ಸಂಪೂರ್ಣವಾಗಿ ಹೇಗೆ ಪಡೆದುಕೊಳ್ಳಬೇಕು ಎಂಬುದರ ಬಗ್ಗೆ ತಿಳಿಯೋಣ. ಈರುಳ್ಳಿ ರಸವು ಅದರ ತೀಕ್ಷ್ಣವಾದ, ಬಲವಾದ ವಾಸನೆಯಿಂದಾಗಿ ಅದನ್ನು ಬಳಸುವುದನ್ನು ಅನೇಕರು ಸಂಪೂರ್ಣವಾಗಿ ತಪ್ಪಿಸುತ್ತಾರೆ. ಇದನ್ನು ಗಮನದಲ್ಲಿಟ್ಟುಕೊಂಡು ಈರುಳ್ಳಿಯ ವಾಸನೆಯನ್ನು ಸಂಪೂರ್ಣವಾಗಿ ತೊಡೆದುಹಾಕುವುದು ಹೇಗೆ? ಇದೇ ಸಮಯದಲ್ಲಿ ಇದರಲ್ಲಿರುವ ಪ್ರಮುಖ ಪೋಷಕಾಂಶಗಳನ್ನು ನಮ್ಮ ಕೂದಲಿಗೆ ನೇರವಾಗಿ ತಲುಪಿಸುವುದು ಹೇಗೆ ಎಂಬುದರ ಕುರಿತು ಅರಿತುಕೊಳ್ಳೋಣ.

**ಈರುಳ್ಳಿ ರಸವು ಕೂದಲಿನ ಬೆಳವಣಿಗೆಗೆ ಹೇಗೆ ಸಹಾಯ ಮಾಡುತ್ತದೆ?:** ಈರುಳ್ಳಿ ರಸದಲ್ಲಿ ಗಂಧಕ ಸಮೃದ್ಧವಾಗಿದೆ. ಕೂದಲಿನ ಆರೋಗ್ಯದ ಬಗ್ಗೆ ನಡೆಸಿದ ವಿವಿಧ ಅಧ್ಯಯನಗಳ ಪ್ರಕಾರ, ಈ ಸಲ್ಫರ್ ಅಂಶವು ನೆತ್ತಿಯಲ್ಲಿ ರಕ್ತ ಪರಿಚಲನೆಯನ್ನು ಸುಧಾರಿಸುತ್ತದೆ, ಕೂದಲಿನ ಕಿರುಚೀಲಗಳನ್ನು ಉತ್ತೇಜಿಸುತ್ತದೆ. ಇದರ ಪರಿಣಾಮವಾಗಿ ದುರ್ಬಲ ಕೂದಲು ಬಲಗೊಳ್ಳುತ್ತದೆ ಹಾಗೂ ಹೊಸ ಕೂದಲು ಬೆಳವಣಿಗೆಯ ಸಾಧ್ಯತೆ ಹೆಚ್ಚಾಗುತ್ತದೆ. ಇದಲ್ಲದೇ, ಈರುಳ್ಳಿ ರಸದಲ್ಲಿರುವ ಬ್ಯಾಕ್ಟೀರಿಯಾ ವಿರೋಧಿ ಗುಣಲಕ್ಷಣಗಳು ತಲೆಹೊಟ್ಟು ಹಾಗೂ ನೆತ್ತಿಯ ಸೋಂಕುಗಳಿಗೆ ಚಿಕಿತ್ಸೆ ನೀಡಲು ತುಂಬಾ ಸಹಾಯ ಮಾಡುತ್ತದೆ. ಸಾಮಾನ್ಯವಾಗಿ ಈರುಳ್ಳಿ ರಸವನ್ನು ನೇರವಾಗಿ ಹಚ್ಚುವ ಬದಲು, ತೆಂಗಿನ ಎಣ್ಣೆ, ಅಲೋವೆರಾ ಜೆಲ್, ಜೇನುತುಪ್ಪ ಅಥವಾ ಆಪಲ್ ಸೈಡರ್ ವಿನೆಗರ್ ನಂತಹ ಪದಾರ್ಥಗಳೊಂದಿಗೆ ಬೆರೆಸುವುದು ಅದರ ಶಕ್ತಿಯನ್ನು ಹೆಚ್ಚಿಸುತ್ತದೆ. ಈ ಸಂಯೋಜನೆಯು ಕೂದಲಿನ ಶುಷ್ಕತೆ ನಿವಾರಿಸಲು ಸಹಾಯ ಮಾಡುತ್ತದೆ. ಆರೋಗ್ಯಕರ, ನೈಸರ್ಗಿಕ ಹೊಳಪನ್ನು ನೀಡುತ್ತದೆ. ಅನೇಕ ಜನರಿಗೆ ಈರುಳ್ಳಿ ರಸದ ಬಲವಾದ ವಾಸನೆಯು ಅದರ ಬಳಕೆಯನ್ನು ತಪ್ಪಿಸಲು ಪ್ರಾಥಮಿಕ ಕಾರಣವಾಗಿದೆ. ನೀವು ಈರುಳ್ಳಿ ರಸವನ್ನು ಬಳಸಿ ನಿಮ್ಮ ಕೂದಲನ್ನು ತೊಳೆದರೆ, ಈರುಳ್ಳಿಯ ವಾಸನೆಯು ಒಂದು ವಾರದವರೆಗೆ ನಿಮ್ಮ ಕೂದಲಿನಲ್ಲಿ ಇರುತ್ತದೆ. ಇದನ್ನು ಗಮನಿಸಿದರೆ, ಈರುಳ್ಳಿಯ ಕಟುವಾದ ವಾಸನೆ ತಪ್ಪಿಸುವಾಗ ಅದರ ಪ್ರಯೋಜನಗಳನ್ನು ಬಳಸಿಕೊಳ್ಳುವ ವಿಧಾನವನ್ನು ಅನ್ವೇಷಿಸೋಣ.

**ಬೇಕಾಗುವ ಪದಾರ್ಥಗಳು:** ಈರುಳ್ಳಿ ರಸ, ಅಲೋವೆರಾ ಜೆಲ್ ಅಥವಾ ತೆಂಗಿನ ಎಣ್ಣೆ, ಲ್ಯಾವೆಂಡರ್ ಅಥವಾ ರೋಸ್ಮರಿ ಎಣ್ಣೆ ಮತ್ತು ಒಂದು ಚಮಚ ಜೇನುತುಪ್ಪ.

**ತಯಾರಿಸುವ ವಿಧಾನ:** ಮೊದಲಿಗೆ ಒಂದು ಬಟ್ಟಲನ್ನು ತೆಗೆದುಕೊಂಡು ಅಲೋವೆರಾ ಜೆಲ್ ಅಥವಾ ತೆಂಗಿನ ಎಣ್ಣೆಯನ್ನು ಸೇರಿಸಿ. ಇದಕ್ಕೆ, ರೋಸ್ಮರಿ ಅಥವಾ ಲ್ಯಾವೆಂಡರ್ ನಂತಹ ಆಹ್ಲಾದಕರ ವಾಸನೆಯ ಸಾರಭೂತ ಎಣ್ಣೆಯ ಕೆಲವು ಹನಿಗಳನ್ನು ಸೇರಿಸಿ. ಈ ಎಣ್ಣೆಗಳು ಈರುಳ್ಳಿಯ ಕಟುವಾದ ವಾಸನೆಯನ್ನು ತಟಸ್ಥಗೊಳಿಸಲು ಸಹಾಯ ಮಾಡುತ್ತದೆ.

# ನಿತ್ಯವೂ ಬೇಯಿಸಿದ ಮೊಟ್ಟೆ ಸೇವಿಸುವುದು ಉತ್ತಮವೇ?; ವಾರಕ್ಕೆ ಎಷ್ಟು ಮೊಟ್ಟೆ ತಿನ್ನಬೇಕು



ಮೊಟ್ಟೆಯು ಪೋಷಕಾಂಶಗಳ ಸಂಪತ್ತನ್ನು ಒದಗಿಸುವ ಅತ್ಯಂತ ಬಜೆಟ್ ಫ್ರೆಂಡ್ಲಿ ಆಹಾರಗಳಲ್ಲಿ ಒಂದಾಗಿದೆ. ಈ ಮೊಟ್ಟನ್ನು ಹೇಗೆ ಸೇವಿಸಿದರೂ ಅದು ನಿಮ್ಮ ಆರೋಗ್ಯಕ್ಕೆ ಪ್ರಯೋಜನಕಾರಿಯಾಗಿದೆ. ಆರೋಗ್ಯ ತಜ್ಞರು ತಿಳಿಸುವ ಪ್ರಕಾರ, ಸಾಮಾನ್ಯವಾಗಿ ಒಂದು ಮೊಟ್ಟೆಯಲ್ಲಿ 5 ಗ್ರಾಂ ಕೊಬ್ಬು, 6ರಿಂದ 7 ಗ್ರಾಂ ಪ್ರೋಟೀನ್ ಮತ್ತು ವಿಟಮಿನ್ ಎ, ಬಿ 12, ಬಿ 6, ಡಿ, ಇ, ಫೋಲೇಟ್, ಸೆಲೆನಿಯಮ್ ಹಾಗೂ ರಂಜಕದಂತಹ ಪೋಷಕಾಂಶಗಳನ್ನು ಒಳಗೊಂಡಿದೆ. ಜೊತೆಗೆ ಕಣ್ಣಿನ ಆರೋಗ್ಯಕ್ಕೆ ಪ್ರಯೋಜನಕಾರಿಯಾದ ಕೋಲೀನ್, ಜಿಯಾಕ್ಸಾಂಥಿನ್ ಹಾಗೂ ಲುಟೀನ್‌ನಂತಹ ಸಂಯುಕ್ತಗಳು ಮೊಟ್ಟೆಯಿಂದ ಲಭಿಸುತ್ತದೆ. ಇದೀಗ ಪ್ರತಿದಿನ ಮೊಟ್ಟೆ ಸೇವನೆ ಮಾಡುವುದರಿಂದ ದೊರೆಯುವಂತಹ ಆರೋಗ್ಯ ಪ್ರಯೋಜನಗಳು ಯಾವುವು ಎಂಬುದನ್ನು ಇಲ್ಲಿ ತಿಳಿಯೋಣ.


ಹೃದಯದ ಆರೋಗ್ಯವನ್ನು ಸುಧಾರಿಸಲು ಸ್ಯಾಚುರೇಟೆಡ್ ಕೊಬ್ಬಿನ ಸೇವನೆಯನ್ನು ಕಡಿಮೆ ಮಾಡಲು ಹಾಗೂ ಅಪರ್ಯಾಪ್ತ ಕೊಬ್ಬಿನ ಸೇವನೆಯನ್ನು ಹೆಚ್ಚಿಸಲು ಆರೋಗ್ಯ ತಜ್ಞರು ಸಾಮಾನ್ಯವಾಗಿ ಸಲಹೆ ನೀಡುತ್ತಾರೆ. ಇದರಿಂದ ಪ್ರತಿದಿನ ಮೊಟ್ಟೆಗಳನ್ನು ಸೇವಿಸುವುದರಿಂದ ದೇಹದಲ್ಲಿ ಒಳ್ಳೆಯ ಕೊಲೆಸ್ಟ್ರಾಲ್ ಮಟ್ಟ ಹೆಚ್ಚಾಗುತ್ತದೆ. ಜೊತೆಗೆ ಹೃದಯದ ಆರೋಗ್ಯಕ್ಕೆ ರಕ್ಷಣಾತ್ಮಕ ಗುರಾಣಿಯಾಗಿ ಕಾರ್ಯನಿರ್ವಹಿಸುತ್ತದೆ ಎಂದು ಸಂಶೋಧನೆ ತಿಳಿಸುತ್ತದೆ. ಹೆಚ್ಚಿನ ಆರೋಗ್ಯವಂತ ವ್ಯಕ್ತಿಗಳು ತಮ್ಮ ಹೃದಯದ ಆರೋಗ್ಯದ ಮೇಲೆ ಯಾವುದೇ ನಕಾರಾತ್ಮಕ ಪರಿಣಾಮ ಬೀರದೆ, ವಾರಕ್ಕೆ ಏಳು ಮೊಟ್ಟೆಗಳನ್ನು ಸೇವಿಸಬಹುದು ಎಂದು ಮೇಯೊ ಕ್ಲಿನಿಕ್ ವಿವರಿಸುತ್ತದೆ.

**ಪ್ರೋಟೀನ್‌ನ ಸಮೃದ್ಧ ಮೂಲ:** ಒಟ್ಟಾರೆ ಆರೋಗ್ಯಕ್ಕೆ ಪ್ರೋಟೀನ್ ಅತ್ಯಗತ್ಯವಾಗಿದೆ. ಸ್ನಾಯು ಮತ್ತು ಮೂಳೆ ರಚನೆಯಲ್ಲಿ ಹಾಗೂ ಹಾರ್ಮೋನುಗಳು ಮತ್ತು ಕಿಣ್ವಗಳ ಉತ್ಪಾದನೆಯಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ. ಮೊಟ್ಟೆಗಳು ಸಂಪೂರ್ಣ ಪ್ರೋಟೀನ್ ಅನ್ನು ಹೊಂದಿದೆ. ಮೊಟ್ಟೆಗಳಲ್ಲಿ ಎಲ್ಲಾ ರೀತಿಯ ಅಗತ್ಯ ಅಮೈನೋ ಆಮ್ಲಗಳಿಗೆ ಶಕ್ತಿವರ್ಧಕವಾಗಿ ಕಾರ್ಯನಿರ್ವಹಿಸುತ್ತವೆ. ಅನೇಕ ಜನರು ತಪ್ಪಾಗಿ ಪ್ರೋಟೀನ್ ಮೊಟ್ಟೆಯ ಬಿಳಿಭಾಗದಲ್ಲಿ ಮಾತ್ರ ಕಂಡುಬರುತ್ತದೆ ಎಂದು ನಂಬುತ್ತಾರೆ. ಆರೋಗ್ಯ ತಜ್ಞರು ಹೇಳುವಂತೆ ಮೊಟ್ಟೆಯಲ್ಲಿರುವ ಒಟ್ಟು ಪ್ರೋಟೀನ್ ಅಂಶದ ಸುಮಾರು ಅರ್ಧದಷ್ಟು ಹಳದಿ ಲೋಳೆಯಿಂದ ಪಡೆಯಲಾಗಿದೆ. ಮೊಟ್ಟೆಗಳಲ್ಲಿ ಪ್ರೋಟೀನ್, ಮೊನೊಸಾಚುರೇಟೆಡ್ ಕೊಬ್ಬಿನಾಮ್ಲಗಳು, ವಿಟಮಿನ್ ಡಿ, ವಿಟಮಿನ್ ಬಿ 12, ಬಯೋಟಿನ್, ರಿಬೋಫ್ಲಾವಿನ್, ಸೆಲೆನಿಯಮ್ ಹಾಗೂ ಅಯೋಡಿನ್ ಸಮೃದ್ಧವಾಗಿವೆ ಎಂದು ನ್ಯಾಷನಲ್ ಲೈಬ್ರರಿ ಆಫ್ ಮೆಡಿಸಿನ್ ವಿವರಿಸುತ್ತದೆ. **ಮೊಟ್ಟೆಗಳು ವಿಟಮಿನ್ ಲಭ್ಯತೆ ಹೆಚ್ಚಿಸುತ್ತವೆಯೇ?:** ಮೊಟ್ಟೆಗಳಲ್ಲಿ ಜೀವಸತ್ವಗಳು ಹಾಗೂ ಖನಿಜಗಳಲ್ಲಿ ಸಮೃದ್ಧವಾಗಿವೆ. ಇದು ದೇಹಕ್ಕೆ ವ್ಯಾಪಕ ಶ್ರೇಣಿಯ ಅಗತ್ಯ ಪೋಷಕಾಂಶಗಳನ್ನು ಒದಗಿಸುತ್ತದೆ. ಹಾರ್ವರ್ಡ್ ಹೆಲ್ತ್ ಪಬ್ಲಿಷಿಂಗ್ ತಿಳಿಸುವ ಪ್ರಕಾರ, ಮೊಟ್ಟೆಗಳಲ್ಲಿ ಲುಟೀನ್ ಹಾಗೂ ಜಿಯಾಕ್ಸಾಂಥಿನ್ ಇದ್ದು, ಇದು ಕಣ್ಣಿನ ಆರೋಗ್ಯಕ್ಕೆ ಪ್ರಯೋಜನಕಾರಿಯಾಗಿದೆ, ಜೊತೆಗೆ ಮೆದುಳು ಹಾಗೂ ನರಮಂಡಲದ ಆರೋಗ್ಯವನ್ನು ಬೆಂಬಲಿಸುವ ಕೋಲೀನ್ ಇದೆ ಎಂದು ತಿಳಿಸುತ್ತದೆ. ಮೊಟ್ಟೆಯನ್ನು ಸಿಪ್ಪೆ ತೆಗೆದು, ಅರ್ಧದಷ್ಟು ಕತ್ತರಿಸಿ, ಅದರ ಮೇಲೆ ಒಂದು ಚಿಟಿಕೆ ಉಪ್ಪು, ಕಾಳುಮೆಣಸಿನ ಪುಡಿ ಅಥವಾ ಖಾರದ ಪುಡಿಯನ್ನು ಸಿಂಪಡಿಸಿ ಮತ್ತು ಅದನ್ನು ತಿಂಡಿಯಾಗಿ ಸವಿಯಬಹುದು.

# 6 ವರ್ಷಕಳೆದರೂ ಕಾಮಗಾರಿಗಳಿಗಿಲ್ಲ ಆರಂಭ ಭಾಗ್ಯ

• **ಉದಯವಾಹಿನಿ, ಗದಗ:**

ರಾಜ್ಯದ ಬರಪೀಡಿತ ಬಯಲು ಸೀಮೆ ಪ್ರದೇಶಗಳ ಸಮಗ್ರ ಅಭಿವೃದ್ಧಿಗಾಗಿ ಸ್ಥಾಪಿತವಾಗಿರುವ ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯ ನಿಧಾನಗತಿಯ ಕಾರ್ಯವೈಖರಿ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತವಾಗುತ್ತಿದೆ. ರಾಜ್ಯದ 56 ಹಿಂದುಳಿದ ತಾಲೂಕುಗಳ ಅಭಿವೃದ್ಧಿಗಾಗಿ ಈ ಮಂಡಳಿ ರಚಿಸಲಾಗಿದೆ. ಯೋಜನೆಗಳು ಆಮೆಗತಿಯಲ್ಲಿ ಸಾಗುತ್ತಿವೆ ಆದರೆ ಕಳೆದ ಆರು ವರ್ಷಗಳಲ್ಲಿ ಒಟ್ಟಾರೆ 284 ಕೋಟಿ ರೂ.ಗೂ ಅಧಿಕ ಮೊತ್ತದ ಅಂದಾಜು ವೆಚ್ಚಕ್ಕೆ ಸಂಬಂಧಿಸಿದಂತೆ 2,464 ಕ್ಕೂ ಅಧಿಕ ಕಾಮಗಾರಿಗಳು ಇನ್ನೂ ಆರಂಭವನ್ನೇ ಕಂಡಿಲ್ಲ. ಹಿಂದುಳಿದ ತಾಲೂಕುಗಳನ್ನು ರಾಜ್ಯದ



ಇನ್ನಿತರ ಮುಂದುವರಿದ ತಾಲೂಕುಗಳ ಮಟ್ಟಕ್ಕೆ ತರುವ ಸದಾಶಯದೊಂದಿಗೆ ಕೋಟ್ಯಂತರ ರೂಪಾಯಿ ಅನುದಾನ ಮೀಸಲಿದ್ದರೂ ಮಂಡಳಿಯ ಯೋಜನೆಗಳು ಆಮೆಗತಿಯಲ್ಲಿ ಸಾಗುತ್ತಿರುವುದು ಹಿಂದುಳಿದ ಜಿಲ್ಲೆಗಳ ಜನರ ಅಸಮಾಧಾನಕ್ಕೆ ಕಾರಣವಾಗಿದೆ.

ಮಹಾ ಎಡವಟ್ಟು ಆರಂಭದಿಂದಲೂ ಮಂಡಳಿ



ಉದಯವಾಹಿನಿ ಚಿತ್ರ

ನಿಧಾನಗತಿಯ ಕಾಮಗಾರಿಗೆ ಕುಖ್ಯಾತಿಯಾಗಿದೆ. 2025-26 ರ ಸಾಲಿನಲ್ಲಿ 269 ಕಾಮಗಾರಿಗಳ ಪೈಕಿ ಕೇವಲ ಒಂದು ಕಾಮಗಾರಿ ಪೂರ್ಣಗೊಂಡಿದ್ದು, 19.48 ಕೋಟಿ ರೂ. ಅಂದಾಜಿನಲ್ಲಿ 12.25 ಕೋಟಿ ರೂ. ಬಿಡುಗಡೆಯಾಗಿದ್ದರೂ ಫಲಿತಾಂಶ ಶೂನ್ಯವಾಗಿದೆ. ಈಗಲೂ ಮಂಡಳಿ ಹಿಂದಿನ ವರ್ಷಗಳ ಕಾಮಗಾರಿಗಳಿಗೆ ಮಂಜೂರಾತಿ ಪಡೆಯುವಲ್ಲಿಯೇ ಹೆಣಗಾಡುತ್ತಿರುವುದರಿಂದ ಮುಂದಿನ ವರ್ಷದ ಕಾಮಗಾರಿಗಳು ನಿಧಾನವಾಗಲು ಪ್ರಮುಖ ಕಾರಣವಾಗಿದೆ. 1995 ಜನವರಿ 26 ರಿಂದ ಜಾರಿಗೆ ಬರುವಂತೆ ಸ್ಥಾಪನೆಯಾದ ಈ ಮಂಡಳಿಯು ರಾಜ್ಯದ ಪ್ರಮುಖ 14 ಜಿಲ್ಲೆಗಳ (ಬೆಂಗಳೂರು ಗ್ರಾಮಾಂತರ, ರಾಮನಗರ, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ಹಾಸನ, ಚಿತ್ರದುರ್ಗ, ಧಾರವಾಡ, ದಾವಣಗೆರೆ, ಗದಗ, ಹಾವೇರಿ, ಬೆಳಗಾವಿ, ವಿಜಯಪುರ ಮತ್ತು ಬಾಗಲಕೋಟೆ) ಒಟ್ಟು 56 ಬರಪೀಡಿತ ತಾಲೂಕುಗಳನ್ನು ಒಳಗೊಂಡಿದೆ. ಸದ್ಯ ಚಿತ್ರದುರ್ಗದಲ್ಲಿ ಮಂಡಳಿಯ ಕಚೇರಿ ಕಾರ್ಯನಿರ್ವಹಿಸುತ್ತಿದೆ. ಜಲ ಸಂಪನ್ಮೂಲಗಳ ಪುನರುಜ್ಜೀವನ , ಮಳೆ ಆಧಾರಿತ ಕೃಷಿ ಪದ್ಧತಿ, ಜಲ ಸಂರಕ್ಷಣೆ, ತೋಟಗಾರಿಕೆ, ಪಶುಸಂಗೋಪನೆ ಹಾಗೂ ಕೃಷಿ ಪೂರಕ ಚಟುವಟಿಕೆಗಳಿಗೆ ಉತ್ತೇಜನ ನೀಡುವುದು ಈ ಮಂಡಳಿಯ ಮುಖ್ಯ ಗುರಿಯಾಗಿದೆ.

ಸಂಸದರು, ಶಾಸಕರು, ಜಿಲ್ಲಾಧಿಕಾರಿಗಳು ಸೇರಿದಂತೆ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ದಂಡೇ ಈ ಮಂಡಳಿಯಲ್ಲಿದ್ದರೂ, ಯೋಜನೆಗಳ ಅನುಷ್ಠಾನದಲ್ಲಿ ಭಾರಿ ಉದಾಸೀನ ಎದ್ದು ಕಾಣುತ್ತಿದೆ.

2,464 ಕ್ಕೂ ಹೆಚ್ಚು ಕಾಮಗಾರಿ

> ಈ ಪ್ರದೇಶಗಳ ಸಮಗ್ರ ಅಭಿವೃದ್ಧಿಗಾಗಿ ಕೋಟ್ಯಂತರ ರೂಪಾಯಿ ಅನುದಾನಸಹಿತ ಯೋಜನೆಗಳಿದ್ದರೂ, ಕಳೆದ ಆರು ವರ್ಷಗಳಲ್ಲಿ ಒಟ್ಟು 284 ಕೋಟಿ ರೂಪಾಯಿಗೂ ಅಧಿಕ ಮೊತ್ತದ ಅಂದಾಜು ವೆಚ್ಚದ 2,464 ಕ್ಕೂ ಹೆಚ್ಚು ಕಾಮಗಾರಿಗಳು ಇನ್ನೂ ಆರಂಭವನ್ನೇ ಕಾಣದೆ ಆಮೆಗತಿಯಲ್ಲಿ ಸಾಗುತ್ತಿರುವುದು ಹಿಂದುಳಿದ ಜಿಲ್ಲೆಗಳ ಜನರ ಆಕ್ರೋಶಕ್ಕೆ ಪ್ರಮುಖ ಕಾರಣವಾಗಿದೆ.

> ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯ ನಿಧಾನಗತಿಯ ಕಾರ್ಯವೈಖರಿ ಬಗ್ಗೆ ತೀವ್ರ ಅಸಮಾಧಾನ ಯೋಜನೆಗಳು ಆಮೆಗತಿಯಲ್ಲಿ ಸಾಗುತ್ತಿರುವುದು ಹಿಂದುಳಿದ ಜಿಲ್ಲೆಗಳ ಜನರ ಅಸಮಾಧಾನಕ್ಕೆ ಕಾರಣ 6 ವರ್ಷ ಕಳೆದರೂ ಕಾಮಗಾರಿಗಳಿಗಿಲ್ಲ ಆರಂಭ ಭಾಗ್ಯ

## ತಾಲ್ಲೂಕಿನ ಅಭಿವೃದ್ಧಿಗೆ ಪಕ್ಷಾತೀತವಾಗಿ ಸಹಕಾರ ನೀಡಿ

• **ಉದಯವಾಹಿನಿ,ಜಾಲಹಳ್ಳಿ:**

ಪಕ್ಷಾತೀತವಾಗಿ ತಾಲ್ಲೂಕಿನ ಅಭಿವೃದ್ಧಿಗೆ ಎಲ್ಲರೂ ಸಹಕಾರ ನೀಡಬೇಕು' ಎಂದು ಶಾಸಕಿ ಕರೆಮ್ಮ ಜಿ.ನಾಯಕ ಹೇಳಿದರು. ಪಟ್ಟಣದ ಸರ್ಕಾರಿ ಬಾಲಕರ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಹಮ್ಮಿಕೊಂಡಿದ್ದ ಶಾಲಾ ಕಟ್ಟಡದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿ, 'ಇಲ್ಲಿಯವರೆಗೂ ಗ್ರಾಮಗಳ ಶಾಲಾ ಕಟ್ಟಡಗಳು ಹಾಗೂ ಮೂಲ ಸೌಕರ್ಯಕ್ಕೆ ಹೆಚ್ಚು ಅನುದಾನ ವಿನಿಯೋಗಿಸಲಾಗಿದೆ' ಎಂದು ಹೇಳಿದರು.

2024-25ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಯೋಜನೆಯ 58 ಲಕ್ಷ ವೆಚ್ಚದಲ್ಲಿ ನಾಲ್ಕು ಕೋಣೆಗಳ ನಿರ್ಮಾಣಕ್ಕೆ ವರ್ಷದ ಹಿಂದೆ ಭೂಮಿ ಪೂಜೆ ಮಾಡಲಾಗಿತ್ತು. ಇಷ್ಟು ಬೇಗ ಕಾಮಗಾರಿ ಪೂರ್ಣಗೊಳಿಸಿರುವುದು ಸಂತಸ ತಂದಿದೆ' ಎಂದರು. ವಿವಿಧ ಗ್ರಾಮಗಳಲ್ಲಿ ಶಾಲಾ ಕಟ್ಟಡಗಳ ನಿರ್ಮಾಣಕ್ಕೆ ಸುಮಾರು 104 ಕೋಟಿ ಅನುದಾನ ನೀಡಲಾಗಿದೆ. ನಂಜುಡಪ್ಪ ವರದಿ ಆಧಾರದಲ್ಲಿ ಈ ಕ್ಷೇತ್ರಕ್ಕೆ ಹೆಚ್ಚು ಅನುದಾನ ಬರುತ್ತದೆ. ಅದನ್ನು ಸರಿಯಾಗಿ ಬಳಕೆ ಮಾಡಿಕೊಂಡು ಶಿಕ್ಷಣ ವ್ಯವಸ್ಥೆಯನ್ನು ಉತ್ತಮ ಪಡಿಸಿಕೊಳ್ಳಬೇಕಾಗಿದೆ' ಎಂದು ಹೇಳಿದರು.

## ಮಿನಿ ನ್ಯೂಸ್

### ಕೇಂದ್ರ ಸರ್ಕಾರದಿಂದ ಪಾರದರ್ಶಕ ನೇಮಕಾತಿ:ಪ್ರಹ್ಲಾದ ಜೋಶಿ



ಉದಯವಾಹಿನಿ ಚಿತ್ರ

• **ಉದಯವಾಹಿನಿ, ಹುಬ್ಬಳ್ಳಿ:**

ಕೇಂದ್ರ ಸರ್ಕಾರವು ಭ್ರಷ್ಟಾಚಾರ ರಹಿತ ಪಾರದರ್ಶಕ ನೇಮಕಾತಿಗೆ ಆದ್ಯತೆ ನೀಡುತ್ತಿದೆ. ರೋಜಗಾರ್ ಮೇಳದಲ್ಲಿ ಉದ್ಯೋಗ ಪ್ರಮಾಣ ಪತ್ರ ಪಡೆದವರು ಸಾರ್ವಜನಿಕರ ಸೇವೆಗೆ ಬದುಕನ್ನು ಮುಡಿಪಾಗಿಡಬೇಕು' ಎಂದು ಕೇಂದ್ರ ಸಚಿವ ಪ್ರಲಾದ ಜೋಶಿ ಹೇಳಿದರು. ಇಲ್ಲಿನ ಕೇಶ್ವಾಪುರದ ರೈಲ್ವೆ ಆಫೀಸರ್ಸ್ ಕ್ಲಬ್‌ನಲ್ಲಿ ಶನಿವಾರ ನಡೆದ 19ನೇ ರೋಜಗಾರ್ ಮೇಳ ಉದ್ಘಾಟಿಸಿ, ಅಭ್ಯರ್ಥಿಗಳಿಗೆ ಉದ್ಯೋಗ ಪ್ರಮಾಣ ಪತ್ರ ವಿತರಿಸಿ ಮಾತನಾಡಿದರು.

ಸಮರ್ಪಣಾಭಾವದಿಂದ ಕಾರ್ಯನಿರ್ವಹಿಸಬೇಕು' ಎಂದರು. 'ಕೇಂದ್ರ ಸರ್ಕಾರದ ಅಧೀನದಲ್ಲಿರುವ ಎಲ್ಲ ಇಲಾಖೆಗಳಲ್ಲೂ ನೇಮಕಾತಿ ನಡೆಯುತ್ತಿದೆ. ಅನಗತ್ಯ ಹುದ್ದೆಯನ್ನು ತೆಗೆದು, ಖಾಲಿ ಇರುವ ಎಲ್ಲ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆ. ಇಂದು ದೇಶದಾದ್ಯಂತ 51 ಸಾವಿರ ಮಂದಿಗೆ ನೇಮಕಾತಿ ಪತ್ರ ವಿತರಿಸಲಾಗಿದೆ' ಎಂದರು. 'ಭಾರತೀಯ ರೈಲ್ವೆ ವಿಶ್ವ ಮಟ್ಟದಲ್ಲಿ ಗಮನಾರ್ಹ ಸಾಧನೆ ಮಾಡಿದ್ದು, ಶೇ 99ರಷ್ಟು ಮಾರ್ಗಗಳು ವಿದ್ಯುದೀಕರಣವಾಗಿದೆ.

ಇಂಧನದ ಮೇಲಿನ ಅವಲಂಬನೆ ಕಡಿಮೆಯಾಗಿದೆ. ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿಯೂ ಪ್ರಗತಿ ಸಾಧಿಸಲಾಗಿದೆ' ಎಂದು ಹೇಳಿದರು. ಅಭ್ಯರ್ಥಿ ಅವನೀಶ ಕುಮಾರ, 'ರೈಲ್ವೆ ಇಲಾಖೆಯಲ್ಲಿ ಉದ್ಯೋಗ ಪಡೆಯುವುದು ನನ್ನ ಕನಸಾಗಿತ್ತು. ನಿರಂತರ ಪರಿಶ್ರಮ ಹಾಗೂ ಅಧ್ಯಯನದಿಂದ ರೈಲ್ವೆ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ, ಉದ್ಯೋಗಿಯಾಗಿದ್ದೇನೆ' ಎಂದರು.

ರೈಲ್ವೆ, ಬ್ಯಾಂಕ್, ಅಂಚೆ ಇಲಾಖೆ, ಕೇಂದ್ರೀಯ ವಿದ್ಯಾಲಯ ಸೇರಿದಂತೆ ಏಳು ಇಲಾಖೆಗಳ 150 ಅಭ್ಯರ್ಥಿಗಳಿಗೆ ನೇಮಕಾತಿ ಪತ್ರಗಳನ್ನು ವಿತರಿಸಲಾಯಿತು. ನೈರುತ್ಯ ರೈಲ್ವೆ ಪ್ರಧಾನ ವ್ಯವಸ್ಥಾಪಕ ಪಿ. ಅನಂತ್, ಪ್ರಧಾನ ಹಿರಿಯ ಸಿಬ್ಬಂದಿ ಅಧಿಕಾರಿ ಸೂರ್ಯಪ್ರಕಾಶ, ಹುಬ್ಬಳ್ಳಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕಿ ಬೇಲಾ ಮೀನಾ ಇದ್ದರು.

## ಎಪಿಎಂಸಿಯಲ್ಲಿ ರೈತರಿಗೆ ಅನ್ಯಾಯ ಸಹಿಸಲಸಾಧ್ಯ

• **ಉದಯವಾಹಿನಿ,ಚಿಕ್ಕಮಂಗಳೂರು**



ರೈತರನ್ನು ದೊಡ್ಡ ವ್ಯಾಪಾರಿಗಳ ಏಕಸ್ವಾಮ್ಯದಿಂದ, ಮಧ್ಯವರ್ತಿಗಳ ಹಾವಳಿಯಿಂದ ರಕ್ಷಿಸುವ ಸಲುವಾಗಿಯೇ ಎಪಿಎಂಸಿ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಆದರೆ, ಇಂತಹ ವ್ಯವಸ್ಥೆಯಲ್ಲೂ ರೈತರಿಗೆ ಅನ್ಯಾಯವಾಗುತ್ತದೆ ಎಂದರೆ, ಅಮಾಯಕ ರೈತರು ಎಲ್ಲಿಗೆ ಹೋಗಬೇಕು? ಯಾರಲ್ಲಿ ನ್ಯಾಯ ಕೇಳಬೇಕು? ಚಿಕ್ಕಮಗಳೂರಿನಲ್ಲಿ ಬೀನ್ಸ್ ಬೆಳೆದು, ಮಾರುಕಟ್ಟೆಯಲ್ಲಿ ಅತ್ಯುತ್ತಮ ದರ ಇದೆ ಎಂದು ಸಂಭ್ರಮದಿಂದ ಎಪಿಎಂಸಿಗೆ ಬಂದ ರೈತರು ಕಣ್ಣೀರಿಡುವ ಪರಿಸ್ಥಿತಿ ತರಲಾಗಿದೆ. ಇದಕ್ಕೆ ಹೊಣೆ ಯಾರು?

ಮೈಸೂರು - ಬೆಂಗಳೂರಿನ ಎಪಿಎಂಸಿಗಳಲ್ಲಿ ಬೀನ್ಸ್ ಇಂದು ಕೆಜಿಗೆ 85-90 ರೂಪಾಯಿಗೆ ಖರೀದಿಯಾಗುತ್ತಿದೆ. ಸಾಮಾನ್ಯ ಗ್ರಾಹಕರಿಗೆ 150 ರೂಪಾಯಿಗೂ ಹೆಚ್ಚು ಬೆಲೆಗೆ ಬೀನ್ಸ್ ಮಾರಾಟವಾಗುತ್ತಿದೆ. ನಮ್ಮ ಚಿಕ್ಕಮಗಳೂರಿನ ರೈತರೂ ತಮಗೆ ಉತ್ತಮ ಬೆಲೆ ಲಭಿಸುತ್ತಿದೆ ಎನ್ನುವ ಸಂತೋಷದಿಂದ ಮಾರುಕಟ್ಟೆಗೆ ಬೀನ್ಸ್ ತಂದರೆ, ಮಧ್ಯವರ್ತಿಗಳು 35-40 ರೂಪಾಯಿಗೆ ಪ್ರತಿ ಕೆಜಿ ಬೀನ್ಸ್ ಬೆಲೆ ನಿಗದಿಪಡಿಸಿದ್ದಾರೆ. ಮಧ್ಯವರ್ತಿಗಳ ಹಾವಳಿಯಿಂದ ರೈತರನ್ನು ರಕ್ಷಿಸಬೇಕಾದ ಎಪಿಎಂಸಿಯಲ್ಲೇ ರೈತರಿಗೆ ಅನ್ಯಾಯವಾಗುತ್ತಿದೆ.ಮಳೆಯಲ್ಲಿನ ವ್ಯತ್ಯಯದ ನಡುವೆಯೂ ರೈತರು ಕಷ್ಟಪಟ್ಟು ಕೃಷಿ ಕಾರ್ಯ ನಡೆಸಿ, ಬೀನ್ಸ್ ಬೆಳೆದಿದ್ದಾರೆ. ಆದರೆ, ಮಧ್ಯವರ್ತಿಗಳು ನೇರವಾಗಿಯೇ ಅನ್ಯಾಯ ಎಸಗುತ್ತಿದ್ದರೂ ಅಧಿಕಾರಿಗಳು ಯಾಕೆ ಯಾವುದೇ ಕ್ರಮ ಕೈಗೊಂಡಿಲ್ಲ? ಅಧಿಕಾರಿಗಳ ಕೈ ಕಟ್ಟಿಹಾಕಿರುವುದು ಯಾರು ಕುರ್ಚಿ ಕಿತ್ತಾಟ, ಭ್ರಷ್ಟಾಚಾರದಲ್ಲಿ ಮುಳುಗಿರುವ ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ರೈತರ ಕುರಿತು ಸ್ವಲ್ಪವೂ ಕಾಳಜಿಯಿಲ್ಲ. ಕೇಂದ್ರ ಸರ್ಕಾರ ಬೆಂಬಲ ಬೆಲೆ ಘೋಷಿಸಿದ್ದರೂ ಕಬ್ಬು, ಭತ್ತ ಖರೀದಿ ಮಾಡದೆ ರೈತರನ್ನು ಬೀದಿಗಿಳಿಸಿದ ಸಿದ್ದರಾಮಯ್ಯನವರ ಸಾಧನೆಯನ್ನು ರೈತರು ಇನ್ನೂ ಮರೆತಿಲ್ಲ. ಇಂದು ಮತ್ತೆ ತರಕಾರಿ ಬೆಳೆಗಾರರು ಬೀದಿಗಿಳಿಯುವ ಪರಿಸ್ಥಿತಿಯನ್ನು ಕಾಂಗ್ರೆಸ್ ಸರ್ಕಾರ ತಂದಿದೆ. ರೈತರನ್ನು ಬೀದಿಗೆ ತಂದ, ರೈತರ ಆಕ್ರೋಶಕ್ಕೆ ಕಾರಣವಾದ ಯಾವ ಸರ್ಕಾರವೂ ಉಳಿದಿಲ್ಲ. ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಸರ್ಕಾರವೂ ಉಳಿಯುವುದಿಲ್ಲ.

ಎಲ್ಲ ಎಪಿಎಂಸಿಗಳಲ್ಲೂ ಸಮಾನ ಸ್ವರೂಪದ ಬೆಲೆಗೆ ತರಕಾರಿ ಖರೀದಿಯಾಗುವಂತೆ ಸರ್ಕಾರ ಸೂಚನೆ ನೀಡಬೇಕು. ರೈತರ ನೆರವಿಗೆ ಸರ್ಕಾರ ಧಾವಿಸಬೇಕು. ಮಧ್ಯವರ್ತಿಗಳು ಮನಬಂದಂತೆ ಬೆಲೆ ನಿಗದಿಪಡಿಸುತ್ತಿದ್ದಾರೆ ಎಂದರೆ ಅಧಿಕಾರಿಗಳು ಅತ್ತ ಗಮನ ಹರಿಸುವಂತೆ ತಕ್ಷಣವೇ ಸೂಚನೆ ನೀಡಬೇಕು. ಈ ಸಮಸ್ಯೆಗೆ ತಕ್ಷಣವೇ ಪರಿಹಾರ ಒದಗಿಸಲು ಸಾಧ್ಯವಾಗದಿದ್ದರೆ, ನಾವು ರೈತರ ಜೊತೆಗೂಡಿ ಹೋರಾಟ ನಡೆಸುವುದು ಅನಿವಾರ್ಯವಾಗಲಿದೆ.

## ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯತ್ವ ಪಡೆಯಲು: ರಾಜ್ಯ ಪ್ರಧಾನ ಕಾರ್ಯದರ್ಶಿ



ಉದಯವಾಹಿನಿ ಚಿತ್ರ

• **ಉದಯವಾಹಿನಿ,ಚಿಂಚೋಳಿ.**

ಕೋಲಿ ಕಬ್ಬಲಿಗ ಸಮಾಜದ ಬಂಧುಗಳು ಈಗಾಗಲೇ ಸದಸ್ಯತ್ವ ಪ್ರಾರಂಭವಾಗಿದೆ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯತ್ವವನ್ನು ಪಡೆದುಕೊಳ್ಳುವಂತೆ ಕೋಲಿ ಕಬ್ಬಲಿಗ ಸಮಾಜದ ರಾಜ್ಯ ಪ್ರಧಾನ ಕಾರ್ಯದರ್ಶಿ ಲಕ್ಷ್ಮಣ ಆವುಂಟಿ ಕರೆ ನೀಡಿದರು.

ಪಟ್ಟಣದ ಚಂದಾಪೂರದ ಅಂಬಿಗರ ಚೌಡಯ್ಯ ಭವನದಲ್ಲಿ ತಾಲೂಕಾ ಕೋಲಿ/ಕಬ್ಬಲಿಗ ಸಮಾಜ ಸದಸ್ಯತ್ವ ನೊಂದಾಣಿ ಅಭಿಯಾನ ತಾಲ್ಲೂಕು ಸಮಿತಿಯಿಂದ ಕೋಲಿ ಸಮಾಜ ಸರಕಾರಿ ನೌಕರರ ಸಂಘದ ಅದ್ಯಕ್ಷ ಜಯಪ್ಪ ಚಾಪಲ್ ಅಧ್ಯಕ್ಷತೆಯಲ್ಲಿ ಜರುಗಿದ ಸದಸ್ಯತ್ವ ನೊಂದಣೆ ಅಭಿಯಾನ ಸಮಾರಂಭದಲ್ಲಿ ಅರ್ಜಿಗಳನ್ನು ಸಮಾಜದ ಬಂದುಗಳಿಗೆ ವಿತರಿಸಿ ಮಾತನಾಡಿದರು.

ತಾಲೂಕಿನ ಪ್ರತಿಯೊಂದು ಗ್ರಾಮಗಳಲ್ಲಿ ಬಹುಸಂಖ್ಯಾತ ಜನಸಂಖ್ಯೆ ಹೊಂದಿರುವ ಕೋಲಿ/ ಕಬ್ಬಲಿಗ ಸಮಾಜದ ಬಂದುಗಳು ಕ್ರೀಯಾಶಿರಾಗಿ ಸಂಘಟಿತರಾಗಲು ತಾಲೂಕಾ ಸಮಿತಿಗೆ ನೂತನ ಅದ್ಯಕ್ಷರು/ ಪದಾದಿಕಾರಿಗಳನ್ನು ಎಲ್ಲಾ ಗ್ರಾಮಗಳ ಬಂದುಗಳ ಅಭಿಪ್ರಾಯದ ಮೇರೆಗೆ ಆಯ್ಕೆ ಮಾಡಲು ತಾಲೂಕಾ ಸಮಿತಿಗೆ ಎಲ್ಲರೂ ಸದಸ್ಯರಾಗಲು ಸದಸ್ವತ್ವ ನೊಂದಣಿ ಮಾಡಿಕೊಳ್ಳುತ್ತಿದ್ದು ಸದರಿಕಾರ್ಯ ಪ್ರಗತಿಯಲ್ಲಿದ್ದು ಸದಸ್ಯತ್ವ ನೊಂದಣಿ ಮತ್ತು ಪದಾಧಿಕಾರಿಗಳ ಆಯ್ಕೆ ಪಾರದರ್ಶಕವಾಗಿ ನಡೆಸಲು ಸಮಾಜದ ಸರಕಾರಿ ನೌಕರರನ್ನು ಸದಸ್ಯತ್ವ ನೊಂದಣಾದಿಕಾರಿಗಳನ್ನಾಗಿ ನೇಮಕ ಮಾಡಲಾಗಿದೆ.

ಈ ಹಿಂದೆ ಜರುಗಿದ ಸಭೆಗಳಲ್ಲಿ ನಿರ್ಣಯಿಸಿದಂತೆ ಪ್ರತಿ ಗ್ರಾಮಗಳಿಂದ ಕೋಲಿ/ಕಬ್ಬಲಿಗ ಸಮಾಜದ ಬಂದುಗಳಿಂದ ಸದಸ್ಯತ್ವ ಪಡೆದು ನೂತನ ಅದ್ಯಕ್ಷರು/ ಪದಾದಿಕಾರಿಗಳನ್ನು ಆಯ್ಕೆ ಮಾಡಲು ನಿರ್ಧರಿಸಿದ್ದು ಸದಸ್ಯತ್ವ ಹೊಂದಿದವರು ಮಾತ್ರ ಅದ್ಯಕ್ಷ ಪದಾದಿಕಾರಿಗಳ ಸ್ಥಾನಗಳಿಗೆ ಸ್ಪರ್ದಿಸಲು ಮತ್ತು ಪದಾದಿಕಾರಿಗಳ ಆಯ್ಕೆಗೆ ಮತದಾನ ಮಾಡಲು ಅರ್ಹತೆ ಹೊಂದಿರುವುದರಿಂದ ಕಡ್ಡಾಯವಾಗಿ ಸದಸ್ಯತ್ವ ಪಡೆಯುದೆಂದು ನಿರ್ದರಿಸಿ ಪ್ರತಿ ಗ್ರಾಮ ಪಂಚಾಯತ ವ್ಯಾಪ್ತಿಗೆ 2/3 ಜನರಂತೆ ಆಯಾ ಭಾಗದ ಕೋಲಿ/ಕಬ್ಬಿಗ ಸಮಾಜದ ಪ್ರಮುಖರನ್ನು ಜವಾಬ್ದಾರಿ ವಹಿಸಿ ಅರ್ಜಿಗಳ ಪುಸ್ತಕಗಳನ್ನು ಮುಖಂಡರಿಗೆ ವಿತರಿಸಲಾಗಿದೆ,ಪ್ರತಿ ಗ್ರಾಮಗಳಿಗೆ ಸದಸ್ಯತ್ವ ಅರ್ಜಿಗಳು ವಿತರಿಸು ಮೂಲಕ ಸದಸ್ಯತ್ವ ನೊಂದಾಯಿಸಿಕೊಳ್ಳಲು ಪ್ರತಿಯೊಂದು ಗ್ರಾಮದಿಂದ ಕೋಲಿ ಸಮಾಜದ ಬಂದುಗಳು/ಯುವಕರು/ ಮಹಿಳೆಯರು ವಿದ್ಯಾರ್ಥಿಗಳು ಸಮಾಜದ ಸರಕಾರಿ ನೌಕರ ಬಾಂಧವರು ಆಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಇದೆ ತಿಂಗಳ ಮೇ.31ರ ಒಳಗೆ ಸದಸ್ಯತ್ವ ಪಡೆಯಲು ಕೋರಿದರು.

ಸದಸ್ಯತ್ವ ಅರ್ಜಿಗಳು ದೊರೆಯದೆ ಇದ್ದಲ್ಲಿ ಅಂಬಿಗರ ಚೌಡಯ್ಯ ಭವನ ಹನುಮಾನ ನಗರ ಚಂದಾಪೂರ ಕಛೇರಿಯಲ್ಲಿ ಸದಸ್ಯತ್ವ ನೊಂದಾಣಿಗೆ ನೇಮಕ ಮಾಡಿದ ಅದಿಕೃತ ಅದಿಕಾರಿಗಳಿಂದ ಸದಸ್ಯತ್ವ ಅರ್ಜಿ ಪಡೆದು ಅವಶ್ಯ ದಾಖಲೆಗಳನ್ನು ನಿಡಿ ನೊಂದಣೆ ಶುಲ್ಕ 500ರೂ.ಪಾತಿಸಿ ರಸೀದಿ ಪಡೆಯಲು ಕೋರಿದ್ದು ಹೆಚ್ಚಿನ ಮಾಹಿತಿಯನ್ನು ಸದಸ್ಯತ್ವ ನೊಂದಾಣಿ ಹಾಗೂ ಚುನಾವಣೆ ಉಸ್ತುವಾರಿ ಅದಿಕಾರಿ ಜಯಪ್ಪಾ ಚಾಪಲ್,ಶಿವಕುಮಾರ ಮ್ಯಾಕಲ್ ,ಅನೀಲಕುಮಾರ ಶಿಕ್ಷಕರು,ಸಮಾಜದ ಕಛೆರಿ ವೇಳೆಯಲ್ಲಿ ನಿಗಧಿತ ಸಮಯದಲ್ಲಿ ಖುದ್ದಾಗಿ ಭೇಟಿಯಾಗಿ ಹೆಚ್ಚಿನ ಮಾಹಿತಿ ಪಡೆಯಲು ತಿಳಿಸಿದರು.

ಈ ಸಂದರ್ಭದಲ್ಲಿ

ಅನೀಲಕುಮಾರ ಜಮಾದಾರ ಹುಡದಳ್ಳಿ,ಶರಣು ನಾಟಿಕಾರ,ಗುಂಡು ಔರಾದಿ,ಕಾಶಿನಾಥ ನಾಟಿಕಾರ,ದೌಲಪ್ಪ ಸುಣಗಾರ,ಮಹೇಶ್ ಫಾಲಿ,ಚಂದ್ರಶೇಖರ ಪೋಲಕಪಳ್ಳಿ,ನಾಮದೇವ ಪಾಟೀಲ್,ಜಗನ್ನಾಥ ಲೊಡ್ಡಾ,ಡಾ. ಬಸವರಾಜ ತಳವಾರ,ಅನೀಲ ಗಂಜಗಿರಿ,ಜಗನ್ನಾಥ ಟಾಕಿ,ಮಲ್ಲಿಕಾರ್ಜುನ ನೆಲ್ಲಿ,ನರಸಪ್ಪ ಗಣಾಪುರ,ಜಯಶಂಕರ ಇದ್ಲಾಯಿ,ವಿಶ್ವನಾಥ ಐನೊಳ್ಳಿ,ರಮೇಶ ದೇಗಲ್ಮಡಿ ಚಂದು ಫಾಲಿ,ಮಹೆಶ ಗರಗಪಳ್ಳಿ,ತಿಪ್ಪಣ್ಣಾ ತಳವಾರ,ಹಣಮಂತ ಗೌರಿ,ಸೇರಿದಂತೆ ವಿವಿಧ ಗ್ರಾಮಗಳಿಂದ ಸಮಾಜದ ಬಂದುಗಳು ಭಾಗವಹಿಸಿದರು.

## ಅಸಮಾನತೆ ಜೀವಂತವಿಡುವ ಹುನ್ನಾರ

• **ಉದಯವಾಹಿನಿ ಗದಗ:**




ಉದಯವಾಹಿನಿ ಚಿತ್ರ

ನಗರದಲ್ಲಿ ಮೇ 31ರಂದು ನಡೆಯಲಿರುವ ಹಿಂದೂ ಸಮಾವೇಶಕ್ಕೆ ವಿರೋಧ ವ್ಯಕ್ತಪಡಿಸಿ ಸಿಪಿಐಎಂ ಕಾರ್ಯಕರ್ತರು ಶನಿವಾರ ನಗರದ ಗಾಂಧಿ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು. ಸಿಪಿಐಎಂನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಯು. ಬಸವರಾಜ ಮಾತನಾಡಿ, 'ಮನುವಾದಿಗಳು ಮೂಲದಲ್ಲೇ ಅಸಮಾನತೆ, ಜಾತಿ ಅಸ್ಪೃಶ್ಯತೆಯಿಂದ ಕೂಡಿದ ಸಮಾಜವನ್ನು ಕಟ್ಟಿ, ಅದನ್ನು ಪೋಷಿಸಿದರು. ಆ ಸನಾತನವಾದಿಗಳೇ ಇಂದು ಬಿಜೆಪಿ ಮತ್ತು ಸಂಘ ಪರಿವಾರದ ಹೆಸರಿನಲ್ಲಿ ಜಾತಿ, ಅಸ್ಪೃಶ್ಯತೆಯನ್ನು ಜೀವಂತವಾಗಿಡಲು ಪ್ರಯತ್ನಿಸುತ್ತಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕನೇರಿಯ ಕಾಡು ಸಿದ್ದೇಶ್ವರ ಸ್ವಾಮೀಜಿಯನ್ನು ಮುಂದಿಟ್ಟುಕೊಂಡು ಶರಣರ ಹೆಸರಿನಲ್ಲಿ ಹಿಂದೂ ಸಮಾವೇಶ ನಡೆಸುತ್ತಿದ್ದಾರೆ. ಸಮಾನತೆ ಮತ್ತು ವಚನ ಚಳವಳಿಯಲ್ಲಿ ನಂಬಿಕೆ ಇಟ್ಟಂತಹ ಗದುಗಿನ ಜನರು ಈ ಸಮಾವೇಶಕ್ಕೆ ಯಾವುದೇ ರೀತಿಯ ಬೆಂಬಲ ನೀಡಬಾರದು' ಎಂದು ಮನವಿ ಮಾಡಿದರು. ಕಾರ್ಯಕ್ರಮಗಳನ್ನು ದೇಶದಲ್ಲೆಡೆ ನಡೆಸುತ್ತಿದೆ' ಎಂದು ಆರೋಪಿಸಿದರು. ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಹೋರಾಡಲು ಮುಂದಾಗಬೇಕು' ಎಂದು ಹೇಳಿದರು.

## ಬೀನ್ಸ್ ಖರೀದಿಯಲ್ಲಿ ಮೋಸ ಆರೋಪ: ರೈತರ ಪ್ರೊಟೆಸ್ಟ್

• **ಉದಯವಾಹಿನಿ, ಚಿಕ್ಕಮಗಳೂರು**

ಎಪಿಎಂಸಿಯಲ್ಲಿ ಬೀನ್ಸ್ ವ್ಯಾಪಾರಿಗಳಿಂದ ಬೆಲೆಯಲ್ಲಿ ಮೋಸವಾಗಿದೆ ಎಂದು ಆರೋಪಿಸಿ ನೂರಾರು ರೈತರು ಪ್ರತಿಭಟನೆ ನಡೆಸಿರುವ ಘಟನೆ ಚಿಕ್ಕಮಗಳೂರಲ್ಲಿ ನಡೆದಿದೆ. ಮೈಸೂರು ಮಾರುಕಟ್ಟೆಯಲ್ಲಿ ಬೀನ್ಸ್ ಬೆಲೆ ಕೆಜಿಗೆ 85 ರಿಂದ 90 ರೂಪಾಯಿ ಇದ್ದು, ಚಿಕ್ಕಮಗಳೂರಿನಲ್ಲಿ ಕೇವಲ 40 ರೂಪಾಯಿಗೆ ಖರೀದಿಸಲಾಗುತ್ತಿದೆ ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅಲ್ಲದೆ ಎಪಿಎಂಸಿ ಗೇಟ್ ಬಂದ್ ಮಾಡಿ ಆಕ್ರೋಶ ಹೊರಹಾಕಿದ್ದಾರೆ. ಬೀನ್ಸ್‌ಗೆ ಈ ಬಾರಿ ಉತ್ತಮ ಬೆಲೆ ಬಂದಿದೆ. ಮೈಸೂರು, ಬೆಂಗಳೂರು ಂಕಒಅ ಮಾರುಕಟ್ಟೆಯಲ್ಲಿ 80 ರಿಂದ 90 ರೂಪಾಯಿ ಪ್ರತಿ ಕೆಜಿಗೆ ಮಾರಾಟವಾಗುತ್ತಿದೆ. ಆದರೆ ಚಿಕ್ಕಮಗಳೂರು ಂಕಒಅ ಮಾರುಕಟ್ಟೆಯಲ್ಲಿ ಮಾತ್ರ ಇದರ ಅರ್ಧದಷ್ಟು ಬೆಲೆ ಎಂಬುದು ರೈತರ ಆರೋಪ. ಇಲ್ಲಿನ ವ್ಯಾಪಾರಿಗಳು ಕೆಜಿ ಬೀನ್ಸ್‌ನ ಕೇವಲ 40-60 ರೂಪಾಯಿಗೆ ಖರೀದಿಸುತ್ತಿದ್ದಾರೆ ಎಂಬುದು ರೈತರ ಆಕ್ರೋಶದ ಕಟ್ಟೆ ಒಡೆಯಲು ಕಾರಣವಾಗಿದೆ. ಈ ಸಂಬಂಧ ಪೊಲೀಸರ ಜೊತೆಗೆ ಆವರಣದಲ್ಲಿ ಸಭೆ ನಡೆಸಲಾಗಿದೆಯಾದರೂ, ರೈತರು ಮಾತ್ರ ವರ್ತಕರು, ಅಧಿಕಾರಿಗಳು ಸ್ಥಳಕ್ಕೆ ಬರಬೇಕೆಂದು ಪಟ್ಟು ಹಿಡಿದ ಪ್ರಸಂಗ ನಡೆದಿದೆ. ರೈತರ ಆಕ್ರೋಶ ಹೆಚ್ಚುತ್ತಿದ್ದಂತೆ ಸ್ಥಳಕ್ಕೆ ಬಂದ ಚಿಕ್ಕಮಗಳೂರು ತಹಶಿಲ್ದಾರ್ ರೇಷ್ಮಾ, ಎಸಿ ನಟೇಶ್ ರೈತರ ಸಭೆ ನಡೆಸಿದ್ದಾರೆ.



ಉದಯವಾಹಿನಿ ಚಿತ್ರ

ಹೀಗಿದ್ದರೂ ಅಧಿಕಾರಿಗಳು ಮಾತ್ರ ನಾಪತ್ತೆಯಾಗಿದ್ದು, ಸ್ವತಃ ಎಸಿಯೇ ಅವರನ್ನು ಸಂಪರ್ಕಿಸಲು ಯತ್ನಿಸಿದರೂ ಅಧಿಕಾರಿಗಳು ಮಾತಿಗೆ ಸಿಕ್ಕಿಲ್ಲ ಎನ್ನಲಾಗಿದೆ. ಮಧ್ಯರಾತ್ರಿ 12ರವರೆಗೆ ರೈತರು ಪ್ರತಿಭಟನೆ ನಡೆಸಿದ್ದು, ಬೀನ್ಸ್ ದರ ನಿಗದಿ ಸೇರಿ ಜಿಲ್ಲಾಧಿಕಾರಿಗಳ ಜೊತೆ ರೈತರ ಸಭೆ ನಡೆಸುವ ಭರವಸೆಯನ್ನು ತಹಶೀಲ್ದಾರ್ ಮತ್ತು ಎಸಿ ನೀಡಿದ ಬಳಿಕ ರೈತರು ಪ್ರತಿಭಟನೆ ಕೈಬಿಟ್ಟಿದ್ದಾರೆ

## ಮಾವಿನ ಹಣ್ಣು ರಫ್ತು ಬಗ್ಗೆ ರೈತರಿಗೆ ಅರಿವು ಮೂಡಿಸಿ: ಶಾಸಕ ಮಹೇಶ ಟೆಂಗಿನಕಾಯಿ

• **ಉದಯವಾಹಿನಿ ಹುಬ್ಬಳ್ಳಿ:**

ಮಾವಿನ ಹಣ್ಣುಗಳನ್ನು ವಿದೇಶಕ್ಕೆ ರಫ್ತು ಮಾಡುವ ಬಗ್ಗೆ ಸಂಬಂಧಿಸಿದ ಇಲಾಖೆಯವರು ರೈತರಿಗೆ ಅರಿವು ಮೂಡಿಸಬೇಕು. ಇದರಿಂದ ದೇಶದ ಕೀರ್ತಿ ಹೆಚ್ಚುತ್ತದೆ' ಎಂದು ಶಾಸಕ ಮಹೇಶ ಟೆಂಗಿನಕಾಯಿ ಹೇಳಿದರು. ನಗರದ ಎಪಿಎಂಸಿ ಆವರಣದಲ್ಲಿರುವ ವಿವಿಧೋದ್ದೇಶ ವಸ್ತುಪ್ರದರ್ಶನ ಕೇಂದ್ರದಲ್ಲಿ ಕೃಷಿ ಮಾರಾಟ ಮಂಡಳಿ, ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ, ತೋಟಗಾರಿಕಾ ಇಲಾಖೆ, ಕೃಷಿ ಮಾರಾಟ ಇಲಾಖೆ, ಜಿ.ಎಸ್ ಫೌಂಡೇಷನ್ ಹಾಗೂ ಜಿಲ್ಲಾಡಳಿದ ಸಹಯೋಗದಲ್ಲಿ ಶನಿವಾರ ಆಯೋಜಿಸಿದ್ದ ಜಿಲ್ಲಾ ಮಟ್ಟದ ಎರಡು ದಿನಗಳ ಮಾವು ಮೇಳ ಉದ್ಘಾಟಿಸಿ ಮಾತನಾಡಿದರು. 'ಇಂತಹ ಕಾರ್ಯಕ್ರಮಗಳು ಕಾಟಾಚಾರಕ್ಕೆ ಆಗಬಾರದು. ಮೇಳದ ಕುರಿತು ವ್ಯಾಪಕ ಪ್ರಚಾರ ಮಾಡಬೇಕಿತ್ತು. ವಿವಿಧ ಇಲಾಖೆಗಳನ್ನು ಒಳಗೊಂಡು, ಹೆಚ್ಚು ಪರಿಶ್ರಮ ವಹಿಸಬೇಕಿತ್ತು. ಅಪಾರ ಸಂಖ್ಯೆಯಲ್ಲಿ ಜನರು ಇಲ್ಲಿಗೆ ಬಂದು, ಹೆಚ್ಚಿನ ಪ್ರಮಾಣದಲ್ಲಿ ಮಾವಿನಹಣ್ಣುಗಳನ್ನು ಖರೀದಿಸಿದಾಗಲೇ ಮೇಳ ಯಶಸ್ವಿಯಾಗುವುದು' ಎಂದರು. 'ಪ್ರತಿವರ್ಷ ಮೇಳ ಆಯೋಜನೆಗೆ ಸಮಯ ನಿಗದಿಯಾಗಬೇಕು. ಆಗ ಜನರಿಗೆ ನಿಖರ ಮಾಹಿತಿ ಇರುತ್ತದೆ. ವಿವಿಧ ತಳಿಯ ಮಾವು ಸವಿಯಲು ಎಲ್ಲರೂ ಬರುತ್ತಾರೆ. ಖರೀದಿಗಾರರಿಗೂ ಇದು




ಉದಯವಾಹಿನಿ ಚಿತ್ರ

ನೆರವಾಗುತ್ತದೆ. ಅವಕಾಶವಿದ್ದರೆ ಈ ಬಾರಿಯ ಮೇಳವನ್ನು ಇನ್ನೊಂದು ದಿನ ವಿಸ್ತರಿಸಿ' ಎಂದು ತಿಳಿಸಿದರು. ಎಪಿಎಂಸಿ ಕಾರ್ಯದರ್ಶಿ ಗುರುಪ್ರಸಾದ್ ಕೆ.ಎಚ್. ಮಾತನಾಡಿ, 'ಇಂತಹ ಮೇಳಗಳು ಮಾವು ಬೆಳೆಗಾರರಿಗೆ ಉತ್ತೇಜನಕಾರಿಯಾಗಿವೆ. ಮಾವು ರಫ್ತಗೆ ಸಾಕಷ್ಟು ಅವಕಾಶಗಳಿವೆ. ಅಮೆರಿಕದಲ್ಲಿ ಕೆ.ಜಿ ಮಾವಿಗೆ 60 ಡಾಲರ್ ದರವಿದೆ. ರೈತರು ಮಾವು ಉತ್ಪಾದನೆ ಜೊತೆಗೆ ಮಾರುಕಟ್ಟೆಯತ್ತ ಗಮನ ಹರಿಸಬೇಕು' ಎಂದರು. 'ಮಾವಿನ ಹಣ್ಣುಗಳನ್ನು ಸರಿಯಾಗಿ ನಿರ್ವಹಣೆ ಮಾಡಿದರೆ ಅಧಿಕ ಲಾಭ ಗಳಿಸಬಹುದು. ರೈತರು ಸಂಘಟನೆ ಮೂಲಕ ರಫ್ಟಿಗೆ ಮುಂದಾಗಬೇಕು. ಧಾರವಾಡ ಆಫೂಸ್ ಮಾವು ತಳಿಗೆ ಜಾಗತಿಕ ಮಾನ್ಯತೆ (ಜಿಐ ಟ್ಯಾಗ್) ದೊರೆತರೆ, ವಿಶ್ವದ ಮಾರುಕಟ್ಟೆಗೆ ತಲುಪಿಸಲು ಅನುಕೂಲವಾಗುತ್ತದೆ' ಎಂದು ಅಭಿಪ್ರಾಯಪಟ್ಟರು.

ಮಾಜಿ ಸಂಸದ ಐ.ಜಿ.ಸನದಿ ಮಾತನಾಡಿ, 'ಪರಿಸರದಲ್ಲಿ ಹೆಚ್ಚು ಗಿಡಗಳನ್ನು ಬೆಳೆಸಿದರೆ ವಿಕಾಸ ಸಾಧ್ಯವಾಗುತ್ತದೆ. ಇವು ಮನುಷ್ಯನೊಂದಿಗೆ ಪಶು-ಪಕ್ಷಿಗಳಿಗೂ ಆಹಾರ, ಆಶ್ರಯ ನೀಡುತ್ತವೆ. ಹಾಗಾಗಿ, ರೈತರು ಕೃಷಿಭೂಮಿಯನ್ನು ಮಾರಾಟ ಮಾಡಬಾರದು. ಕಾಂಕ್ರೀಟ್ ಕಾಡಿನ ಬದಲು ನೈಜ ಕಾಡು ವೃದ್ಧಿಯಾಗಲು ಎಲ್ಲರೂ ಶ್ರಮಿಸಬೇಕು' ಎಂದು ಸಲಹೆ ನೀಡಿದರು. ಮಾವು ಬೆಳೆಗಾರರ ಬಳಗದ ರಾಜೇಂದ್ರ ಪೊದ್ದಾರ, ಪಾಲಿಕೆ ಸದಸ್ಯ ಮಲ್ಲಿಕಾರ್ಜುನ ಗುಂಡೂರ, ಮೋಹನ ಹೊಸಮನಿ, ಚನ್ನು ಹೊಸಮನಿ, ಬಿ.ವಿ.ಪಾಟೀಲ, ಚಿದಾನಂದ ಮನಸೂರ, ಪ್ರಕಾಶ ಶೃಂಗೇರಿ, ಕೃಷಿ ಮಾರಾಟ ತರಬೇತಿ ಮಹಾವಿದ್ಯಾಯದ ಪ್ರಾಚಾರ್ಯ ಆಶಿಕ್ ಅಲಿ ಡಿ.ಎಂ., ಜಿಷಾನ್ ಸಿರಸಂಗಿ ಇದ್ದರು.

## ಭವನ ನಿರ್ಮಾಣಕ್ಕೆ ಜಾಗ ನೀಡಲು ಆಗ್ರಹ



ಉದಯವಾಹಿನಿ ಚಿತ್ರ

• **ಉದಯವಾಹಿನಿ ,ಕಾರಟಗಿ:**

ತಾಲ್ಲೂಕಿನ ಸರ್ಕಾರಿ ನೌಕರರು ಸರ್ಕಾರ ಹಾಗೂ ಜನರ ಮಧ್ಯೆ ಕೊಂಡಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ನೌಕರರ ಸಂಘದ ಇತರೆ ಕಾರ್ಯಚಟುವಟಿಕೆಗಳನ್ನು ನಡೆಸಲು ಅನುಕೂಲವಾಗುವಂತೆ ಸಾಂಸ್ಕೃತಿಕ ಭವನ ನಿರ್ಮಿಸಲು ಉದ್ದೇಶಿಸಿದೆ.

ಭವನ ನಿರ್ಮಾಣಕ್ಕೆ ಸರ್ಕಾರದ ಜಾಗ ನೀಡಬೇಕು' ಎಂದು ಆಗ್ರಹಿಸಿ ತಾಲ್ಲೂಕು ಸರ್ಕಾರಿ ನೌಕರರ ಸಂಘದ ಸದಸ್ಯರು ಗ್ರೇಡ್-2 ತಹಶೀಲ್ದಾರ್ ಷಣ್ಮುಖಪ್ಪಗೆ ಮನವಿ ಸಲ್ಲಿಸಿದರು. ಸಂಘದ ತಾಲ್ಲೂಕು ಅಧ್ಯಕ್ಷ ಹನುಮಂತಪ್ಪ ತೊಂಡಿಹಾಳ ಮಾತನಾಡಿ, 'ಸರ್ಕಾರಿ ನೌಕರರು ದಿನನಿತ್ಯ ಸರ್ಕಾರದ ಸೌಲಭ್ಯಗಳನ್ನು ಜನರಿಗೆ ತಲುಪಿಸುವ ಜೊತೆಗೆ ಸಾರ್ವಜನಿಕ ಸಮಸ್ಯೆಗಳ ನಿವಾರಣೆಗೆ ಶ್ರಮಿಸುತ್ತಿದ್ದಾರೆ. ಜನರ ಸಮಸ್ಯೆಗಳನ್ನು ಆಡಳಿತ ಯಂತ್ರದ ಗಮನಕ್ಕೆ ತಂದು ಸುಧಾರಣೆಗೆ ಶ್ರಮಿಸುತ್ತಿದ್ದಾರೆ. ಸರ್ಕಾರದ ಯೋಜನೆಗಳು ಯಶಸ್ವಿಯಾಗಿಸುವಲ್ಲಿ ಸರ್ಕಾರಿ ನೌಕರರ ಪಾತ್ರ ಮುಖ್ಯವಾಗಿದೆ.

ತಾಲ್ಲೂಕು ಕೇಂದ್ರದಲ್ಲಿಯೂ ಸರ್ಕಾರಿ ನೌಕರರ ಹಿತಾಸಕ್ತಿ ಕಾಪಾಡಲು ಹಾಗೂ ಇತರ ಕಾರ್ಯಚಟುವಟಿಕೆಗಳನ್ನು ನಡೆಸಲು ಭವನ ನಿರ್ಮಿಸಲು ತಾಲ್ಲೂಕಾಡಳಿತ ಈಗಾಗಲೇ ಗುರುತಿಸಿರುವ ಸ.ನಂ. 265ರ 12.15 ಎಕರೆಯ ಸರ್ಕಾರಿ ಭೂಮಿಯಲ್ಲಿ 20 ಗುಂಟೆ ಜಾಗೆಯನ್ನು ಸಂಘಕ್ಕೆ ಮಂಜೂರು ಮಾಡಬೇಕು' ಎಂದು ಆಗ್ರಹಿಸಿದರು.

ಸಂಘದ ಉಪಾಧ್ಯಕ್ಷ ಗುರುಪ್ರಸಾದ, ಕಾರ್ಯದರ್ಶಿ ವೆಂಕೋಬ ಛಲವಾದಿ, ರಾಜ್ಯ ಪರಿಷತ್ ಸದಸ್ಯ ಮಂಜುನಾಥ ಹಿರೇಮಠ, ಖಜಾಂಚಿ ಶ್ರೀಕಾಂತ, ಸಾಂಸ್ಕೃತಿಕ ಕಾರ್ಯದರ್ಶಿ ಶಿವರಾಜಕುಮಾರ, ಅನೇಕ ನೌಕರರು ಉಪಸ್ಥಿತರಿದ್ದರು.

## ಬಿಜೆಪಿ ಮರಳಿ ಅಧಿಕಾರಕ್ಕೇರಲು ಅಧ್ಯಕ್ಷರು ಮಾರ್ಗದರ್ಶನ ನೀಡಿದ್ದಾರೆ :ರವಿ ಸಿ.ಟಿ

### ಕರ್ನಾಟಕದಲ್ಲಿ ಕಾಂಗ್ರೇಸ್ ಸರ್ಕಾರ ಜನರ ವಿಶ್ವಾಸ ಉಳಿಸಿಕೊಂಡಿಲ್ಲ. ಮುಖ್ಯಮಂತ್ರಿಗಳೂ ಭ್ರಷ್ಟಾಚಾರದ ಆರೋಪದಿಂದ ಮುಕ್ತರಾಗಿಲ್ಲ.




ಉದಯವಾಹಿನಿ ಚಿತ್ರ

• **ಉದಯವಾಹಿನಿ ,ಚಿಕ್ಕಮಂಗಳೂರು**

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾಗಿ ಜವಾಬ್ದಾರಿ ವಹಿಸಿಕೊಂಡ ಬಳಿಕ ನಿತಿನ್ ನಬಿನ್ ಅವರು ಮೊದಲ ಬಾರಿಗೆ ಕರ್ನಾಟಕಕ್ಕೆ ಅಧಿಕೃತ ಪ್ರವಾಸಕ್ಕೆ ಆಗಮಿಸಿದ್ದಾರೆ. ಬೆಳಗ್ಗೆ 10:30ರಿಂದ ಶಾಸಕರು, ಸಂಸದರು, ಮತ್ತು ಜಿಲ್ಲಾಧ್ಯಕ್ಷರಿಂದ ಮೇಲ್ಪಟ್ಟ ನಾಯಕರ ಜೊತೆ ಸಂವಾದ ನಡೆಸಿದರು. ಈ ಸಭೆಯಲ್ಲಿ, ಬಿಜೆಪಿ ವಿಚಾರ, ಪರಿಶ್ರಮ ಮತ್ತು ಸಂವಾದದಿಂದಾಗಿ ಶೂನ್ಯದಿಂದ 22 ರಾಜ್ಯಗಳಲ್ಲಿ ಅಧಿಕಾರ ನಡೆಸುವ ಮಟ್ಟಕ್ಕೆ, ಶೂನ್ಯದಿಂದ 400ಕ್ಕೂ ಹೆಚ್ಚು ಸಂಸದರನ್ನು ಹೊಂದುವ ಮಟ್ಟಕ್ಕೆ, ಶೂನ್ಯದಿಂದ 2,000ಕ್ಕೂ ಹೆಚ್ಚು ಶಾಸಕರನ್ನು ಗೆಲ್ಲಿಸುವ ಮಟ್ಟಕ್ಕೆ ಬೆಳೆದಿದೆ. ಕರ್ನಾಟಕದಲ್ಲಿ ಕಾಂಗ್ರೇಸ್ ಸರ್ಕಾರ ಜನರ ವಿಶ್ವಾಸ ಉಳಿಸಿಕೊಂಡಿಲ್ಲ. ಭ್ರಷ್ಟಾಚಾರದ ವಿರುದ್ಧ ಮಾತನಾಡಿದ ಕಾಂಗ್ರೇಸ್ ಸರ್ಕಾರದಲ್ಲಿ ಪ್ರತಿಯೊಬ್ಬ ಸಚಿವರೂ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ. ಸ್ವತಃ ಮುಖ್ಯಮಂತ್ರಿಗಳೂ ಭ್ರಷ್ಟಾಚಾರದ ಆರೋಪದಿಂದ ಮುಕ್ತರಾಗಿಲ್ಲ. ಜನರ ಬದುಕನ್ನು ಹಸನು ಮಾಡುವ ಭರವಸೆ ನೀಡಿದ ಕಾಂಗ್ರೇಸ್ ಪಕ್ಷ ಬೆಲೆ ಏರಿಕೆಯ ಮೂಲಕ ಜನರ ಬದುಕನ್ನು ದುಸ್ತರವಾಗಿಸಿದೆ. ಕಾಂಗ್ರೆಸ್ ಕೇವಲ ಗ್ಯಾರಂಟಿಯ ಪ್ರಚಾರದಲ್ಲಿ ತೊಡಗಿದ್ದು, ಜನರ ಬದುಕಿಗೆ ಗ್ಯಾರಂಟಿಯಿಲ್ಲ. ಕಾನೂನು ಸುವ್ಯವಸ್ಥೆ ಹದಗೆಟ್ಟು, ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಯುವಕರು ಹತಾಶರಾಗಿದ್ದಾರೆ. ಅತಿಹೆಚ್ಚು ಮಹಿಳೆಯರ ನಾಪತ್ತೆ ಪ್ರಕರಣಗಳಿವೆ. ಇವೆಲ್ಲವೂ ಸರ್ಕಾರದ ವೈಫಲ್ಯಕ್ಕೆ ಸಾಕ್ಷಿ ಎಂದು ನಿತಿನ್ ನಬಿನ್ ಹೇಳಿದ್ದು, ಕೇವಲ ಕಾಂಗ್ರೆಸ್ ವೈಫಲ್ಯದ ಕಾರಣದಿಂದಲೇ ನಾವು ಅಧಿಕಾರಕ್ಕೆ ಬರಬಹುದು ಎನ್ನುವ ವಿಶ್ವಾಸದಲ್ಲಿ ಕೂರುವಂತಿಲ್ಲ ಎಂದು ಅವರು ಕಿವಿಮಾತು ಹೇಳಿದರು. ಇಂದು ಹಲವು ದೇಶಗಳಲ್ಲಿ ವಾರಕ್ಕೆ ಒಂದೆರಡು ದಿನ ಮಾತ್ರ ಇಂಧನ ಲಭಿಸಿದರೆ, ನಮ್ಮಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ದೂರದೃಷ್ಟಿಯಿಂದಾಗಿ ಪ್ರತಿದಿನವೂ ಇಂಧನ ಲಭ್ಯವಿದೆ. ಕರ್ನಾಟಕದಲ್ಲೂ ಅಂತಹ ಪರ್ಯಾಯ ನಾಯಕತ್ವವನ್ನು ಬಿಜೆಪಿ ನೀಡಬೇಕು. ಉದ್ಯೋಗ ಸೃಷ್ಟಿಸುವ, ಮೂಲಸೌಕರ್ಯ ವೃದ್ಧಿಸುವ, ರೈತರಿಗೆ ವಿಶ್ವಾಸಾರ್ಹವಾಗಿರುವ ಪರ್ಯಾಯ ವ್ಯವಸ್ಥೆಯನ್ನು ಬಿಜೆಪಿ ಕಟ್ಟಿಕೊಡಬೇಕು. ಅದಕ್ಕೆ ಕಾಂಗ್ರೆಸ್ ವೈಫಲ್ಯವನ್ನು ಅರಿತು, ನಿರಂತರ ಹೋರಾಟ ನಡೆಸಿ, ಒಂದು ತಂಡವಾಗಿ ಕಾರ್ಯಾಚರಿಸಲು ಸೂಚನೆ ನೀಡಿದ್ದಾರೆ. ಎಸ್‌ಐಆರ್ ಕುರಿತಂತೆ ರಾಜ್ಯ ಕಾಂಗ್ರೆಸ್ ಸರ್ಕಾರ ಸಂವಿಧಾನ ವಿರೋಧಿ ಹೇಳಿಕೆ ನೀಡುತ್ತಿದೆ.

ಎಸ್‌ಐಆರ್ 1952ರಿಂದ ನಡೆದು ಬರುತ್ತಿದೆ. ಜವಾಹರಲಾಲ್ ನೆಹರು ಎಸ್ ಐಆರ್ ಮಾಡಿದರೆ ಅದು ಸರಿ, ಇಂದಿರಾಗಾಂಧಿ ಮಾಡಿದರೆ ಸರಿ, ಮನಮೋಹನ್ ಸಿಂಗ್ ಮಾಡಿದರೆ ಸರಿ, ಕಾಂಗ್ರೆಸ್ ಅವಧಿಯಲ್ಲಾದರೆ ಸರಿ, ಆದರೆ ಬಿಜೆಪಿ ಅವಧಿಯಲ್ಲಿ ನಡೆದರೆ ತಪ್ಪು ಎನ್ನುವುದು ಕಾಂಗ್ರೇಸ್ ಒಳಗೆ ಸ್ಪಷ್ಟತೆಯಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ.

ಬದುಕಿಗೆ ಗ್ಯಾರಂಟಿಯಿಲ್ಲ

> ತಮಿಳುನಾಡಿನ ಡಿಎಂಕೆ ವೈಫಲ್ಯದಿಂದಾಗಿ ಎಐಡಿಎಂಕೆ ಅಧಿಕಾರಕ್ಕೆ ಬರುವುದಾಗಿ ಭಾವಿಸಿತ್ತು. ಆದರೆ, ಟಿವಿಕೆ ಮೂರನೇ ಪಕ್ಷವಾಗಿ ಅಧಿಕಾರಕ್ಕೆ ಬಂತು. ಆದ್ದರಿಂದ, ರಾಜ್ಯ ಬಿಜೆಪಿಯೂ ಸಹ ನಾವು ಅಧಿಕಾರಕ್ಕೆ ಬರುತ್ತೇವೆಂದು ಸುಮ್ಮನೆ ಕೂರುವಂತಿಲ್ಲ ಎಂದು ಅವರು ಸಲಹೆ ನೀಡಿದರು ಎಂದು ರವಿ ಹೇಳಿದರು.

> ಕಾಂಗ್ರೇಸ್ ಕಳೆದ ಮೂರು ವರ್ಷಗಳಲ್ಲಿ ಜನರ ಬದುಕನ್ನು ಬದಲಿಸುವ ಯಾವುದೇ ಕೆಲಸ ಮಾಡದೆ, ಕೇವಲ ಪ್ರಚಾರ ತಂತ್ರವನ್ನು ಮಾತ್ರ ಮಾಡುತ್ತಿದ್ದಾರೆ. ಆದ್ದರಿಂದ, ಪ್ರತಿ ವಿಧಾನಸಭಾ ಕ್ಷೇತ್ರದ ಮಟ್ಟದಲ್ಲಿ ಕಾಂಗ್ರೆಸ್ ವೈಫಲ್ಯದ ಚಾರ್ಜ್ ಶೀಟ್ ತಯಾರಿಸಿ, ಜನಪರ ಹೋರಾಟ ನಡೆಸಲು ಕರೆ ನೀಡಿದ್ದಾರೆ. ಕರ್ನಾಟಕ ಕೇವಲ ದಕ್ಷಿಣ ಭಾರತದಲ್ಲಿ ಮಾತ್ರವಲ್ಲದೆ, ಸಮಸ್ತ ದೇಶದಲ್ಲಿ ಬಲವಾದ ಸಂಘಟನೆ ಹೊಂದಿರುವ ರಾಜ್ಯ. ಇಲ್ಲಿ ನಾವು ಜನಪರ ಹೋರಾಟ ಮಾಡಿದರೆ, ಜನರೇ ನಮಗೆ ಅಧಿಕಾರಕ್ಕೆ ಬರುವ ಶಕ್ತಿ ನೀಡುತ್ತಾರೆ ಎಂದು ನಿತಿನ್ ನಬಿನ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ ಎಂದರು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 07:30 ರಿಂದ 09:00 |
| ಗುಳಿಕ ಕಾಲ | ಮಧ್ಯಾನ | 01:30 ರಿಂದ 03:00 |
| ಯಮಗಂಡ ಕಾಲ | ಬೆಳಿಗ್ಗೆ | 10:30 ರಿಂದ 12:00 |

**ಮೇಷ** ನಿಮ್ಮ ಭಯವನ್ನು ಗುಣಪಡಿಸಲು ಇದು ಒಳ್ಳೆಯ ಸಮಯ. ಇದು ಭೌತಿಕ ಚೈತನ್ಯವನ್ನು ಕಡಿಮೆ ಮಾಡುವುದಲ್ಲದೇ ಜೀವಿತಾವಧಿಯನ್ನೂ ಕಡಿಮೆ ಮಾಡುತ್ತದೆ ಎಂದು ನೀವು ಅರ್ಥ ಮಾಡಿಕೊಳ್ಳಬೇಕು. ಸಣ್ಣ ಉದ್ಯೋಗವನ್ನು ಮಾಡುವ ಜನರು, ತಮ್ಮ ಆಪ್ತರಿಂದ ಯಾವುದೇ ಸಲಹೆಯನ್ನು ಪಡೆಯಬಹುದು.

**ವೃಷಭ** ನೀವು ಆರಾಮವಾಗಿರುವ ಭಾವನೆ ಹೊಂದಿರುತ್ತೀರಿ ಮತ್ತು ಆನಂದಿಸಲು ಸೂಕ್ತ ಮನೋಭಾವದಲ್ಲಿರುತ್ತೀರಿ. ನೀವು ಹಣಕ್ಕೆ ಸಂಬಂಧಿಸಿದ ಸಮಸ್ಯೆಯ ಕಾರಣದಿಂದ ತೊಂದರೆಗೊಳಗಾಗಬಹುದು. ಇದಕ್ಕಾಗಿ ನೀವು ನಿಮ್ಮ ಯಾವುದೇ ವಿಶ್ವಾಸಾರ್ಹರಿಂದ ಸಲಹೆಯನ್ನು ತೆಗೆದುಕೊಳ್ಳಬೇಕು.

**ಮಿಥುನ** ನೀವು ಆರಾಮವಾಗಿರುವ ಭಾವನೆ ಹೊಂದಿರುತ್ತೀರಿ ಮತ್ತು ಆನಂದಿಸಲು ಸೂಕ್ತ ಮನೋಭಾವದಲ್ಲಿರುತ್ತೀರೆ ಇಂದು ಆರ್ಥಿಕ ಉತ್ತಮವಾಗಲಿದೆ ಮತ್ತು ನೀವು ಹೆಚ್ಚಿನ ಹಣವನ್ನು ಪಡೆಯುತ್ತೀರಿ . ಮನೆಯ ವಿಷಯಗಳು ಮತ್ತು ಬಾಕಿಯಿರುವ ಗೃಹಕೃತ್ಯಗಳನ್ನು ಪೂರೈಸಲು ಒಂದು ಅನುಕೂಲಕರ ದಿನ.

**ಕರ್ಕಾಟಕ** ಭಾವನಾತ್ಮಕವಾಗಿ ನೀವು ತುಂಬ ಸ್ಥಿರವಾಗಿರುವುದಿಲ್ಲ – ಆದ್ದರಿಂದ ನೀವು ಇತರರ ಮುಂದೆ ಹೇಗೆ ವರ್ತಿಸುತ್ತೀರಿ ಮತ್ತು ಏನು ಹೇಳುತ್ತೀರಿ ಎನ್ನುವ ಬಗ್ಗೆ ಎಚ್ಚರದಿಂದಿರಿ. ಯಾರಾದರೂ ನಿಮ್ಮ ನೆರೆಹೊರೆಯವರು ಇಂದು ನಿಮ್ಮ ಹತ್ತಿರ ಹಣ ಸಾಲ ಕೇಳಲು ಬರಬಹುದು,

**ಸಿಂಹ** ನಿಮ್ಮ ಅಧಿಕ ಚೈತನ್ಯದ ಹೊರತಾಗಿಯೂ ನೀವು ಇಂದು ನಿಮ್ಮೊಡನೆ ಇರಲಾರದ ಯಾರನ್ನಾದರೂ ನೆನಪಿಸಿಕೊಳ್ಳುತ್ತಿದ್ದೀರಿ. ಯೋಜಿತವಲ್ಲದ ಮೂಲಗಳಿಂದ ಹಣದ ಲಾಭ ನಿಮ್ಮ ದಿನವನ್ನು ಬೆಳಗಿಸುತ್ತದೆ.

**ಕನ್ಯಾ** ನಿಮ್ಮ ಮನಸ್ಸು ಒಳ್ಳೆಯ ವಿಷಯಗಳನ್ನು ಗ್ರಹಿಸುತ್ತದೆ. ಬ್ಯಾಂಕ್ ವ್ಯವಹರಗಳಲ್ಲಿ ಕಾಳಜಿ ವಹಿಸಬೇಕು. ಯುವಕರು ಶಾಲಾ ಯೋಜನೆಗಳಲ್ಲಿ ಕೆಲವು ಸಲಹೆ ಪಡೆಯಬಹುದು. ನಿಮ್ಮ ಪ್ರೇಮಿಯನ್ನು ಭೇಟಿ ಮಾಡುತ್ತಿದ್ದ ಹಾಗೆ ನಿಮ್ಮ ಮನಸ್ಸನ್ನು ಪ್ರಣಯ ಆವರಿಸಿಕೊಳ್ಳುತ್ತದೆ.

**ತುಲಾ** ನಿಮ್ಮ ಆಕರ್ಷಕ ವರ್ತನೆ ಗಮನ ಸೆಳೆಯುತ್ತದೆ. ಆವತ್ತಿಗಾಗಿ ಮಾತ್ರ ಬದುಕುವ ಮತ್ತು ಮನೋರಂಜನೆಗಾಗಿ ಹೆಚ್ಚು ಸಮಯ ಮತ್ತು ಹಣ ಖರ್ಚು ಮಾಡುವ ನಿಮ್ಮ ಪ್ರವೃತ್ತಿಯನ್ನು ನಿಯಂತ್ರಿಸಿ. ಗೃಹಪ್ರವೇಶಕ್ಕೆ ಮಂಗಳಕರ ದಿನ. ನೀವು ಪ್ರೀತಿಯ ಮನೋಭಾವದಲ್ಲಿರುತ್ತೀರಿ.

**ವೃಶ್ಚಿಕ** ನಿಮ್ಮ ದೈಹಿಕ ಬಲವನ್ನು ನಿರ್ವಹಿಸಲು ನೀವು ಕ್ರೀಡೆಯಲ್ಲಿ ಸಮಯ ಕಳೆಯುವ ಸಾಧ್ಯತೆಗಳಿವೆ. ಇಂದು ಸಾಲಗಾರನು ನಿಮ್ಮ ಮನೆ ಬಾಗಿಲಿಗೆ ಬರಬಹುದು ಮತ್ತು ನಿಮ್ಮ ಹತ್ತಿರ ಸಾಲ ಕೇಳಬಹುದು.ಅವರಿಗೆ ಹಣವನ್ನು ಹಿಂದಿರುಗಿಸಿ ನೀವು ಆರ್ಥಿಕ ಬಿಕ್ಕಟ್ಟಿಗೆ ಸಿಲುಕಬಹುದು.

**ಧನಸ್ಸು** ಒಟ್ಟಾರೆ ಆರೋಗ್ಯ ಉತ್ತಮವಾಗಿದ್ದರೂ ಪ್ರಯಾಣ ಒತ್ತಡಮಯವೂ ಮತ್ತು ಕಷ್ಟಕರವೂ ಆಗಿರುತ್ತದೆ. ಇಂದು ನಿಮ್ಮ ತಂದೆ ತಾಯಿಯರಲ್ಲಿ ಯಾರಾದರೂ ಒಬ್ಬರು ಹಣವನ್ನು ಸಂಗ್ರಹಿಸುವ ಬಗ್ಗೆ ಉಪನ್ಯಾಸಗಳನ್ನು ನೀಡಬಹುದು, ನೀವು ಅವರ ಮಾತುಗಳನ್ನು ಬಹಳ ಗಮನವಾಗಿ ಕೇಳಬೇಕಾದ ಅಗತ್ಯವಿದೆ.


**ಮಕರ** ಆಧ್ಯಾತ್ಮಿಕ ಜೀವನದ ಪೂರ್ವಾಪೇಕ್ಷಿತವಾಗಿರುವಂತಹ ನಿಮ್ಮ ಮಾನಸಿಕ ಆರೋಗ್ಯವನ್ನು ಕಾಯ್ದುಕೊಳ್ಳಿ. ಒಳ್ಳೆಯದೂ ಹಾಗೂ ಕೆಟ್ಟದೆಲ್ಲವೂ ಮನಸ್ಸಿನ ಮೂಲಕವೇ ಬರುವುದರಿಂದ ಬುದ್ಧಿ ಜೀವನದ ಹೆಬ್ಬಾಗಿಲಾಗಿದೆ. ಇದು ಜೀವನದ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಸಹಾಯ ಮಾಡುತ್ತದೆ

**ಕುಂಭ** ದೈಹಿಕ ಲಾಭಕ್ಕಾಗಿ ವಿಶೇಷವಾಗಿ ಮಾನಸಿಕ ದೃಢತೆಗಾಗಿ ಧ್ಯಾನ ಮತ್ತು ಯೋಗ ಪ್ರಾರಂಭಿಸಿ. ನಕ್ಷತ್ರಪುಂಜಗಳ ಚಾಲನೆ ನಿಮಗಾಗಿ ಉತ್ತಮವಾಗಿಲ್ಲ. ಇಂದಿನ ದಿನ ನೀವು ನಿಮ್ಮ ಹಣವನ್ನು ತುಂಬಾ ಸುರಕ್ಷಿತವಾಗಿಡಬೇಕು. ನಿಮ್ಮ ನಿರೀಕ್ಷೆಗಳಿಗೆ ತಕ್ಕಂತೆ ಬದುಕಲು ನಿಮ್ಮ ಮಗುವನ್ನು ಪ್ರೇರೇಪಿಸಿ.

**ಮೀನ** ನಿಮ್ಮ ಬಗ್ಗೆ ನಿಮಗೇ ಉತ್ತಮ ಅಭಿಪ್ರಾಯ ಬರಲು ಕೆಲಸಗಳನ್ನು ಮಾಡಲು ಒಂದು ಅದ್ಭುತ ದಿನ. ನಿಮ್ಮ ಜೀವನ ಸಂಗಾತಿಯೊಂದಿಗೆ ಸೇರಿ ಇಂದು ನೀವು ಭವಿಷ್ಯಕ್ಕೆ ಯಾವುದೇ ಆರ್ಥಿಕ ಯೋಜನೆಯನ್ನು ಮಾಡಬಹುದು ಮತ್ತು ಈ ಯೋಜನೆ ಯಶಸ್ವಿಯಾಗಲಿದೆ ಎಂದು ಭರವಸೆ ಇದೆ.

# ಪರಿಹಾರ ಹಂಚಿಕೆಗೆ ಪಟ್ಟಿ ಸಿದ್ಧಪಡಿಸಿ

• ಉದಯವಾಹಿನಿ, ಬಾಗಲಕೋಟೆ


ಉದಯವಾಹಿನಿ ಚಿತ್ರ

ಕೃಷ್ಣಾ ಮೇಲ್ದಂಡೆ ಯೋಜನೆಯ ಮೂರನೇ ಹಂತದಲ್ಲಿ ಮುಳುಗಡೆಯಾಗುವ ಭೂಮಿಗೆ ಪರಿಹಾರ ವಿತರಿಸಲು ಪಟ್ಟಿ ಸಿದ್ಧಪಡಿಸಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪುರ ಅಧಿಕಾರಿಗಳಿಗೆ ಸೂಚಿಸಿದರು. ನಗರದಲ್ಲಿ ನಡೆದ ಯುಕೆಪಿ ಮುಳುಗಡೆ ಭೂಮಿಗೆ ಪರಿಹಾರ ವಿತರಿಸುವ ಕುರಿತಂತೆ ನಡೆದ ಸಭೆಯಲ್ಲಿ ಮಾತನಾಡಿದ ಅವರು, 'ಪರಿಹಾರ ವಿತರಣೆಗೆ ಪಟ್ಟಿ ಮಾಡುವಂತೆ ಫೆಬ್ರುವರಿ ತಿಂಗಳಲ್ಲಿ ಸೂಚಿಸಲಾಗಿತ್ತು. ಇನ್ನೂ ಮಾಡಿಲ್ಲ. ನೀವು ಪಟ್ಟಿ ಮಾಡದಿದ್ದರೆ, ಸರ್ಕಾರದಿಂದ ಹಣ ಬಿಡುಗಡೆ ಆಗುವುದಿಲ್ಲ. ಕೂಡಲೇ ಪಟ್ಟಿ ಸಿದ್ಧಪಡಿಸಿ' ಎಂದು ಹೇಳಿದರು.184 ಗ್ರಾಮಗಳ ಜಮೀನುಗಳು ಮುಳುಗಡೆಯಾಗುತ್ತಿವೆ. ಅವುಗಳಿಗೆ ಪರಿಹಾರ ಹಂಚಿಕೆಯನ್ನು ಯಾವ ಆಧಾರದ ಮೇಲೆ ಆದ್ಯತೆ ನೀಡುತ್ತಿದ್ದೀರಿ. ಹಂಚಿಕೆಗೆ ಯಾವ ಮಾನದಂಡ ಅನುಸರಿಸುತ್ತಿದ್ದೀರಿ. ಗೊಂದಲ ಸೃಷ್ಟಿ ಮಾಡಿದರೆ ಹಣ ಬಿಡುಗಡೆ ಮಾಡಿದರೂ ಸರ್ಕಾರಕ್ಕೆ ಕೆಟ್ಟು ಹೆಸರು ಬರುತ್ತದೆ. ಹಾಗೆ ಆಗದಂತೆ ಕ್ರಮಕೈಗೊಳ್ಳಬೇಕು' ಎಂದು ಹೇಳಿದರು.ಜಿಲ್ಲೆಯ ಎಲ್ಲಾ ಪುನರ್ವಸತಿ ಕೇಂದ್ರಗಳಲ್ಲಿ ಸ್ಮಶಾನಕ್ಕೆ ಜಾಗ ನೀಡಬೇಕು. ಶೇ 50ಕ್ಕೂ ಹೆಚ್ಚು ಜನರು ಸ್ಥಳಾಂತರವಾದರೆ, ಆ ಗ್ರಾಮಗಳಿಗೆ ಮೂಲಸೌಲಭ್ಯಗಳನ್ನು ಕಲ್ಪಿಸಲಾಗುವುದು. ಮುಳುಗಡೆ ಪರಿಹಾರ ತೆಗೆದುಕೊಂಡು 20 ವರ್ಷಗಳಾದರೂ ಕೆಲವು ಗ್ರಾಮಗಳಲ್ಲಿ ಜನರು ಸ್ಥಳಾಂತರಗೊಂಡಿಲ್ಲ. ಸ್ಥಳಾಂತರಕ್ಕೆ ಕ್ರಮಕೈಗೊಳ್ಳಬೇಕು. ಹಿನ್ನೀರಿನಲ್ಲಿ ನಡುಗಡ್ಡೆಗಳಾಗುವ ಪ್ರದೇಶದ ವರದಿ ನೀಡಬೇಕು' ಎಂದು ಸೂಚಿಸಿದರು.ಶಾಸಕ ಜೆ.ಟಿ. ಪಾಟೀಲ ಮಾತನಾಡಿ, 'ಆಸ್ತಿಯಲ್ಲಿ ಯಾವುದೇ ಡಿಪ್ರಿಸಿಯೇಷನ್ ಮಾಡಬಾರದು. ಆಸ್ತಿ ಮೌಲ್ಯಕ್ಕೆ ಹೆಚ್ಚುವರಿಯಾಗಿ ಶೇ20ರಷ್ಟು ನೀಡಬೇಕು. ಮುಂದಿನ ವರ್ಷಗಳಲ್ಲಿ ಪರಿಹಾರ ನೀಡುವವರಿಗೆ ಶೇ 10ರಷ್ಟು ಹೆಚ್ಚುವರಿಯಾಗಿ ನೀಡಬೇಕು. ಆಗ ರೈತರು ಸಮಾಧಾನದಿಂದ ಇರುತ್ತಾರೆ' ಎಂದರು.ಸಚಿವ ಆರ್.ಬಿ. ತಿಮ್ಮಾಪುರ ಮಾತನಾಡಿ, 'ಪ್ರತಿ ವರ್ಷ ಹೆಚ್ಚುವರಿಯಾಗಿ ಶೇ10ರಷ್ಟು ಪರಿಹಾರ ನೀಡುವ ಕುರಿತು ಪ್ರಸ್ತಾವ ಸಲ್ಲಿಸಿರಿ' ಎಂದು ಅಧಿಕಾರಿಗಳಿಗೆ ಸೂಚಿಸಿದರು. ಮುಳುಗಡೆ ಸಂತ್ರಸ್ತರ ಹೋರಾಟ ಸಮಿತಿ ಅಧ್ಯಕ್ಷ ಅದೃಶ್ಯಪ್ಪ ದೇಸಾಯಿ ಮಾತನಾಡಿ, ವೈಜ್ಞಾನಿಕವಾಗಿ ಪಟ್ಟಿ ಮಾಡಿ ಹಂಚಿಕೆ ಮಾಡಬೇಕು. ಹಲವು ಪುನರ್ವಸತಿ ಕೇಂದ್ರಗಳಲ್ಲಿ ಸ್ಮಶಾನಗಳಿಲ್ಲ. ಸ್ಮಶಾನಕ್ಕೆ ಜಾಗ ನೀಡಬೇಕು' ಎಂದು ಮನವ ಮಾಡಿದರು.ಶಾಸಕ ಜಗದೀಶ ಗುಡಗುಂಟಿ ಮಾತನಾಡಿ, 'ಕೆಲವು ಗ್ರಾಮಗಳನ್ನು ಬೇರೆ ಪಂಚಾಯಿತಿಗಳಿಗೆ ಸೇರಿಸಿ. ಅಲ್ಲಿನ ಭೂಮಿ ಉತಾರದಲ್ಲಿ ಪಂಚಾಯಿತಿಯ ಹೆಸರೇ ಬರುತ್ತಿದೆ. ಅವರ ಮೂಲ ಗ್ರಾಮದ ಹೆಸರೇ ಉಳಿಸಬೇಕು' ಎಂದರು. ಇದಕ್ಕೆ ಶಾಸಕ ಜೆ.ಟಿ. ಪಾಟೀಲ ಸಹ ಧ್ವನಿಗೂಡಿಸಿದರು.

### ಅಭಿವೃದ್ಧಿಗೆ ಪ್ರಸ್ತಾವ ಸಲ್ಲಿಸಿ

ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಪ್ರಸ್ತಾವಗಳನ್ನು ಬಾಕಿ ಉಳಿಸಿಕೊಳ್ಳದೇ, ಶೀಘ್ರ ವಿಲೇವಾರಿ ಮಾಡಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ಅಧಿಕಾರಿಗಳಿಗೆ ಸೂಚಿಸಿದರು. ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಶನಿವಾರ ನಡೆದ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಸಭೆಯಲ್ಲಿ ಪ್ರಗತಿ ಪರಿಶೀಲನೆ ನಡೆಸಿ, ಮಾತನಾಡಿದರು.

## ಕಪ್ಪೆಚಿಪ್ಪು ತೆಗೆಯಲು ಹೋದ ಕುಟುಂಬದ ಜಲಸಮಾಧಿ

• ಉದಯವಾಹಿನಿ, ಕಾರವಾರ:

ಉತ್ತರ ಕನ್ನಡ ಜಿಲ್ಲೆಯ ಭಟ್ಕಳದ ತಟ್ಟೆ ಹಕ್ಕಲು ನದಿಯಲ್ಲಿ ಕಪ್ಪೆಚಿಪ್ಪು ತೆಗೆಯಲು ಹೋಗಿದ್ದ ಒಂದೇ ಕುಟುಂಬದ 8 ಮಂದಿ ಜಲಸಮಾಧಿಯಾಗಿರುವ ಘಟನೆ ನಡೆದಿದೆ.ಕಪ್ಪೆಚಿಪ್ಪು ತೆಗೆಯಲು ಹೋಗಿದ್ದ ಎಲ್ಲರೂ ಭಟ್ಕಳದ ಶಿರಾಲಿ ಮೂಲದವರು ಎಂದು ತಿಳಿದುಬಂದಿದೆ. ಒಟ್ಟು 11 ಮಂದಿ ಕಪ್ಪೆಚಿಪ್ಪು ತೆಗೆಲು ಹೋಗಿದ್ದರು. ಈ ಪೈಕಿ ಒಂದೇ ಕುಟುಂಬದ 8 ಮಂದಿ ಸಾವನ್ನಪ್ಪಿದ್ದಾರೆ. ಕೆಲವರನ್ನ ರಕ್ಷಣೆ ಮಾಡಲಾಗಿದ್ದು, ಭಟ್ಕಳ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗುತ್ತಿದೆ.

## ಪ್ರತಿಭಟನೆ ಬಂದ್‌ಗೆ ಉತ್ತಮ ಸ್ಪಂದನೆ

• ಉದಯವಾಹಿನಿ, ಸಂಕೇಶ್ವರ

ಹುಕ್ಕೇರಿ ತಾಲ್ಲೂಕಿನಲ್ಲಿ ಸಮಗ್ರ ನೀರಾವರಿ ಯೋಜನೆಯನ್ನು ಅನುಷ್ಠಾನಗೊಳಿಸಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಹಮ್ಮಿಕೊಂಡಿರುವ ಪ್ರತಿಭಟನೆ ಹಿನ್ನೆಲೆ 'ಸಂಕೇಶ್ವರ ಬಂದ್' ಕರೆಗೆ ಉತ್ತಮ ಸ್ಪಂದನೆ ದೊರೆಯಿತು. ನೀರಾವರಿ ಸೌಲಭ್ಯಕ್ಕಾಗಿ ರೈತರು ನಡೆಸುತ್ತಿರುವ ಹೋರಾಟಕ್ಕೆ ಇಲ್ಲಿನ ವರ್ತಕರು ಸಹಮತ ಸೂಚಿಸಿ, ಶನಿವಾರ ಬೆಳಿಗ್ಗೆಯಿಂದಲೇ ಪಟ್ಟಣದ ಅಂಗಡಿ–ಮುಂಗಟ್ಟು ಹಾಗೂ ಉದ್ಯಮಗಳನ್ನು ಸ್ವಯಂಪ್ರೇರಿತರಾಗಿ ಮುಚ್ಚುವ ಮೂಲಕ ವ್ಯಾಪಾರಸ್ಥರು ರೈತರಿಗೆ ಸಾಥ್ ನೀಡಿದರು. ಪರಿಣಾಮವಾಗಿ ಇಡೀ ದಿನ ವಾಣಿಜ್ಯ ಚಟುವಟಿಕೆಗಳು ಸಂಪೂರ್ಣವಾಗಿ ಸ್ತಬ್ಧಗೊಂಡವು. ಸಾರ್ವಜನಿಕರ ಹಿತದೃಷ್ಟಿಯಿಂದ ಮೆಡಿಕಲ್, ಹಾಲಿನ ಅಂಗಡಿ ಹಾಗೂ ಬೇಕರಿಗಳಂತಹ ಅಗತ್ಯ ಸೇವೆಗಳ ವಹಿವಾಟಿಗೆ ಯಾವುದೇ ಅಡ್ಡಿಯಿರಲಿಲ್ಲ. ಇವುಗಳನ್ನು ಹೊರತುಪಡಿಸಿ ಉಳಿದೆಲ್ಲಾ ವ್ಯಾಪಾರ– ವಹಿವಾಟುಗಳು ಬಂದ್ ಆಗಿದ್ದವು. ಸಾರ್ವಜನಿಕರು ಹಾಗೂ ವ್ಯಾಪಾರಸ್ಥರ ಸಕಾರಾತ್ಮಕ ಸಹಕಾರದಿಂದಾಗಿ ಇಡೀ ಬಂದ್ ಶಾಂತಿಯುತವಾಗಿ ಮುಕ್ತಾಯಗೊಂಡಿತು.

# ಕಲ್ಯಾಣ ಮಂಟಪ ತೆರೆದು ಭಕ್ತರಿಗೆ ವಸತಿ


ಉದಯವಾಹಿನಿ ಚಿತ್ರ

• ಉದಯವಾಹಿನಿ, ರಾಯಚೂರು:

ಜಿಲ್ಲೆಯಾದ್ಯಂತ ಶನಿವಾರ ತಡರಾತ್ರಿ ಗುಡುಗು, ಮಿಂಚು ಹಾಗೂ ಬಿರುಗಾಳಿ ಸಹಿತ ಭಾರೀ ಮಳೆಯಾಗಿದೆ. ರಾತ್ರಿಯಿಡಿ ಸುರಿದ ಧಾರಾಕಾರ ಮಳೆಗೆ ಜಿಲ್ಲೆಯ ಹಲವು ಭಾಗಗಳು ತತ್ತರಿಸಿದ್ದು, ಸಿಡಿಲು ಬಡಿದು ತೆಂಗಿನಮರ ಭಸ್ಮವಾಗಿರುವ ಘಟನೆ ಹಾಗೂ ಮಂತ್ರಾಲಯದಲ್ಲಿ ಭಕ್ತರು ಮಳೆಯಿಂದಾಗಿ ಸಂಕಷ್ಟಕ್ಕೆ ಸಿಲುಕಿದ ಪ್ರಸಂಗಗಳು ವರದಿಯಾಗಿವೆ.ಜಿಲ್ಲೆಯ ಅರಕೇರಾ ತಾಲೂಕಿನ ಮುಕ್ಕಲಗುಡ್ಡ ತಾಂಡಾದಲ್ಲಿ ರಾತ್ರಿ ವೇಳೆ ಭೀಕರ ಸಿಡಿಲು ಬಡಿದಿದೆ. ತಾಂಡಾದ ನಿವಾಸಿ ಮನೋಹರ್ ನಾಯ್ಕ್ ಎಂಬುವರ ಮನೆ ಮುಂದೆ ಇದ್ದ ತೆಂಗಿನಮರಕ್ಕೆ ಏಕಾಏಕಿ ಸಿಡಿಲು ಬಡಿದ ಪರಿಣಾಮ, ಮರದಲ್ಲಿದ್ದ ತೆಂಗಿನಕಾಯಿಗಳು ಹಾಗೂ ಮರದ ಗರಿಗಳು ಸಂಪೂರ್ಣವಾಗಿ ಸುಟ್ಟು ಕರಕಲಾಗಿವೆ.

ಸಿಡಿಲು ಬಡಿದ ರಭಸಕ್ಕೆ ಮರ ಹೊತ್ತಿ ಉರಿದಿದ್ದು, ಗ್ರಾಮಸ್ಥರಲ್ಲಿ ಆತಂಕ ಮೂಡಿಸಿತ್ತು. ಇದು ದಟ್ಟವಾದ ಜನವಸತಿ ಪ್ರದೇಶವಾಗಿದ್ದರೂ ಸಹ, ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸದೆ ಇಡೀ ತಾಂಡಾ ದೊಡ್ಡ ಅನಾಹುತದಿಂದ ಪಾರಾಗಿದೆ. ಜಾಗದ ಅಭಾವದಿಂದಾಗಿ ಶ್ರೀ ಗುರು ರಾಘವೇಂದ್ರ ಸ್ವಾಮಿ ಮಠದ ಹೊರಪ್ರಾಂಗಣದಲ್ಲಿ ನೂರಾರು ಭಕ್ತರು ಮಲಗಿದ್ದರು.

ತಡರಾತ್ರಿ ಏಕಾಏಕಿ ಮಳೆ ಆರಂಭವಾದ ಪರಿಣಾಮ, ಮಲಗಿದ್ದ ಭಕ್ತರು ದಿಕ್ಕಾಪಾಲಾಗಿ ಓಡುವಂತಾಯಿತು. ಮಳೆಯಲ್ಲಿ ಸಂಪೂರ್ಣವಾಗಿ ನೆನೆದು ಕಂಗಾಲಾಗಿದ್ದ ಭಕ್ತರು, ಸಣ್ಣ ಮಕ್ಕಳು ಹಾಗೂ ವೃದ್ಧರೊಂದಿಗೆ ತೀವ್ರ ಪರದಾಟ ನಡೆಸಿದರು.

ಹೊರಪ್ರಾಂಗಣದಲ್ಲಿ ಭಕ್ತರು ಮಳೆಯಿಂದಾಗಿ ಸಂಕಷ್ಟಕ್ಕೆ ಸಿಲುಕಿರುವ ಮಾಹಿತಿ ತಿಳಿಯುತ್ತಿದ್ದಂತೆಯೇ ಮಂತ್ರಾಲಯ ಮಠದ ಪೀಠಾಧಿಪತಿಗಳಾದ ಶ್ರೀ ಸುಬುಧೇಂದ್ರ ತೀರ್ಥರು ತಡರಾತ್ರಿಯೇ ಸ್ವತಃ ಸ್ಥಳಕ್ಕೆ ಭೇಟಿ ನೀಡಿದರು. ಮಳೆಯಲ್ಲಿ ನೆನೆಯುತ್ತಿದ್ದ ಭಕ್ತರ ಕಷ್ಟಕ್ಕೆ ತಕ್ಷಣವೇ ಸ್ಪಂದಿಸಿದ ಶ್ರೀಗಳು, ಮಠದ ಕಲ್ಯಾಣ ಮಂಟಪಗಳ ಬಾಗಿಲುಗಳನ್ನು ತೆರೆಯಿಸಿ ಎಲ್ಲರಿಗೂ ವಸತಿ ವ್ಯವಸ್ಥೆ ಕಲ್ಪಿಸಿದ್ದಾರೆ.

## ನೀಟ್ ಬರೆದಿದ್ದ ವಿದ್ಯಾರ್ಥಿನಿ

• ಉದಯವಾಹಿನಿ, ಕಲಬುರಗಿ:

ದ್ವಿತೀಯ ಪಿಯುಸಿ ಫಲಿತಾಂಶ ಬಂದಾಗ ವಿದ್ಯಾರ್ಥಿನಿ ಭಾಗ್ಯ ಶ್ರೀ ತನಗೆ 92% ರಷ್ಟು ಅಂಕಗಳನ್ನು ಪಡೆದು ಪಾಸ್ ಆಗಿರುವುದಾಗಿ ಹೆತ್ತವರ ಬಳಿ ಹೇಳಿಕೊಂಡಿದ್ದಳು. ಮಗಳ ಮಾತನ್ನು ನಂಬಿದ್ದ ಪೋಷಕರು, ಆಕೆ ವೈದ್ಯಕೀಯ ಶಿಕ್ಷಣದ ಕನಸು ಹೊತ್ತು ನೀಟ್ ಪರೀಕ್ಷೆ ಬರೆಯಲು ಸಂಪೂರ್ಣ ಬೆಂಬಲ ನೀಡಿದ್ದರು. ಇತ್ತೀಚೆಗಷ್ಟೇ ಭಾಗ್ಯ ಶ್ರೀ ನೀಟ್ ಪರೀಕ್ಷೆಯನ್ನೂ ಬರೆದಿದ್ದಳು.ಈಗ ಲಭ್ಯವಾಗಿರುವ ಮಾರ್ಕ್ಸ್‌ಕಾರ್ಡ್ ಪ್ರಕಾರ ಭಾಗ್ಯ ಶ್ರೀ ದ್ವಿತೀಯ ಪಿಯುಸಿಯ ಗಣಿತ ಮತ್ತು ಭೌತಶಾಸ್ತ್ರ ಪರೀಕ್ಷೆಯಲ್ಲಿ ಫೇಲ್ ಆಗಿದ್ದಳು. ಬಳಿಕ ಅವಳು ಭೌತಶಾಸ್ತ್ರ ಮತ್ತು ಗಣಿತ ಮರು ಪರೀಕ್ಷೆ ಬರೆದಿದ್ದಳು. ಭೌತಶಾಸ್ತ್ರದಲ್ಲಿ 51 ಅಂಕ ಪಡೆದು ತೇರ್ಗಡೆಯಾಗಿದ್ದರೆ ಗಣಿತದಲ್ಲಿ 24 ಅಂಕ ಪಡೆದು ಅನುತ್ತೀರ್ಣಗೊಂಡಿದ್ದಳು. ಕಾಲೇಜಿನಿಂದ ನೀಡಲಾಗುವ 20 ಇಂಟರ್ನಲ್ ಅಂಕಗಳನ್ನು ಸೇರಿಸಿಯೂ ಆಕೆ ಗಣಿತದಲ್ಲಿ ಕೇವಲ 24 ಅಂಕ ಪಡೆದಿದ್ದಳು.ದ್ವಿತೀಯ ಪಿಯುಸಿಯ ಪರೀಕ್ಷೆ–2 ರಫಲಿತಾಂಶ ಮೇ 21 ರಂದು ಪ್ರಕಟವಾಗಿತ್ತು. ಪಿಯುಸಿ ಫಲಿತಾಂಶದಲ್ಲಿ ತಾನು ಫೇಲ್ ಆಗಿರುವ ವಿಷಯ ಮನೆಯವರಿಗೆ ಗೊತ್ತಾದರೆ ಎಲ್ಲಿ ಬೈಯುತ್ತಾರೋ ಅಥವಾ ತಮ್ಮ ನಿರೀಕ್ಷೆ ಸುಳ್ಳಾಯಿತಲ್ಲ ಎಂಬ ತೀವ್ರ ಮನಸ್ತಾಪ ಹಾಗೂ ಭಯದಿಂದಲೇ ವಿದ್ಯಾರ್ಥಿನಿ ಆತ್ಮಹತ್ಯೆಯ ಹಾದಿ ಹಿಡಿದಿರಬಹುದು ಎಂಬ ಬಲವಾದ ಶಂಕೆ ವ್ಯಕ್ತವಾಗಿದೆ

## ಕಾಮಗಾರಿಗಳಿಗೆ ಶಾಸಕ ಯತ್ನಾಳ ಭೂಮಿಪೂಜೆ

• ಉದಯವಾಹಿನಿ, ವಿಜಯಪುರ:


ಉದಯವಾಹಿನಿ ಚಿತ್ರ

ನಗರದಲ್ಲಿ ಧಾರ್ಮಿಕ ದತ್ತಿ ಇಲಾಖೆ, ಮಾನ್ಯ ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆ ಯಡಿಯಲ್ಲಿ ರೂ.95 ಅನುದಾನದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಬಸನಗೌಡ ಪಾಟೀಲ ಯತ್ನಾಳ ರವರು ಶುಕ್ರವಾರ ಭೂಮಿಪೂಜೆ ನೆರವೇರಿಸಿದರು.

ಜಯಪುರ ನಗರದ ವಾರ್ಡ್ ನಂ.2 ರಲ್ಲಿ ಬರುವ ಶಿವಬಸಪ್ಪ ಗದ್ದುಗೆ ದೇವಸ್ಥಾನದ ಹತ್ತಿರ ಧಾರ್ಮಿಕ ದತ್ತಿ ಇಲಾಖೆಯಿಂದ ಮಂಜೂರಿಸಲಾದ ರೂ.10 ಲಕ್ಷ ಮೊತ್ತದಲ್ಲಿ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ, ವೀರಭದ್ರೇಶ್ವರ ದೇವಸ್ಥಾನದ ಹತ್ತಿರ ಧಾರ್ಮಿಕ ದತ್ತಿ ಇಲಾಖೆಯಿಂದ ಮಂಜೂರಿಸಲಾದ ರೂ.15 ಲಕ್ಷ ಮೊತ್ತದಲ್ಲಿ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಹಾಗೂ ದರ್ಗಾದ ಕರಿಸಿದ್ದೇಶ್ವರ ದೇವಸ್ಥಾನ ಹತ್ತಿರ ಸನ್ 2025–26ನೇ ಸಾಲಿನ ಮಾನ್ಯ ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ ಮತ್ತು ಧಾರ್ಮಿಕ ದತ್ತಿ ಇಲಾಖೆಯಿಂದ ಮಂಜೂರಿಸಲಾದ ರೂ.70 ಲಕ್ಷ ಅನುದಾನದಲ್ಲಿ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು. ಪ್ರತಿ ಭೂಮಿಪೂಜೆ ಬಳಿಕೆ ಸಾರ್ವಜನಿಕರ ಅಹವಾಲು ಆಲಿಸಿದರು.

## ಸಮಾವೇಶ; ಅಸಮಾನತೆ ಜೀವಂತವಿಡುವ ಹುನ್ನಾರ

• ಉದಯವಾಹಿನಿ ಗದಗ:

ನಗರದಲ್ಲಿ ಮೇ 31ರಂದು ನಡೆಯಲಿರುವ ಹಿಂದೂ ಸಮಾವೇಶಕ್ಕೆ ವಿರೋಧ ವ್ಯಕ್ತಪಡಿಸಿ ಸಿಪಿಐಎಂ ಕಾರ್ಯಕರ್ತರು ಶನಿವಾರ ನಗರದ ಗಾಂಧಿ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು. ಸಿಪಿಐಎಂನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಯು. ಬಸವರಾಜ ಮಾತನಾಡಿ, 'ಮನುವಾದಿಗಳು ಮೂಲದಲ್ಲೇ ಅಸಮಾನತೆ, ಜಾತಿ ಅಸ್ಪೃಶ್ಯತೆಯಿಂದ ಕೂಡಿದ ಸಮಾಜವನ್ನು ಕಟ್ಟಿ, ಅದನ್ನು ಪೋಷಿಸಿದರು. ಆ ಸನಾತನವಾದಿಗಳೇ ಇಂದು ಬಿಜೆಪಿ ಮತ್ತು ಸಂಘ ಪರಿವಾರದ ಹೆಸರಿನಲ್ಲಿ ಜಾತಿ, ಅಸ್ಪೃಶ್ಯತೆಯನ್ನು ಜೀವಂತವಾಗಿಡಲು ಪ್ರಯತ್ನಿಸುತ್ತಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು. 'ಅದರ ಮುಂದುವರಿದ ಭಾಗವಾಗಿ ಲಿಂಗಾಯತ ಸಮುದಾಯಕ್ಕೆ ಸೇರಿದ ಕನೇರಿಯ ಕಾಡು ಸಿದ್ದೇಶ್ವರ ಸ್ವಾಮೀಜಿಯನ್ನು ಮುಂದಿಟ್ಟುಕೊಂಡು ಶರಣರ ಹೆಸರಿನಲ್ಲಿ ಹಿಂದೂ ಸಮಾವೇಶ ನಡೆಸುತ್ತಿದ್ದಾರೆ. ಸಮಾನತೆ ಮತ್ತು ವಚನ ಚಳವಳಿಯಲ್ಲಿ ನಂಬಿಕೆ ಇಟ್ಟಂತಹ ಗದುಗಿನ ಜನರು ಈ ಸಮಾವೇಶಕ್ಕೆ ಯಾವುದೇ ರೀತಿಯ ಬೆಂಬಲ ನೀಡಬಾರದು' ಎಂದು ಮನವಿ ಮಾಡಿದರು. ಪಕ್ಷದ ಜಿಲ್ಲಾ ಸಮಿತಿ ಸದಸ್ಯ ಎಂ.ಎಸ್.ಹಡಪದ ಮಾತನಾಡಿ, 'ಬೆಲೆ ಏರಿಕೆ, ನಿರುದ್ಯೋಗ, ಹಣದುಬ್ಬರದಿಂದಾಗಿ ಜನಸಾಮಾನ್ಯರು ತೀವ್ರ ಸಂಕಷ್ಟಗಳಿಗೆ ಸಿಲುಕಿದ್ದಾರೆ. ಇದರ ವಿರುದ್ಧ ಜನ ಎಚ್ಚೆತ್ತುಕೊಂಡು ಕೇಂದ್ರ ಸರ್ಕಾರದ ನೀತಿ ವಿರುದ್ಧ ಪ್ರತಿಭಟನೆ ಪ್ರಾರಂಭಿಸಿದ್ದಾರೆ. ಪ್ರತಿಭಟನೆಯ ಜ್ವಾಲೆಯನ್ನು ಹತ್ತಿಕ್ಕಲು ಬಂಡವಾಳಶಾಹಿ ವ್ಯವಸ್ಥೆ ಕೋಮುವಾದಿ ಶಕ್ತಿಗಳ ಜತೆಗೆ ಕೈಜೋಡಿಸಿ ಧರ್ಮದ ಹೆಸರಿನಲ್ಲಿ ವಿಭಜನಕಾರಿ ನೀತಿಗಳನ್ನು ಮುನ್ನಲೆಗೆ ತಂದು ಧ್ವನಿ ಎತ್ತದಂತೆ ಮಾಡುವ ಸಲುವಾಗಿ ಇಂಥ ಕಾರ್ಯಕ್ರಮಗಳನ್ನು ದೇಶದಲ್ಲೆಡೆ ನಡೆಸುತ್ತಿದೆ' ಎಂದು ಆರೋಪಿಸಿದರು. 'ದೇಶದ ಜನತೆ ಕೇಂದ್ರ ಸರ್ಕಾರದ ಬೆಲೆ ಏರಿಕೆ ನೀತಿ ಹಾಗೂ ಬಂಡವಾಳಶಾಹಿ ಶಕ್ತಿಗಳ ಪರವಾದ ಮತ್ತು ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಹೋರಾಡಲು ಮುಂದಾಗಬೇಕು' ಎಂದು ಹೇಳಿದರು. ಜಿಲ್ಲಾ ಸಮಿತಿ ಸದಸ್ಯರಾದ ಪೀರೂ ರಾಠೋಡ, ಮೈಬು ಹವಾಲ್ದಾರ, ಬಸವರಾಜ ಮಂತೂರ, ಪಕ್ಷದ ಸದಸ್ಯರಾದ ಚಂದ್ರು ರಾಠೋಡ, ಕನಕರಾಯ ಹಾದಿಮನಿ, ದೇವಪ್ಪ, ಗಣೇಶ ರಾಠೋಡ, ಮರಿಯಮ್ಮ ಮುಳುಗುಂದ, ಮಂಜವ್ವ, ಫಕೀರವ್ವ ಪೂಜಾರ, ಶಿವಕ್ಕ ಬೇವಿನಮರದ, ರೇಣುಕಾ ಚಲವಾದಿ, ಸರಸ್ವತಿ ಬಣಕಾರ, ನಾಗರತ್ನ ಇದ್ದರು.

# ಹಾವೇರಿಯಲ್ಲಿ ಐದು ದಿನದಲ್ಲಿ 9 ಸಾವಿರ ಕ್ವಿಂಟಲ್ ಸೋಯಾಬಿನ್ ಮಾರಾಟ

• ಉದಯವಾಹಿನಿ, ಹಾವೇರಿ:


ಉದಯವಾಹಿನಿ ಚಿತ್ರ

ಜಿಲ್ಲೆಯಾದ್ಯಂತ ಬಿತ್ತನೆ ಬೀಜ ವಿತರಣೆ ಪ್ರಕ್ರಿಯೆ ಶನಿವಾರವೂ ಮುಂದು ವರಿಯಿತು. ಹಾವೇರಿ ರೈತ ಸಂಪರ್ಕ ಕೇಂದ್ರದಲ್ಲಿ ಸೋಯಾಬಿನ್ ಬೀಜಗಳನ್ನು ಖರೀದಿಸಲು ರೈತರು ಮುಗಿಬಿದ್ದರು. ಡಿವೈಎಸ್ಪಿ ಹಾಗೂ ಇನ್‌ಸ್ಪೆಕ್ಟರ್ ಸಮ್ಮುಖ ದಲ್ಲಿ ಕೃಷಿ ಇಲಾಖೆಯ ಸಿಬ್ಬಂದಿ ಬೀಜ ವಿತರಿಸಿದರು.

ಜಿಲ್ಲೆಯ 19 ರೈತ ಸಂಪರ್ಕ ಕೇಂದ್ರಗಳ ಪೈಕಿ ಹಲವು ಕೇಂದ್ರಗಳಲ್ಲಿ ಮೇ 18ರಿಂದ ಬೀಜ ವಿತರಣೆ ಶುರು ಮಾಡಲಾಗಿದೆ. ಮೇ 22ರವರೆಗಿನ ಮಾಹಿತಿ ಪ್ರಕಾರ, ಜಿಲ್ಲೆಯಾದ್ಯಂತ 9,000 ಕ್ವಿಂಟಲ್ ಸೋಯಾಬೀನ್ ಬೀಜಗಳು ಮಾರಾಟವಾ ಗಿವೆ. 2025ರ ಜೂನ್‌ವರೆಗೆ ಕೇವಲ 7,000 ಕ್ವಿಂಟಲ್ ಸೋಯಾಬೀನ್ ಮಾರಾಟವಾಗಿತ್ತು.

ಹೀಗಾಗಿ, ಕೃಷಿ ಇಲಾಖೆಯ ಅಧಿಕಾರಿಗಳು ಈ ವರ್ಷವೂ ಅದೇ ಪ್ರಮಾಣದಲ್ಲಿ ಬೇಡಿಕೆ ಬರಬಹುದೆಂದು ಅಂದಾಜಿಸಿದ್ದರು. ಆದರೆ, ಬೀಜ ವಿತರಣೆ ಆರಂಭದಲ್ಲಿಯೇ ರೈತರು ಸೋಯಾಬೀನ್ ಬೀಜಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸುತ್ತಿದ್ದಾರೆ.

ಕರ್ಜಗಿ, ಸವಣೂರು, ತಡಸ, ಮೋಟೆಬೆನ್ನೂರು, ರಟ್ಟಿಹಳ್ಳಿ, ಬ್ಯಾಡಗಿ ಸೇರಿದಂತೆ ಹಲವು ರೈತ ಸಂಪರ್ಕ ಕೇಂದ್ರಗಳಲ್ಲಿಯೂ ಸೋಯಾಬೀನ್ ಬೀಜಗಳು ಹಾಗೂ ಶೇಂಗಾ ಬೀಜಗಳು ಹೆಚ್ಚಿನ ಪ್ರಮಾಣದಲ್ಲಿ ಮಾರಾಟವಾಗುತ್ತಿವೆ.

ಹವಾಮಾನ ವೈಪರೀತ್ಯ ಹಾಗೂ ಮಳೆಯ ವ್ಯತ್ಯಾಸದಿಂದಾಗಿ, ಈ ಬಾರಿ ಬಹುಪಾಲು ರೈತರು ಬೆಳೆಗಳಲ್ಲಿ ಪರಿವರ್ತನೆ ಮಾಡಿಕೊಳ್ಳುತ್ತಿದ್ದಾರೆ. ಜಿಲ್ಲೆಯಲ್ಲಿ ನಿಗದಿಗಿಂತ ಹೆಚ್ಚು ಸೋಯಾಬೀನ್ ಬೀಜಗಳು ಮಾರಾಟ ಆಗುತ್ತಿವೆ. ಪ್ರಸಕ್ತ ವರ್ಷ 7,000 ಕ್ವಿಂಟಲ್‌ನಿಂದ 8,000 ಕ್ವಿಂಟಲ್ ಬೀಜ ಮಾರಾಟ ಮಾಡುವ ಗುರಿ ಇತ್ತು. ಆದರೆ, ಜಿಲ್ಲೆಯಲ್ಲಿ ಬೀಜ ಮಾರಾಟ ಆರಂಭವಾದ ದಿನದಿಂದ ಕೇವಲ ಐದು ದಿನಕ್ಕೆ 9,000 ಕ್ವಿಂಟಲ್ ಬೀಜ ಮಾರಾಟ ಆಗಿರುವುದು ದಾಖಲೆಯಾಗಿದೆ' ಎಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ ತಿಳಿಸಿದರು.

ರೈತರ ಬೇಡಿಕೆ ತಕ್ಕಂತೆ, ಬೀಜಗಳನ್ನು ಹೆಚ್ಚೆಚ್ಚು ತರಿಸಲಾಗುತ್ತಿದೆ. ಜಿಲ್ಲೆಯ ರೈತರಿಗೆ ಅಗತ್ಯವಿರುವಷ್ಟು ಬೀಜ ನಮ್ಮಲ್ಲಿ ದಾಸ್ತಾನು ಮಾಡಲಾಗುತ್ತಿದೆ. ಮೇ 23ರಂದು ಸಹ ಹೆಚ್ಚು ಬೀಜ ಮಾರಾಟವಾಗಿದೆ. ಮೇ 24ರಂದು ಮತ್ತೆ 1,500 ಕ್ವಿಂಟಲ್ ಬೀಜ ಬರಲಿದೆ' ಎಂದರು.

## ಭದ್ರಾವತಿಯಲ್ಲಿ ಬಿಜೆಪಿ ಮುಖಂಡನ ವಿರುದ್ಧ ಅತ್ಯಾಚಾರ ಆರೋಪ ?

• ಉದಯವಾಹಿನಿ, ಶಿವಮೊಗ್ಗ:


ಉದಯವಾಹಿನಿ ಚಿತ್ರ

ಭದ್ರಾವತಿಯ ಬಿಜೆಪಿ ಯುವ ಮೋರ್ಚಾ ಮುಖಂಡ ಹಾಗೂ ವಕೀಲರೊಬ್ಬರ ವಿರುದ್ಧ ಅತ್ಯಾಚಾರ ಮತ್ತು ಬ್ಲ್ಯಾಕ್‌ಮೇಲ್ ಆರೋಪ ಕೇಳಿಬಂದಿದೆ.

ವಕೀಲ ಭರತ್ ಬಿ.ಎಸ್ ವಿರುದ್ಧ ಈ ಆರೋಪ ಕೇಳಿಬಂದಿದೆ. ಆರೋಪಿ 23 ವರ್ಷದ ಮಹಿಳೆಯ ಬಳಿ ಪತಿಯ ಸ್ನೇಹಿತನೆಂದು ಪರಿಚಯಿಸಿಕೊಂಡು, ಇನ್ಸಾಗ್ರಾಮ್‌ನಲ್ಲಿ ಪರಿಚಯ ಮಾಡಿಕೊಂಡಿದ್ದ. ಅಲ್ಲದೇ ದಿನಸಿ ಅಂಗಡಿಗೆ ಪದೇ ಪದೇ ಬರುತ್ತಿದ್ದ. ಅಲ್ಲಿಯೂ ಮೈ, ಕೈ ಮುಟ್ಟಿ ಮಹಿಳೆಗೆ ಕಿರುಕುಳ ನೀಡುತ್ತಿದ್ದ ಎಂದು ಆರೋಪಿಸಲಾಗಿದೆ.

ಕಳೆದ ಏ.11 ರಂದು ಸ್ನೇಹಿತ ಭರತ್ ಮನೆಗೆ ಬರುತ್ತಾನೆ ಹಣ ನೀಡು ಎಂದು ಸಂತ್ರಸ್ತೆಯ ಪತಿ ಹೇಳಿದ್ದ. ಪತಿ ಸೂಚನೆಯಂತೆ ಹಣ ನೀಡಲು ಮುಂದಾದಾಗ, ಒಂಟಿಯಾಗಿದ್ದ ಮಹಿಳೆ ಮೇಲೆ ಅತ್ಯಾಚಾರ ಎಸಗಿದ್ದ. ಯಾರಿಗಾದ್ರೂ ಹೇಳಿದ್ರೆ ಮಾನಹಾನಿ ಮಾಡುವುದಾಗಿ ಹೇಳಿ ಪ್ರಾಣ ಬೆದರಿಕೆ ಹಾಕಿದ್ದ. ಬಳಿಕ ಹಣದೊಂದಿಗೆ ಸ್ಥಳದಿಂದ ಪರಾರಿಯಾಗಿದ್ದ. ಏ.25 ರಂದು ಮತ್ತೆ ಅಂಗಡಿಗೆ ಬಂದು ಲೈಂಗಿಕ ಕಿರುಕುಳ ನೀಡಲು ಯತ್ನಿಸಿದ್ದ. ಮಹಿಳೆಯ ಪತಿ ಮೊಬೈಲ್ ನೋಡುವಾಗ ಇನ್‌ಸ್ಟಾಗ್ರಾಮ್ ಬ್ಲಾಕ್ ಆಗಿದ್ದನ್ನು ನೋಡಿ, ಪ್ರಶ್ನಿಸಿದಾಗ ಕಣ್ಣೀರು ಹಾಕುತ್ತಾ ಮಹಿಳೆ ಸತ್ಯ ಬಿಚ್ಚಿಟ್ಟಿದ್ದಳು.

ಪತ್ನಿಯ ಹೆಸರಿನಲ್ಲಿ ವಾಟ್ಸಾಪ್ ಚಾಟ್ ಮಾಡಿ ಆರೋಪಿಯ ಅಸಲಿ ಬುದ್ಧಿಯನ್ನು ಅವರು ಪತ್ತೆ ಮಾಡಿದ್ದರು. ಅತ್ಯಾಚಾರ ಎಸಗಿದ ಆರೋಪಿ ವಿರುದ್ಧ ದಂಪತಿ ಭದ್ರಾವತಿಯ ಪೇಪರ್ ಟೌನ್ ಪೊಲೀಸ್ ಠಾಣೆಯಲ್ಲಿ ಕೇಸ್ ದಾಖಲಿಸಿದ್ದಾರೆ. ದೂರ ದಾಖಲಾದ ಬೆನ್ನಲ್ಲೇ ಆರೋಪಿ ತಲೆಮರೆಸಿಕೊಂಡಿದ್ದು, ಆತನ ಪತ್ತೆಗಾಗಿ ಪೊಲೀಸರು ಬಲೆ ಬೀಸಿದ್ದಾರೆ.

## ಇಷ್ಟು ದೊಡ್ಡ ಅನಾಹುತ ಇದೇ ಮೊದಲು: ಮಂಕಾಳ ವೈದ್ಯ

• ಉದಯವಾಹಿನಿ, ಕಾರವಾರ:


ಉದಯವಾಹಿನಿ ಚಿತ್ರ

ಭಟ್ಕಳದಲ್ಲಿ ಇದೇ ಮೊದಲಬಾರಿಗೆ ಇಷ್ಟು ದೊಡ್ಡ ದುರಂತ ನಡೆದಿದೆ. ಕಪ್ಪೆಚಿಪ್ಪು ತೆಗೆಯಲು ಹೋದವರು ಹೊಂಡದ ಕಡೆ ಹೋಗಿದ್ದರಿಂದ ದುರ್ಘಟನೆ ಸಂಭವಿಸಿದೆ ಎಂದು ಸಚಿವ ಮಂಕಾಳ ಎಸ್ ವೈದ್ಯ ತಿಳಿಸಿದ್ದಾರೆ.ಭಟ್ಕಳದ ತಟ್ಟೆ ಹಕ್ಕಲು ನದಿಯಲ್ಲಿ ಕಪ್ಪೆಚಿಪ್ಪು ತೆಗೆಯಲು ಹೋಗಿ ಮೃತಪಟ್ಟವರ ಸಂಖ್ಯೆ ಈಗ 9ಕ್ಕೆ ಏರಿಕೆಯಾಗಿದೆ. ಈ ಬಗ್ಗೆ ಸಚಿವರು ?ಪಬ್ಲಿಕ್ ಟಿವಿ? ಜೊತೆಗೆ ಮಾತನಾಡಿದ್ದಾರೆ.

ಘಟನಾ ಸ್ಥಳಕ್ಕೆ ಭೇಟಿ ನೀಡುತ್ತಿದ್ದೇನೆ. 13 ಜನ ನದಿಗೆ ಇಳಿದಿದ್ದರು, ಅದರಲ್ಲಿ 8 ಮಂದಿ ಸಾವನ್ನಪ್ಪಿದ್ದಾರೆ, ಇಬ್ಬರ ಸ್ಥಿತಿ ಗಂಭೀರವಾಗಿದ್ದು ಮಣಿಪಾಲ್ ಆಸ್ಪತ್ರೆಗೆ ಶಿಫ್ಟ್ ಮಾಡಲಾಗಿದೆ. ಮೃತರೆಲ್ಲರು ಒಂದೇ ಕುಟುಂಬದವರಲ್ಲ, ಒಂದೇ ಕುಟುಂಬದ ಇಬ್ಬರು ಸಾವನ್ನಪ್ಪಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

ಹೊಂಡದ ಕಡೆಗೆ ಹೋಗಿದ್ದರಿಂದ ಈ ದುರ್ಘಟನೆ ಸಂಭವಿಸಿದೆ. ಇದೇ ಮೊದಲ ಬಾರಿಗೆ ಇಷ್ಟು ದೊಡ್ಡ ಅನಾಹುತ ಸಂಭವಿಸಿದೆ. ಸ್ಥಳಕ್ಕೆ ಡಿಸಿ, ಎಸ್‌ಪಿ ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದ್ದಾರೆ ಎಂದು ವಿವರಿಸಿದ್ದಾರೆ.ಇನ್ನೂ ಕಪ್ಪೆಚಿಪ್ಪು ತೆಗೆಯಲು ಹೋಗಿ ಸಾವನ್ನಪ್ಪಿದವರ ಸಂಖ್ಯೆ 9ಕ್ಕೆ ಏರಿಕೆಯಾಗಿದೆ. ಇನ್ನೂ ಇಬ್ಬರು ನಾಪತ್ತೆಯಾಗಿದ್ದು, ಅವರಿಗಾಗಿ ಶೋಧ ಕಾರ್ಯ ಮುಂದುವರಿಸಲಾಗಿದೆ. ಘಟನಾ ಸ್ಥಳಕ್ಕೆ ಮಾಜಿ ಶಾಸಕ ಸುನೀಲ್ ನಾಯ್ಕ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕೃಷ್ಣಮೂರ್ತಿ ಭೇಟಿ ನೀಡಿ ಮಾಹಿತಿ ಪಡೆದಿದ್ದಾರೆ.

## ತೈಲ ಬೆಲೆ ಹೆಚ್ಚಳ: ಸಾಗರ್ ಖಂಡ್ರೆ ಕಿಡಿ

• ಉದಯವಾಹಿನಿ ಬೀದರ್:

ಕೇಂದ್ರ ಸರ್ಕಾರವು ದೇಶದ ಸಾಮಾನ್ಯ ಜನತೆ, ರೈತರು ಮತ್ತು ಮಧ್ಯಮ ವರ್ಗದವರ ಪರಿಸ್ಥಿತಿಯನ್ನು ಅರಿಯದೆ ಸತತವಾಗಿ ಪೆಟ್ರೋಲ್ ಹಾಗೂ ಡೀಸೆಲ್ ದರವನ್ನು ಏರಿಕೆ ಮಾಡುತ್ತಿರುವುದು ಖಂಡನಾರ್ಹ ಎಂದು ಸಂಸದ ಸಾಗರ್ ಖಂಡ್ರೆ ಟೀಕಿಸಿದ್ದಾರೆ. ಕೇಂದ್ರ ಸರ್ಕಾರದ ಜನವಿರೋಧಿ ನೀತಿಗಳ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿರುವ ಅವರು, ಕೇಂದ್ರ ಸರ್ಕಾರವು ಕೇವಲ 10 ದಿನಗಳ ಅಂತರದಲ್ಲಿ ಬರೋಬ್ಬರಿ ಮೂರು ಬಾರಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಏರಿಕೆ ಮಾಡಿದೆ. ಈಗಾಗಲೇ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ತತ್ತರಿಸಿರುವ ಜನತೆಗೆ, ಈ ಇಂಧನ ದರ ಏರಿಕೆಯು ಗಾಯದ ಮೇಲೆ ಬರೆ ಎಳೆದಂತಾಗಿದೆ. ಡೀಸೆಲ್ ದರ ಏರಿಕೆಯಿಂದಾಗಿ ಕೃಷಿ ವೆಚ್ಚ ದುಪ್ಪಟ್ಟಾಗಲಿದ್ದು, ಮುಂಗಾರು ಹಂಗಾಮಿನ ಸಿದ್ಧತೆಯಲ್ಲಿರುವ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಲಿದ್ದಾರೆ. ಪೆಟ್ರೋಲ್–ಡೀಸೆಲ್ ದರ ಹೆಚ್ಚಳದಿಂದಾಗಿ ಸರಕು ಸಾಗಣೆ ವೆಚ್ಚ ಹೆಚ್ಚಳವಾಗಿ, ಮಾರುಕಟ್ಟೆಯಲ್ಲಿ ತರಕಾರಿ, ಧಾನ್ಯಗಳು ಸೇರಿದಂತೆ ನಿತ್ಯೋಪಯೋಗಿ ವಸ್ತುಗಳ ಬೆಲೆಗಳು ಮತ್ತಷ್ಟು ಗಗನಕ್ಕೇರಲಿವೆ ಎಂದು ಭಾನುವಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಕೇಂದ್ರ ಸರ್ಕಾರವು ಜನರಿಂದ ಕರ ವಸೂಲಿ ಮಾಡುವ ಏಕೈಕ ಉದ್ದೇಶದಿಂದ ಈ ರೀತಿ ಪದೇ ಪದೇ ದರ ಹೆಚ್ಚಿಸುತ್ತಿದೆ. ಕೇಂದ್ರ ಸರ್ಕಾರವು ತಕ್ಷಣವೇ ಎಚ್ಚೆತ್ತುಕೊಂಡು, ಹೆಚ್ಚಿಸಲಾಗಿರುವ ಪೆಟ್ರೋಲ್ ಮತ್ತು ಡೀಸೆಲ್ ದರವನ್ನು ಕೂಡಲೇ ಹಿಂಪಡೆಯಬೇಕು.

# ವಿದ್ಯಾರ್ಥಿಗಳ ಭವಿಷ್ಯದ ಜತೆ ಕೇಂದ್ರ ಚೆಲ್ಲಾಟ: ಕಾಂಗ್ರೆಸ್ ಪ್ರತಿಭಟನೆ


ಉದಯವಾಹಿನಿ ಚಿತ್ರ

• ಉದಯವಾಹಿನಿ ಕಾಪು :

ಎನ್‌ಡಿಎ ನೇತೃತ್ವದ ಕೇಂದ್ರ ಸರ್ಕಾರದ ಜನವಿರೋಧಿ ನೀತಿಗಳನ್ನು ಖಂಡಿಸಿ ಕಾಪು ವಿಧಾನಸಭಾ ಕ್ಷೇತ್ರ ಯುವ ಕಾಂಗ್ರೆಸ್ ಹಾಗೂ ಬ್ಲಾಕ್ ಯುವ ಕಾಂಗ್ರೆಸ್ ಸಮಿತಿ ವತಿಯಿಂದ ಶನಿವಾರ ಕಾಪು ಪೇಟೆಯಲ್ಲಿ ಬೃಹತ್ ಪ್ರತಿಭಟನೆ ಹಾಗೂ ರಸ್ತೆ ತಡೆ ನಡೆಸಲಾಯಿತು.

ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ಕೇಂದ್ರ ಸರ್ಕಾರ ಕಾರ್ಯ ನಿರ್ವಹಿಸುತ್ತಿದೆ. ಎಸ್ ಐಆರ್ ಮೂಲಕ ಬಡವರ ಮತ ಹಕ್ಕನ್ನು ಕಿತ್ತುಕೊಳ್ಳುವ ಪ್ರಯತ್ನ ನಡೆಯುತ್ತಿದೆ. ಈ ಬಗ್ಗೆ ಜನರು ಜಾಗೃತಿಗೊಳ್ಳಬೇಕಾದ ಅಗತ್ಯವಿದೆ. ಕೇಂದ್ರ ಸರ್ಕಾರ, ಬಿಜೆಪಿ ಹಾಗೂ ಚುನಾವಣಾ ಆಯೋಗ ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ನೇತೃತ್ವದ ಸರ್ಕಾರವನ್ನು ಅಧಿಕಾರದಿಂದ ಕೆಳಗಿಳಿಸುವ ಯತ್ನ ನಡೆಸಿತು ಎಂದು ವಾಗ್ದಾಳಿ ನಡೆಸಿದರು.ಕಾಂಗ್ರೆಸ್ ಮುಖಂಡ ಅಮೃತ್ ಶೆಣೈ ಮಾತನಾಡಿ, ಕೇಂದ್ರ ಸರ್ಕಾರದ ವೈಫಲ್ಯಗಳನ್ನು ಜನರಿಗೆ ತಿಳಿಸುವುದು ಯುವಕರ ಜವಾಬ್ದಾರಿಯಾಗಿದ್ದು, ಜನಸಾಮಾನ್ಯರ ಸಮಸ್ಯೆಗಳ ಕುರಿತು ಕಾಂಗ್ರೆಸ್ ಪಕ್ಷ ಸದಾ ಧ್ವನಿಯಾಗಲಿದೆ ಎಂದರು.ಕಾಪು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವೈ.ಸುಕುಮಾರ್ ಮಾತನಾಡಿ, ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ, ಬೆಲೆ ಏರಿಕೆ, ಎಸ್‌ಐಆರ್, ಪೆಟ್ರೋಲ್, ಡೀಸೆಲ್, ಗ್ಯಾಸ್ ಸೇರಿದಂತೆ ದಿನಬಳಕೆಯ ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ನಿಯಂತ್ರಿಸುವಲ್ಲಿ ಕೇಂದ್ರ ಸರಕಾರ ವಿಫಲವಾಗಿದೆ ಎಂದು ಖಂಡಿಸಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದರು.

ಕರಾವಳಿ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಂ.ಎ.ಗಫೂರ್, ಎನ್.ಎಸ್.ಯು.ಐ ಜಿಲ್ಲಾ ಘಟಕದ ಅಧ್ಯಕ್ಷ ಸೌರಭ್ ಬಲ್ಲಾಳ್ ಮಾತನಾಡಿದರು.

ಪ್ರತಿಭಟನೆಯಲ್ಲಿ ಕೆಪಿಸಿಸಿ ಸಂಯೋಜಕ ನವೀನ್ ಚಂದ್ರ ಜೆ.ಶೆಟ್ಟಿ, ಕಾಪು ತಾಲ್ಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ನವೀನ್ ಚಂದ್ರ ಸುವರ್ಣ, ಯುವಕಾಂಗ್ರೆಸ್ ಕಾಪು ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ನಿಯಾಝ್ ಪಡುಬಿದ್ರಿ, ರಮೀಝ್ ಪಡುಬಿದ್ರಿ, ಕಾಪು ಬ್ಲಾಕ್ ಚುನಾವಣಾ ಪ್ರಚಾರ ಸಮಿತಿ ಅಧ್ಯಕ್ಷ ಜಿತೇಂದ್ರ ಪುರ್ಟಾಡೊ, ಕಾಂಗ್ರೆಸ್ ಅಲ್ಪಸಂಖ್ಯಾತ ಘಟಕದ ಜಿಲ್ಲಾ ಅಧ್ಯಕ್ಷ ಶರ್ಫುದ್ದೀನ್ ಶೇಖ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಗೀತಾ ವಾಗ್ಲೆ, ಸಂಯೋಜಕ ಅಬ್ದುಲ್ ಅಜೀಜ್ ಹೆಜಮಾಡಿ, ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷ ದೀಪಕ್ ಎರ್ಮಾಳು, ಜಿಲ್ಲಾ ಯುವ ಕಾಂಗ್ರೆಸ್ ಉಪಾಧ್ಯಕ್ಷರಾದ ಅರ್ಜುನ್ ನಾಯರಿ, ಆತಿಫ್ ಮುದರಂಗಡಿ, ಪಕ್ಷದ ಮುಖಂಡರಾದ ರಾಜೇಶ್ ರಾವ್ ಪಾಂಗಾಳ, ಸುಧೀರ್ ಕರ್ಕೇರ, ಯುವ ಕಾಂಗ್ರೆಸ್ ಮುಖಂಡರಾದ ಅಬ್ದುಲ್ ಲತೀಪ್ ಶಿರ್ವ, ಸುಲಕ್ಷಣ್ ಪೂಜಾರಿ, ಲಿತೇಶ್ ಕಟಪಾಡಿ, ಪುರಸಭಾ ಸದಸ್ಯರು, ಕಾಂಗ್ರೆಸ್ ಪಕ್ಷದ ಮುಖಂಡರು ಪಾಲ್ಗೊಂಡಿದ್ದರು.

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ, ಬೆಲೆ ಏರಿಕೆ,

> ಕೇಂದ್ರ ಸರ್ಕಾರ ವಿದ್ಯಾರ್ಥಿಗಳ ಭವಿಷ್ಯದ ಜತೆ ಚೆಲ್ಲಾಟ ಆಡುತ್ತಿದೆ. ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಯ ಜವಾಬ್ದಾರಿಯನ್ನು ಹೊತ್ತು ಕೇಂದ್ರ ಶಿಕ್ಷಣ ಸಚಿವರು ರಾಜೀನಾಮೆ ನೀಡಬೇಕು. ಕಾಂಗ್ರೆಸ್ ಸರ್ಕಾರ ತಂದ ಸಿಇಟಿ ವ್ಯವಸ್ಥೆಯನ್ನು ಮರಳಿ ಜಾರಿಗೆ ತರಬೇಕು ಎಂದು ಒತ್ತಾಯಿಸಿದರು.
>
> –ವಿನಯ ಕುಮಾರ್ ಸೊರಕೆ

### ಕೇಂದ್ರ ಸರ್ಕಾರದ ನೀತಿಯ ವಿರುದ್ಧ ಘೋಷಣೆ

ಕಾಪು ಪೇಟೆಯಲ್ಲಿ ಜಮಾಯಿಸಿದ ಕಾರ್ಯಕರ್ತರು ಕೇಂದ್ರ ಸರ್ಕಾರದ ನೀತಿಯ ವಿರುದ್ಧ ಘೋಷಣೆ ಕೂಗಿದ ಆಕ್ರೋಶ ವ್ಯಕ್ತಪಡಿಸಿದರು. ದಿಢೀರ್ ರಸ್ತೆ ತಡೆ ನಡೆಸಿದರು. ಈ ವೇಳೆ ಸ್ಥಳಕ್ಕೆ ಬಂದ ಕೆಪಿಸಿಸಿ ಪ್ರಚಾರ ಸಮಿತಿಯ ಅಧ್ಯಕ್ಷ ವಿನಯಕುಮಾರ್ ಸೊರಕೆ ಕಾರ್ಯಕರ್ತರ ಮನವೊಲಿಸಿ ರಸ್ತೆ ತಡೆ ತೆರವುಗೊಳಿಸಿದರು. ಇದರಿಂದ ಕೆಲ ಕಾಲ ವಾಹನ ಸಂಚಾರದಲ್ಲಿ ವ್ಯತ್ಯಯ ಉಂಟಾಯಿತು. ಪ್ರತಿಭಟನೆಯಲ್ಲಿ ಕೆಪಿಸಿಸಿ ಸಂಯೋಜಕ ನವೀನ್ ಚಂದ್ರ ಜೆ.ಶೆಟ್ಟಿ, ಇದ್ದರು.